ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ವಿಶ್ಲೇಷಣೆ - ಬೆಳ್ತಂಗಡಿ ತಾಲೂಕಿನ ಒಂದು ಅಧ್ಯಯನ

ಮಾಸ್ಟರ್ ಆಫ್ ಫಿಲಾಸಫಿ (ಎಂ. ಫಿಲ್) ಪದವಿಯ ಆಂಶಿಕ ಆವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯ ಹಂಪಿ - ಇಲ್ಲಿಗೆ ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು
ಶಶಿಪ್ರಭಾ ಯಸ್. ನಾಯಕ್

ಮಾರ್ಗದರ್ಶಕರು
ಡಾ। ಎ. ಜಯಕುಮಾರ್ ಶೆಟ್ಟಿ
ಪ್ರಾಧ್ಯಾಪಕರು
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ

ಡಾ। ಹಾಮಾನಾ ಸಂಶೋಧನಾ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ

ಏಪ್ರಿಲ್ 2007

ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ವಿಶ್ಲೇಷಣೆ – ಬೆಳ್ತಂಗಡಿ ತಾಲೂಕಿನ ಒಂದು ಅಧ್ಯಯನ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ

ಕನ್ನಡ ವಿಶ್ವವಿದ್ಯಾಲಯ ಹಂಪಿ – ಇಲ್ಲಿಗೆ ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು

ಶಶಿಪ್ರಭಾ ಯನ್. ನಾಯಕ್

ಮಾರ್ಗದರ್ಶಕರು

ಡಾ. ಎ. ಜಯಕುಮಾರ್ ಶೆಟ್ಟಿ

ಪ್ರಾಧ್ಯಾಪಕರು

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು

ಉಜಿರೆ

ಡಾ. ಹಾಮಾನಾ ಸಂಶೋಧನಾ ಕೇಂದ್ರ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು

ಉಜಿರೆ

ಎಪ್ರಿಲ್ 2007

ಪ್ರಮಾಣ ಪತ್ರ

"ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ವಿಶ್ಲೇಷಣೆ - ಬೆಳ್ತಂಗಡಿ ತಾಲೂಕಿನ ಒಂದು ಅಧ್ಯಯನ" ಎಂಬ ಶೀರ್ಷಿಕೆಯ ವಿಷಯದ ಈ ಪ್ರೌಢ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿ - ಇಲ್ಲಿಗೆ ಸಲ್ಲಿಸಲ್ಲೆಂದು ಡಾ. ಎ. ಜಯಕುಮಾರ್ ಶೆಟ್ಟಿ, ಪ್ರಾಧ್ಯಾಪಕರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಈ ಪ್ರೌಢ ಪ್ರಬಂಧದ ವಿಷಯುವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಯಾವುದೇ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ಸ್ಥಳ: ಉಜಿರೆ

ದಿನಾಂಕ: 30.04.2007

ಶಶಿಪ್ರಭಾ ಯನ್. ನಾಯಕ್

ಶಶಿಪ್ರಭಾ ಯನ್. ನಾಯಕ್

ಡಾ. ಎ. ಜಯಕುಮಾರ್ ಶೆಟ್ಟಿ

ಪ್ರಾಧ್ಯಾಪಕರು

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು

ಉಜಿರೆ

ಯೋಗ್ಯತಾ ಪತ್ರ

ಶಶಿಪ್ರಭಾ ಯನ್. ನಾಯಕ್ ಇವರು **"ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ವಿಶ್ಲೇಷಣೆ ಬೆಳ್ತಂಗಡಿ ತಾಲೂಕಿನ ಒಂದು ಅಧ್ಯಯನ"** ಎಂಬ ವಿಷಯದ ಈ ಪ್ರೌಢ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿ, ಇಲ್ಲಿಗೆ ಸಲ್ಲಿಸಲು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಪ್ರೌಢ ಪ್ರಬಂಧವು ಸಂಶೋಧಕರ ಸ್ವಂತ ಸಂಶೋಧನೆಯ ಮೂಲಕ ರೂಪುಗೊಂಡಿದೆ. ಈ ಪ್ರೌಢ ಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಗಾಗಲೀ, ಉದ್ದೇಶಗಳಿಗಾಗಲೀ, ಇವರು ಒಪ್ಪಿಸಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಉಜಿರೆ

ದಿನಾಂಕ: 30.04.2007

ಡಾ. ಎ. ಜಯಕುಮಾರ್ ಶೆಟ್ಟಿ

ಮಾರ್ಗದರ್ಶಕರು

ಅನುಕ್ರಮಣಿಕೆ

ಕೋಷ್ಟಕಗಳ ಪಟ್ಟಿ

ಚಿತ್ರಗಳು, ನಕ್ಷೆ

ಅಧ್ಯಾಯ 1

ಪ್ರಸ್ತಾವನೆ

ಅಧ್ಯಾಯ 1

ಪ್ರಸ್ತಾವನೆ

ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೃಷಿಕ್ಷೇತ್ರದ ಅಭಿವೃದ್ಧಿಯು ರಾಷ್ಟ್ರೀಯ ಬೆಳವಣಿಗೆಯ ಒಂದು ಪ್ರಮುಖ ಅಂಶವಾಗಿದೆ. ಅನೇಕ ಆರ್ಥಿಕ ಮತ್ತು ಆರ್ಥಿಕೇತರ ಅಂಶಗಳು ಕೃಷಿಕ್ಷೇತ್ರದ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಆರ್ಥಿಕ ಅಂಶಗಳಲ್ಲಿ ಉತ್ಪಾದನೆ, ತಂತ್ರಜ್ಞಾನ, ಪರಿಸರ ಹಾಗೂ ಆರ್ಥಿಕೇತರ ಅಂಶಗಳಲ್ಲಿ ಸಾಮಾಜಿಕ ಸಂಘ–ಸಂಸ್ಥೆಗಳು, ಶಿಕ್ಷಣ, ಮತ್ತಿತರ ವಿಷಯಗಳು ಒಳಗೊಂಡಿರುತ್ತವೆ. ಹಾಗಿದ್ದರೂ, ಕೃಷಿಕ್ಷೇತ್ರದ ಸಾಧನೆಯು ಉತ್ಪಾದನಾಂಗಗಳ ನಿರ್ವಹಣೆಯನ್ನು ಒಳಗೊಂಡಿರುತ್ತದೆ. ಕೃಷಿಭೂಮಿ, ಕಾರ್ಮಿಕರು, ಬಂಡವಾಳ, ಸಂಘಟನೆ, ಮುಂತಾದವುಗಳು ಮುಖ್ಯವಾದ ಉತ್ಪಾದನಾಂಗಗಳಾಗಿವೆ. ಕೃಷಿ ಅಭಿವೃದ್ಧಿಯಲ್ಲಿ ಇವುಗಳ ನಿರ್ವಹಣೆ ಬಹಳ ನಿರ್ಣಾಯಕವೆನಿಸುತ್ತವೆ.

ಕೃಷಿ ಸಾಲವು ಎಲ್ಲಾ ಉತ್ಪಾದನಾಂಗಗಳ ಪೈಕಿ ಮುಖ್ಯವಾದುದು. ಕೃಷಿಕ್ಷೇತ್ರವು ಸಾಕಷ್ಟು ಹಿಂದುಳಿದಿದ್ದು, ಆದಾಯವು ಬಹಳ ಕಡಿಮೆ ಪ್ರಮಾಣದಲ್ಲಿ ಬರುವುದರಿಂದ ಸಾಲ ನೀಡಿಕೆ ಅನಿವಾರ್ಯವಾಗಿದೆ. ಇದರ ಪರಿಣಾಮವಾಗಿ ಬಂಡವಾಳ ಹೂಡಿಕೆ ಮತ್ತು ಉಳಿತಾಯ ಕಡಿಮೆಯಾಗುತ್ತದೆ. ರೆಗ್ನಾರ್ ನರ್ಕ್ಸ್‌ನ[1] ಬಡತನದ ವಿಷವರ್ತುಲದ ಅನುಸಾರ, ಕಡಿಮೆ ಆದಾಯ ತರುವ ಉದ್ದಿಮೆಗಳಿಂದ ಅಭಿವೃದ್ಧಿಯ ವೇಗ ಕುಂಟುತ್ತದೆ. ಸರ್ಕಾರದ ಮಧ್ಯ ಪ್ರವೇಶ, ಹಣಕಾಸಿನ ನೀತಿ ಇತ್ಯಾದಿ ಕ್ರಮಗಳು ಆರ್ಥಿಕ ಅಭಿವೃದ್ಧಿಯ ಸಾಧನಗಳಾಗಿ ಕೆಲಸ ಮಾಡುವುದು ಅನಿವಾರ್ಯವಾಗಿದೆ.

ಈ ಸತ್ಯವನ್ನು ಅರಿತು, ಪಂಚವಾರ್ಷಿಕ ಯೋಜನೆಗಳ ಮೂಲಕ ಭಾರತದಲ್ಲಿ ರೈತರಿಗೆ ಕೃಷಿ ಸಾಲವನ್ನು ಒದಗಿಸುವ ಪ್ರಯತ್ನಗಳು ನಡೆದಿವೆ. ಸಾಂಸ್ಥಿಕ ರೂಪದಲ್ಲಿಲ್ಲದ ಸಾಲಗಳ

ದುಷ್ಪರಿಣಾಮಗಳನ್ನು ನಿವಾರಿಸುವ ದೃಷ್ಟಿಯಿಂದ ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಿ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಲಾಯಿತು.

ಕೃಷಿ ಹಣಕಾಸಿನ ಸಮಸ್ಯೆಗಳು

ಹಣಕಾಸು ಪ್ರತಿಯೊಂದು ವ್ಯವಹಾರದ ಜೀವಾಳ. ಕೃಷಿಯು ಅದಕ್ಕೆ ಹೊರತಾಗಿಲ್ಲ. ಉದ್ದಿಮೆದಾರನಿಗಿರುವಂತೆ ರೈತನಿಗೂ ಹಣಕಾಸು ಅತ್ಯವಶ್ಯಕವಾಗಿದೆ. ರೈತನಿಗೆ ಅನೇಕ ಉದ್ದೇಶಗಳಿಗಾಗಿ ಹಣಕಾಸು ಬೇಕಾಗುತ್ತದೆ. ಆಧುನಿಕ ಪದ್ಧತಿಯಿಂದ ಸಾಗುವಳಿ ಮಾಡಲು, ಸುಧಾರಿತ ಬೀಜಗಳನ್ನು ಕೊಳ್ಳಲು, ರಸಗೊಬ್ಬರ ಮತ್ತು ಯಂತ್ರೋಪಕರಣಗಳನ್ನು ಕೊಳ್ಳಲು, ನೀರಾವರಿ ಸೌಲಭ್ಯಗಳನ್ನು ಪಡೆಯಲು, ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು, ಜಮೀನಿನಲ್ಲಿ ತಾತ್ಪೂರ್ತಿಕವಾದ ಇಲ್ಲವೆ, ಶಾಶ್ವತವಾದ ಸುಧಾರಣೆಗಳನ್ನು ಮಾಡಲು ಈ ಮೊದಲಾದ ಉದ್ದೇಶಗಳಿಗಾಗಿ ರೈತನಿಗೆ ಹಣಕಾಸು ಬೇಕಾಗುತ್ತದೆ. ಹೀಗೆ, ಇನ್ನೂ ಅನೇಕ ಉದ್ದೇಶಗಳಿಗಾಗಿ ಅಂದರೆ ಪಿತ್ರಾರ್ಜಿತ ಸಾಲಗಳನ್ನು ತೀರಿಸಲು, ಬೇಸಾಯಕ್ಕೆ ಬೇಕಾಗುವ ಜಾನುವಾರುಗಳನ್ನು ಕೊಳ್ಳಲು ಮತ್ತು ಮನೆಯ ಖರ್ಚಿಗಾಗಿ ಅಂದರೆ ಮದುವೆ, ಮುಂಜಿ, ಇವೇ ಮೊದಲಾದ ಧಾರ್ಮಿಕ ಮತ್ತು ಸಾಮಾಜಿಕ ವೆಚ್ಚಗಳಿಗಾಗಿ ಹಣಕಾಸು ಬೇಕಾಗುತ್ತದೆ.

ಉದ್ದಿಮೆಗಳಿಗೆ ಹಣಕಾಸು ಒದಗಿಸುವ ಮೂಲಗಳು ಅನೇಕವಿದ್ದರೆ, ಕೃಷಿಗೆ ಹಣಕಾಸು ಒದಗಿಸುವ ಮೂಲಗಳು ಮಾತ್ರ ಬಹಳ ಕಡಿಮೆ ಇವೆ. ಉದ್ದಿಮೆದಾರರಿಗೆ ಹಣಕಾಸು ಒದಗಿಸಲು ಅನೇಕ ಸಂಸ್ಥೆಗಳು ಮುಂದಾಗುತ್ತವೆ. ಆದರೆ ಕೃಷಿಗೆ ಹಣಕಾಸನ್ನೊದಗಿಸಲು ಅವೇ ಸಂಸ್ಥೆಗಳು ಹಿಂಜರಿಯುತ್ತವೆ. ಇದಕ್ಕೆ ಕೆಲವು ಕಾರಣಗಳಿವೆ:

1. ರೈತನ ಹಿಡುವಳಿಯು ಚಿಕ್ಕದಾಗಿದ್ದು ಅದರಿಂದ ಬರುವ ವರಮಾನವೂ ಸಹ ಬಹಳ ಕಡಿಮೆಯಾಗಿರುತ್ತದೆ. ಅದು ರೈತನ ಉಪಜೀವನಕ್ಕೆ ಸಾಕಾಗುವಷ್ಟಿರದಿದ್ದರಿಂದ ಅವನಿಗೆ ಸಾಲವನ್ನು ಹಿಂದಿರುಗಿಸಲು ಅಸಾಧ್ಯವಾಗುತ್ತದೆ.

2. ರೈತನು ಪಿತ್ರಾರ್ಜಿತ ಸಾಲಗಳ ಭಾರದಿಂದ ಈಗಾಲೇ ತಗ್ಗಿ ಹೋಗಿರುತ್ತಾನೆ. ಅವನ ಬಳಿ ಆಧಾರವಾಗಿಡಲು ಬೆಲೆಬಾಳುವ ಯಾವುದೇ ಆಸ್ತಿಯಿರುವುದಿಲ್ಲ. ಅವನ ಬಳಿ ಇರುವುದು ಕೇವಲ ಸಾಗುವಳಿ ಜಮೀನು ಮಾತ್ರ. ಆದರೆ ಸಾಲದ ಮರುಪಾವತಿಗಾಗಿ ಅದನ್ನು ಸುಲಭವಾಗಿ ಶೀಘ್ರವಾಗಿ ಮಾರಾಟ ಮಾಡಲು ಸಾಧ್ಯವಿಲ್ಲ.

3. ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮತ್ತು ಸಮಯೋಚಿತವಾಗಿ ಹಣಕಾಸನ್ನೊದಗಿಸಬೇಕಾಗುತ್ತದೆ. ಆದರೆ, ವಾಸ್ತವಿಕವಾಗಿ ಇದು ಸಾಲ ಒದಗಿಸುವ ಸಂಸ್ಥೆಗಳಿಗೆ ಅಸಾಧ್ಯವಾಗುತ್ತದೆ.

4. ರೈತರಿಗೆ ಉತ್ಪಾದಕ ಮತ್ತು ಅನುತ್ಪಾದಕ ಚಟುವಟಿಕೆಗಳಿಗೆ ಹಣಕಾಸು ಬೇಕಾಗುತ್ತದೆ. ಆದರೆ ಅನುತ್ಪಾದಕ ಚಟುವಟಿಕೆಗಳಿಗಾಗಿ ಅವರಿಗೆ ಸಾಲ ನೀಡಿದರೆ ಅವರಿಂದ ಅದನ್ನು ವಸೂಲಿ ಮಾಡುವುದು ಬಹಳ ಕಠಿಣವಾಗುತ್ತದೆ.

5. ಅತಿ ಚಿಕ್ಕ ರೈತರಿಗೆ ಯಾವುದೇ ಆಧಾರವಿಲ್ಲದೆ ಸಾಲ ನೀಡಬೇಕಾಗುತ್ತದೆ. ಆದರೆ, ಸಾಲದ ಭದ್ರತೆಯ ದೃಷ್ಟಿಯಿಂದ ಅವರಿಗೆ ಸಾಲ ನೀಡುವುದು ಅಪಾಯಕಾರಿಯಾಗಿದೆ.

ಹೀಗಾಗಿ ರೈತರಿಗೆ ಸಾಮಾನ್ಯವಾಗಿ ಸಾಲ ಸಿಗುವ ಅವಕಾಶಗಳು ಬಹಳ ಕಡಿಮೆ. ಆದುದರಿಂದ ಭಾರತದಲ್ಲಿ ರೈತರು ಎದುರಿಸುತ್ತಿರುವ ಕೃಷಿ ಹಣಕಾಸಿನ ಮೂರು ವಿಧವಾದ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ:

1. ಹಳೆಯ ಸಾಲಗಳನ್ನು ಕಡಿಮೆ ಮಾಡುವುದು ಅಥವಾ ಪೂರ್ತಿ ಪಾವತಿ ಮಾಡುವುದು
2. ಅನುತ್ಪಾದಕ ಚಟುವಟಿಕೆಗಳಿಗೆ ಸಾಲ ಪಡೆದುಕೊಳ್ಳುವುದನ್ನು ಪ್ರತಿಬಂಧಿಸುವುದು ಮತ್ತು
3. ಉತ್ಪಾದಕ ಚಟುವಟಿಕೆಗಳಿಗೆ ಮಾತ್ರ ಸಾಕಷ್ಟು ಹಣಕಾಸನ್ನು ಒದಗಿಸುವುದು.

ಕೃಷಿ ಸಾಲದ ವಿಧಗಳು

ಭಾರತದ ಕೃಷಿಕರಿಗೆ ಮೂರು ರೀತಿಯ ಸಾಲದ ಅಗತ್ಯವಿದೆ–

ಅಲ್ಪಾವಧಿಯ ಸಾಲ: ಹನ್ನೆರಡರಿಂದ ಹದಿನೈದು ತಿಂಗಳುಗಳ ಅವಧಿಯ ಅಲ್ಪಾವಧಿಯ ಸಾಲ ಸಾಗುವಳಿಯ ವೆಚ್ಚಕ್ಕಾಗಿ ಅಥವಾ ಮನೆಯ ಖರ್ಚಿಗಾಗಿ ಬೇಕಾಗುತ್ತದೆ. ಮುಖ್ಯವಾಗಿ ಬಿತ್ತನೆ ಬೀಜ ಕೊಳ್ಳಲು, ಗೊಬ್ಬರ ಖರೀದಿಸಲು, ಪಶುಗಳ ಆಹಾರ ಕೊಳ್ಳಲು ಅಲ್ಪಾವಧಿಯ ಸಾಲದ ಅಗತ್ಯವಿದೆ. ಬೆಳೆ ಕೊಯ್ಲು ಆದ ಕೂಡಲೇ ಅಲ್ಪಾವಧಿ ಸಾಲದ ಮರುಪಾವತಿಯಾಗುತ್ತದೆ.

ಮಧ್ಯಾವಧಿ ಸಾಲ: ತಿಂಗಳುಗಳಿಂದ 5 ವರ್ಷಗಳವರೆಗಿನ ಅವಧಿಯ ಸಾಲ ಮಧ್ಯಾವಧಿ ಸಾಲ ಎಂದು ಕರೆಯಲ್ಪಡುತ್ತದೆ. ಮಧ್ಯಾವಧಿ ಸಾಲ ಜಾನುವಾರುಗಳನ್ನು ಕೊಳ್ಳಲು, ಕೃಷಿ ಸಾಮಾಗ್ರಿಗಳನ್ನು ಕೊಳ್ಳಲು, ಬಾವಿ, ಕೆರೆ, ಇತ್ಯಾದಿಗಳ ದುರಸ್ತಿಗೆ ಬೇಕಾಗುತ್ತದೆ. ಮಧ್ಯಾವಧಿ ಸಾಲದ ಉದ್ದೇಶ ಭೂಹಿಡುವಳಿಯಲ್ಲಿ ಕೆಲವು ಸಣ್ಣ ಪುಟ್ಟ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದು.

ದೀರ್ಘಾವಧಿ ಸಾಲ: 5 ವರ್ಷಗಳಿಂದ 20 ವರ್ಷಗಳ ಅವಧಿಯವರೆಗಿನ ಸಾಲವನ್ನು ದೀರ್ಘಾವಧಿ ಸಾಲ ಎಂದು ಕರೆಯಲ್ಪಡುತ್ತದೆ. ದೀರ್ಘಾವಧಿ ಸಾಲದ ಉದ್ದೇಶ, ಜಮೀನಿನಲ್ಲಿ ಶಾಶ್ವತವಾದ ಸುಧಾರಣೆಗಳನ್ನು ಮಾಡುವುದಾಗಿದೆ. ಬಾವಿ ಅಥವಾ ಕೆರೆ ತೋಡುವುದು, ಪಂಪ್‌ಸೆಟ್ಟು ಕೊಳ್ಳುವುದು, ಸ್ಪ್ರಿಂಕ್ಲರ್ ಖರೀದಿ, ಟಿಲ್ಲರ್, ಟ್ರಾಕ್ಟರ್, ಹಾರ್ವೆಸ್ಟರ್, ಇತ್ಯಾದಿಗಳನ್ನು ಕೊಳ್ಳುವುದು, ಹಳೆ ಸಾಲ ತೀರಿಸುವುದು, ಹೊಸ ಭೂಮಿಯನ್ನು ಕೊಳ್ಳುವುದು ಇತ್ಯಾದಿ ಉದ್ದೇಶಗಳು ದೀರ್ಘಾವಧಿ ಸಾಲಕ್ಕೆ ಇರುತ್ತವೆ.

ಕೃಷಿ ಸಾಲದ ಮೂಲಗಳು

ಭಾರತದ ಬಹುತೇಕ ರೈತರು ಬಡವರಾಗಿರುವುದರಿಂದ ವ್ಯವಸಾಯಕ್ಕೆ ಹಣಕಾಸಿನ ಸೌಲಭ್ಯ ಅಗತ್ಯವಾಗಿ ಬೇಕಾಗುತ್ತದೆ. ಭಾರತದ ರೈತ ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲಿ ಸತ್ತು, ಸಾಲವನ್ನೇ ತನ್ನ ಉತ್ತರಾಧಿಕಾರಿಗಳಿಗೆ ಪಿತ್ರಾರ್ಜಿತ ಆಸ್ತಿಯಾಗಿ ನೀಡುತ್ತಾನೆ

ಎನ್ನುವ ಮಾತು ಕೃಷಿಗೆ ಹಣಕಾಸು ಸೌಲಭ್ಯದ ಅಗತ್ಯವನ್ನೂ, ಗ್ರಾಮೀಣ ಋಣಭಾರವನ್ನೂ, ತಿಳಿಸುತ್ತದೆ. ಭಾರತದಲ್ಲಿ ಕೃಷಿ ಸಾಲದ ಮೂಲಗಳನ್ನು 1. ಸಾಂಸ್ಥಿಕ ಮೂಲ ಮತ್ತು 2. ಅಸಾಂಸ್ಥಿಕ ಮೂಲ ಎಂದು ಎರಡು ವಿಭಾಗಗಳಾಗಿ ವಿಂಗಡಿಸಲಾಗುತ್ತದೆ.

1. ಸಾಂಸ್ಥಿಕ ಮೂಲಗಳು

ಸಂಸ್ಥೆಗಳು ಕೃಷಿಗೆ ನೀಡುವ ಸಾಲವನ್ನು ಸಾಂಸ್ಥಿಕ ಮೂಲದ ಸಾಲಗಳು ಎಂದು ಕರೆಯಲಾಗುತ್ತದೆ. ಭಾರತದಲ್ಲಿ ಸಾಂಸ್ಥಿಕ ಸಾಲದ ಮೂಲಗಳು ಯಾವುದೆಂದರೆ: 1. ಭೂ ಅಭಿವೃದ್ಧಿ ಬ್ಯಾಂಕುಗಳು 2. ಗ್ರಾಮೀಣ ಸಹಕಾರಿ ಸಾಲ ಸಂಘಗಳು 3. ಸರಕಾರಿ (ತಕ್ಕಾವಿ) ಸಾಲ 4. ಗ್ರಾಮೀಣ ಬ್ಯಾಂಕುಗಳು 5. ವಾಣಿಜ್ಯ ಬ್ಯಾಂಕುಗಳು 6. ಭಾರತೀಯ ಸ್ಟೇಟು ಬ್ಯಾಂಕುಗಳು 7. ಭಾರತೀಯ ರಿಸರ್ವ್ ಬ್ಯಾಂಕು 8. ಕೃಷಿ ಮರುಸಾಲ ನಿಗಮ ಹಾಗೂ 9. ನಬಾರ್ಡ್ ಸಂಸ್ಥೆ – ಈ ಸಂಸ್ಥೆಗಳು ಕೃಷಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ಸಾಲ ನೀಡುತ್ತವೆ.

2. ಅಸಾಂಸ್ಥಿಕ ಮೂಲಗಳು

ವ್ಯಕ್ತಿಗಳಿಂದ ಕೃಷಿಗೆ ದೊರೆಯುವ ಸಾಲ ಅಸಾಂಸ್ಥಿಕ ಮೂಲದ ಸಾಲ ಎನಿಸಲ್ಪಡುತ್ತದೆ. ಅಸಾಂಸ್ಥಿಕ ಸಾಲವು ಈ ಕೆಳಗಿನವರಿಂದ ದೊರೆಯುತ್ತದೆ. 1. ವೃತ್ತಿಪರ ಮತ್ತು ಕೃಷಿ ಸಾಲದಾತರು 2. ವ್ಯಾಪಾರಿಗಳು ಮತ್ತು ಕಮೀಷನ್ ಏಜಂಟರುಗಳು 3. ಭೂಮಾಲಿಕರು ಹಾಗೂ 4. ಸಂಬಂಧಿಕರು ಮತ್ತು ಸ್ನೇಹಿತರು.

ವೃತ್ತಿಪರ ಮತ್ತು ಕೃಷಿ ಸಾಲದಾತರು: ವೃತ್ತಿಪರ ಮತ್ತು ಕೃಷಿ ಸಾಲದಾತರು ಬೇಸಾಯಕ್ಕೆ ಮಾತ್ರವಲ್ಲದೆ, ಗೃಹ ಕೃತ್ಯಗಳಿಗಾಗಿಯೂ ಸಾಲ ನೀಡುತ್ತಾರೆ. 1950-51 ರಲ್ಲಿ ಕೃಷಿ ಸಾಲದ 70% ಭಾಗ ಸಾಲದಾತರಿಂದಲೇ ಬರುತ್ತಿತ್ತು. ಹಣ ಸಾಲದಾತರು ಕೃಷಿಕರನ್ನು ಸಿಕ್ಕಾಪಟ್ಟೆ ಶೋಷಿಸುವುದರಿಂದ ಸರಕಾರ ಅನೇಕ ಶಾಸನಬದ್ಧ ಕ್ರಮಗಳನ್ನು ಕೈಗೊಂಡು ಹಣ ಸಾಲದಾತರ

ಪ್ರಾಮುಖ್ಯತೆಯನ್ನು ಕಡಿಮೆ ಮಾಡಿದೆ. ಹಣ ಸಾಲ ನೀಡುವುದನ್ನೇ ವೃತ್ತಿಯಾಗಿಸಿಕೊಂಡ ಸಾಲದಾತರ ಮಹತ್ವ 1969 ರ ಬಳಿಕ ಇಲ್ಲವಾಗಿದೆ.

ವ್ಯಾಪಾರಿಗಳು ಮತ್ತು ಕಮೀಷನ್ ಏಜಂಟರುಗಳು: ವ್ಯಾಪಾರಿಗಳು ಮತ್ತು ಕಮೀಷನ್ ಏಜಂಟುರುಗಳು ಬೆಳೆಗಳ ಆಧಾರದ ಮೇಲೆ ಕೃಷಿ ಸಾಲ ನೀಡುತ್ತಾರೆ. ರೈತರ ಒಟ್ಟು ಸಾಲದ ಅಗತ್ಯದಲ್ಲಿ ಇವರ ಪಾಲು 2% ಮಾತ್ರ.

ಭೂಮಾಲಿಕರು: ಗೇಣಿದಾರರಿಗೆ ಭೂಮಾಲಿಕರು ಅಧಿಕ ಬಡ್ಡಿಯ ದರದಲ್ಲಿ ಕೃಷಿಸಾಲ ಒದಗಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಕೃಷಿ ಸಾಲದಲ್ಲಿ ಭೂಮಾಲಿಕರ ಪಾತ್ರ ತೀರಾ ಕಡಿಮೆಯಾಗಿದೆ.

ಬಂಧು ಬಾಂಧವರು: ಬಂಧು ಬಾಂಧವರಿಂದ ಮತ್ತು ಸ್ನೇಹಿತರಿಂದಲೂ ರೈತರು ಅಗತ್ಯ ಬಂದಾಗ ಸಾಲ ಪಡೆದುಕೊಳ್ಳುತ್ತಾರೆ. ಇಂತಹ ಸಾಲದ ಪ್ರಮಾಣ ಸುಮಾರು 10% ರಷ್ಟಿದೆ.

ಅಸಾಂಸ್ಥಿಕ ಮೂಲಗಳ ಸಾಲದ ದೋಷಗಳು:

ಅಸಾಂಸ್ಥಿಕ ಮೂಲದ ಸಾಲಗಳು ದೋಷಯುಕ್ತವಾಗಿವೆ: 1. ಬಡ್ಡಿಯ ದರವು ವಿಪರೀತವಾಗಿ ಹೆಚ್ಚಿರುತ್ತದೆ. 2. ಪ್ರಾಮಿಸರಿ ನೋಟು, ಬಾಂಡು ಪತ್ರ, ಇತ್ಯಾದಿಗಳಲ್ಲಿ ಮುಂಚಿತವಾಗಿಯೇ ಸಹಿ ಪಡೆದುಕೊಂಡು ಸಾಲದಾತರು ಸಾಲಗಾರರನ್ನು ವಂಚಿಸುತ್ತಾರೆ. 3. ಸಾಲದಾತರು ಸರಿಯಾಗಿ ಸರಕಾರಕ್ಕೆ ಲೆಕ್ಕಪತ್ರ ಒಪ್ಪಿಸುವುದಿಲ್ಲ. 4. ಕೃಷಿಕರು ಸದಾಕಾಲ ಸಾಲದಾತರ ಕೃಪಾಭಿಕ್ಷೆಯಲ್ಲೇ ಜೀವನ ಸಾಗಿಸಬೇಕಾಗುತ್ತದೆ. 5. ಅಸಾಂಸ್ಥಿಕ ಸಾಲವು ಜೀತ ಪದ್ಧತಿಗೆ ಕಾರಣವಾಗಿದೆ.

ಅಸಾಂಸ್ಥಿಕ ಸಾಲ ದೋಷಪೂರ್ಣವಾಗಿದ್ದರೂ, ಕೃಷಿಸಾಲದಲ್ಲಿ ಸಾಂಸ್ಥಿಕ ಸಾಲಕ್ಕಿಂತ ಹೆಚ್ಚಿನ ಪಾಲನ್ನು ಇಂದಿಗೂ ಪಡೆದಿದೆ. ಕೃಷಿ ಸಾಲ ಸಂಸ್ಥೆಗಳು ಅಸಾಂಸ್ಥಿಕ ಮೂಲಗಳನ್ನು

ಪೂರ್ಣವಾಗಿ ತೊಡೆದುಹಾಕುವಲ್ಲಿ ವಿಫಲವಾಗಿವೆ. ಅಸಾಂಸ್ಥಿಕ ಮೂಲಗಳನ್ನು ದೋಷರಹಿತವಾಗಿಸಿದರೆ ಕೃಷಿವಲಯದ ಅನೇಕ ಸಮಸ್ಯೆಗಳು ನಿವಾರಣೆಯಾಗುತ್ತವೆ.

ಕೃಷಿ ಸಾಲದ ಸಾಂಸ್ಥಿಕ ಮೂಲಗಳು

ಕೃಷಿಗೆ ಅನೇಕ ಸಂಸ್ಥೆಗಳು ಸಾಲ ನೀಡುತ್ತವೆ. ಸಂಸ್ಥೆಗಳಿಂದ ದೊರೆಯುವ ಸಾಲವು ಸಾಂಸ್ಥಿಕ ಸಾಲ ಎನಿಸಿದೆ. ಗ್ರಾಮೀಣ ಸಹಕಾರಿ ಸಂಘಗಳು, ಭೂ ಅಭಿವೃದ್ಧಿ ಬ್ಯಾಂಕುಗಳು, ಸರಕಾರ ಗ್ರಾಮೀಣ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು, ಸ್ಟೇಟ್ ಮತ್ತು ರಿಸರ್ವ್ ಬ್ಯಾಂಕುಗಳು, ಕೃಷಿ ಪುನರ್‌ಸಾಲ ಮತ್ತು ಅಭಿವೃದ್ಧಿ ಕಾರ್ಪೋರೇಶನ್, ನಬಾರ್ಡ್ ಮುಂತಾದವುಗಳು ಸಾಂಸ್ಥಿಕ ಸಾಲವನ್ನು ಕೃಷಿಗೆ ಒದಗಿಸುತ್ತವೆ.

ಕೃಷಿ ಕ್ಷೇತ್ರದ ಬಂಡವಾಳ ಹೂಡಿಕೆಗೆ ಬೇಕಾದ ಹಣಕಾಸನ್ನು ಪೂರೈಸುವಲ್ಲಿ ಸಾಂಸ್ಥಿಕವಲ್ಲದ ಹಣಕಾಸಿನ ಮೂಲಗಳು ಹೆಚ್ಚು ಪ್ರಬಲವಾಗಿದ್ದವು. ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ಲೇವಾದೇವಿಗಾರರು, ಶ್ರೀಮಂತ ಕೃಷಿಕರು ಹೀಗೆ ಸಾಂಸ್ಥಿಕವಲ್ಲದ ಹಣಕಾಸು ಮೂಲಗಳನ್ನು ರೈತರು ಹೆಚ್ಚು ಅವಲಂಬಿಸಿರುತ್ತಿದ್ದರು. ಈ ವ್ಯವಸ್ಥೆಯಲ್ಲಿ ಅನೇಕ ನ್ಯೂನತೆಗಳಿದ್ದುವು. ಬಡ್ಡಿದರ ಹೆಚ್ಚಳ, ಅವಿದ್ಯಾವಂತ ರೈತರ ಶೋಷಣೆ, ಅಡವಿಟ್ಟ ಆಸ್ತಿಗಳನ್ನು ಮುಟ್ಟುಗೋಲು ಹಾಕುವುದು, ಇತ್ಯಾದಿಗಳಿಂದ ರೈತ ಸಮುದಾಯವು ತೊಂದರೆಗೊಳಗಾಯಿತು. ಇದರಿಂದಾಗಿ ಪಂಚವಾರ್ಷಿಕ ಯೋಜನೆಗಳನ್ನು ಕೃಷಿ ಮತ್ತು ಗ್ರಾಮೀಣ ಹಣಕಾಸು ವ್ಯವಸ್ಥೆಯನ್ನು ಸಾಂಸ್ಥಿಕ ಚೌಕಟ್ಟಿನೊಳಗೆ ಕಟ್ಟಲು ಅನೇಕ ಪ್ರಯತ್ನಗಳನ್ನು ಮಾಡಲಾಯಿತು.

ಗ್ರಾಮೀಣ ಪ್ರದೇಶಗಳಲ್ಲಿ ಸಾಲದ ವ್ಯವಹಾರ ಹೆಚ್ಚಿತು. ಆ ಬಳಿಕ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಮತ್ತು ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್)ಗಳ ಸ್ಥಾಪನೆಯಾಯಿತು. ಇವುಗಳ ಉದ್ದೇಶ ಒಂದೇ ಗ್ರಾಮೀಣ ಸಾಲವನ್ನು ಸಾಂಸ್ಥಿಕವಾಗಿ ವಿಸ್ತರಿಸುವುದು.

ಕೃಷಿಸಾಲವನ್ನು ನೀಡುವ ಸಹಕಾರಿ ಸಂಘಗಳನ್ನು ಭಾರತದಾದ್ಯಂತ ಬಲಿಷ್ಠವಾದ ಜಾಲದಲ್ಲಿ ವಿಸ್ತರಿಸಲಾಗಿದೆ. ರಾಜ್ಯಮಟ್ಟದಲ್ಲಿ ರಾಜ್ಯ ಕೃಷಿ ಸಾಲ ಸಹಕಾರಿ ಸಂಘಗಳು (ಅಪೆಕ್ಸ್ ಬ್ಯಾಂಕ್‌ಗಳು), ಜಿಲ್ಲಾಮಟ್ಟದಲ್ಲಿ ಕೇಂದ್ರ ಸಹಕಾರಿ ಬ್ಯಾಂಕುಗಳು ಮತ್ತು ಗ್ರಾಮಮಟ್ಟದಲ್ಲಿ ಪ್ರಾಥಮಿಕ ವ್ಯವಸಾಯ ಸೇವಾ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಕೃಷಿಕರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ವಿತರಿಸುವ ವ್ಯವಸ್ಥೆಮಾಡಲಾಗಿದೆ.

ಸಾಲವು ಗ್ರಾಮಾವೃದ್ಧಿಯ ಉತ್ಪಾದನಾಂಗ ಅಂಶಗಳಲ್ಲಿ ಒಂದು. ಬಡತನ ನಿವಾರಣೆ ಆಗಬೇಕಿದ್ದರೆ, ರೈತರಿಗೆ ಕೊಡುವ ಸಾಲಕ್ಕೆ ಸಾಂಸ್ಥಿಕ ರೂಪ ಇರಬೇಕಾಗುತ್ತದೆ. ಸಾಲ ಮರುಪಾವತಿಯ ಸಮಸ್ಯೆಯಿಂದಾಗಿ ಬಾಕಿ ಮೊತ್ತವು ಹೆಚ್ಚಿ ಅನೇಕ ಸಮಸ್ಯೆಗಳಿಗೆ ಕಾರಣವಾಗುವುದನ್ನು ಗಮನಿಸಲಾಗಿದೆ. ನಿಧಾನವಾಗಿ ಹೆಚ್ಚುವ ಸಾಲಬಾಕಿ ಹಾಗೂ ಅಸಮರ್ಪಕವಾದ ಸಾಲ ವಸೂಲಾತಿ ಕ್ರಮ ಬ್ಯಾಂಕಿಂಗ್ ಕ್ಷೇತ್ರಕ್ಕೆ ಮಾರಕವಾಗಿದೆ. ಕೃಷಿ ಸಾಲ ವ್ಯವಸ್ಥೆಯನ್ನು ಈ ಕೆಳಗಿನ ಅನೇಕ ಅಂಶಗಳು ದುರ್ಬಲಗೊಳಿಸುತ್ತಿವೆ;

1. ಅಸಮರ್ಪಕ ವ್ಯವಸ್ಥೆ ಅಥವಾ ಸಾಲಗಾರರನ್ನು ಗುರುತಿಸುವಲ್ಲಿ ಹಾಗೂ ಆಯ್ಕೆ ಮಾಡುವಲ್ಲಿ ಪರ್ಯಾಪ್ತ ವಿಧಾನಗಳನ್ನು ಅನುಸರಿಸುತ್ತಿಲ್ಲ.
2. ಸಾಲದ ಸಮರ್ಪಕ ಬಳಕೆ ಆಗುತ್ತಿದೆಯೇ? ಎಂಬುದನ್ನು ಸರಿಯಾಗಿ ಉಸ್ತುವಾರಿ ಮಾಡುತ್ತಿಲ್ಲ.
3. ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ಸಾಕಷ್ಟು ತರಬೇತಿ ಹಾಗೂ ಸೌಲಭ್ಯ ನೀಡುತ್ತಿಲ್ಲ. ಬ್ಯಾಂಕ್ ಮತ್ತು ಸಾಲಗಾರರ ಮಧ್ಯೆ ಸೌಹಾರ್ದ ಸಂಬಂಧ ಬೆಳೆದಿಲ್ಲ.
4. ಪ್ರಾಕೃತಿಕ ವಿಕೋಪಗಳಾದ ಬರ, ನೆರೆ ಹಾಗೂ ಭೂಕಂಪ ಇತ್ಯಾದಿ.
5. ಉತ್ಪಾದನಾ ಘಟಕಗಳ ಕಾರ್ಯವಿಧಾನದಲ್ಲಿ ಕ್ಷಮತೆಯ ಕೊರತೆ, ಪಾರಂಪರಿಕ ಉತ್ಪಾದನಾ ವಿಧಾನಗಳು ಹಾಗೂ ಸಣ್ಣ ಹಿಡುವಳಿಗಳು.

ಕೃಷಿ ಸಾಲದ ವ್ಯವಸ್ಥೆಯನ್ನು ಸುಧಾರಿಸಲು ಇದು ಸೂಕ್ತ ಸಮಯವಾಗಿದೆ. ಸಾಲನೀಡಿಕೆಯ ವಿಧಾನಗಳನ್ನು ಬದಲಾಯಿಸಬಹುದು. ಸಾಲದ ಅಗತ್ಯವನ್ನು

ಪರಾಮರ್ಶಿಸಬಹುದು. ಸಕಾಲದಲ್ಲಿ ರೈತರು ಸಾಲವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು.

ಬಡರೈತರಿಗೆ ಅಗತ್ಯವಿರುವ ಸಾಲವನ್ನು ನೀಡಲು ಬ್ಯಾಂಕುಗಳು ಅಸಮರ್ಥವಾದ ಸಂದರ್ಭವು ಕಿರು ಆರ್ಥಿಕ ಮತ್ತು ಸಣ್ಣ ಮೊತ್ತದ ಸಾಲ ನೀಡುವ ಸಂಸ್ಥೆಗಳ ಉಗಮಕ್ಕೆ ಕಾರಣವಾಯಿತು. ಬಡಜನರಿಗೆ ಇದು ಸೂಕ್ತ ಪರ್ಯಾಯವಾಗಿದೆ. ಸಾಮಾನ್ಯವಾಗಿ ಹಣಕಾಸು ಸಂಸ್ಥೆಗಳು ಉತ್ಪಾದಕ ಚಟುವಟಿಕೆಗಳಿಗೆ ಮಾತ್ರ ಸಾಲ ನೀಡುತ್ತವೆ. ಆದರೆ ಕೆಲವು ಬಾರಿ ಬಡಜನರಿಗೆ ಉಣಲಿಕ್ಕೆ, ಉಡಲಿಕ್ಕೆ, ಹಾಗೂ ತುರ್ತು ಸಂದರ್ಭಗಳಲ್ಲಿ ಹಣದ ಅವಶ್ಯಕತೆ ಇರುತ್ತದೆ. ಬಡತನ ನಿವಾರಣೆಯ ಸರ್ಕಾರದ ಕಾರ್ಯಕ್ರಮಗಳಲ್ಲಿ, ಹಣಕಾಸು ಸಂಸ್ಥೆಗಳ ಸಾಲವಿತರಣಾ ವ್ಯವಸ್ಥೆಯಲ್ಲಿ, ಹಾಗೂ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮಗಳಲ್ಲಿ ಇದಕ್ಕೆ ಅವಕಾಶವಿರುವುದಿಲ್ಲ. ಬಡಜನರಿಗೆ ಸೂಕ್ತ ಭದ್ರತೆ ನೀಡಲು ಹಾಗೂ ಅಡಮಾನಮಾಡಲು ಭೂಮಿ ಇಲ್ಲದೆ ಇರುವುದರಿಂದ ಭಾರತದಲ್ಲಿ ಅವರಿಗೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವುದು ದುಸ್ತರವಾಗಿದೆ. ಬಡತನ ನಿವಾರಿಸುವ ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳನ್ನು ಸ್ಥಳೀಯ ಜನರ ಸಹಭಾಗಿತ್ವವಿಲ್ಲದೆ ಅಧಿಕಾರಿ ಮಟ್ಟದಲ್ಲಿ ರೂಪಿಸಲಾಗಿದೆ. ಹಾಗಾಗಿ ಬಡಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಅವುಗಳಿಗೆ ಕಷ್ಟವಾಗಿದೆ. ಬಡಜನರ ಉದ್ಧಾರಕ್ಕೆಂದೇ ರೂಪುಗೊಂಡಿದ್ದರೂ ಈ ಯೋಜನೆಗಳನ್ನು ರೂಪಿಸುವಲ್ಲಿ ಹಾಗೂ ಅನುಷ್ಠಾನಗೊಳಿಸುವುದರಲ್ಲಿ ಸಮುದಾಯದ ಸಹಭಾಗಿತ್ವವಿಲ್ಲದೆ ಅವುಗಳು ನಿರೀಕ್ಷೆಯಷ್ಟು ಯಶಸ್ವಿಯಾಗಲಿಲ್ಲ. ಈ ನಿಟ್ಟಿನಲ್ಲಿ ಕಿರು ಆರ್ಥಿಕ ಸಾಲಗಳು ಅಥವಾ ಗುಂಪುಸಾಲಗಳು ಬಡತನ ನಿವಾರಿಸುವ ಹಾಗೂ ಕೃಷಿ ಅಭಿವೃದ್ಧಿಯನ್ನು ಸಾಧ್ಯಗೊಳಿಸುವ ಮಂತ್ರದಂಡವೆಂದು ಪರಿಗಣಿಸಲಾಗಿದೆ.

ಈ ಹಿನ್ನಲೆಯಲ್ಲಿ ಸಹಕಾರಿ ಬ್ಯಾಂಕುಗಳು ಮಹತ್ವವನ್ನು ಪಡೆಯುತ್ತವೆ. ಆದರೆ ಸಹಕಾರಿ ಸಂಸ್ಥೆಗಳು ಸ್ಥಳೀಯವಾಗಿ ಕಾರ್ಯನಿರ್ವಹಿಸುವಲ್ಲಿ ಅದರದ್ದೇ ಆದ ಸಮಸ್ಯೆಗಳನ್ನು ಹೊಂದಿವೆ. ಅವುಗಳ ಸಾಮರ್ಥ್ಯವನ್ನು ವಿಶ್ಲೇಷಿಸುವುದು, ಅದಕ್ಕೆ ಕಾರಣವಾದ ಅಂಶಗಳನ್ನು ಗುರುತಿಸುವುದು ಅಗತ್ಯವಾಗಿದೆ.

ಹಣಕಾಸು ಪ್ರತಿಯೊಂದು ಆರ್ಥಿಕ ಚಟುವಟಿಕೆಯ ಜೀವಾಳವಾಗಿದೆ. ಕೈಗಾರಿಕೆಗೆ ಅದು ಹೇಗೆ ಅತ್ಯವಶ್ಯಕವಾಗಿದೆಯೋ, ವ್ಯವಸಾಯಕ್ಕೂ ಅದು ಅಷ್ಟೇ ಅತ್ಯವಶ್ಯಕವಾಗಿದೆ. ಆದರೆ ವ್ಯವಸಾಯಕ್ಕೆ ಸಾಕಾಗುವಷ್ಟು ಹಣಕಾಸನ್ನೊದಗಿಸುವುದು ಕ್ಲಿಷ್ಟಮಯವಾದ ಸಮಸ್ಯೆಯಾಗಿದೆ. ಬಹುಕಾಲದವರೆಗೆ ಒಕ್ಕಲುತನಕ್ಕೆ ಹಣಕಾಸನ್ನೊದಗಿಸುವ ಪ್ರಮುಖ ಮೂಲವೆಂದರೆ ಖಾಸಗಿ ಲೇವಾದೇವಿ ವ್ಯವಹಾರಸ್ಥರೇ ಆಗಿದ್ದರು. ಆದರೆ ಈ ಮೂಲವು ರೈತರಿಗೆ ಬೇಕಾಗುವಷ್ಟು ಸಾಲವನ್ನು ನೀಡಲು ಅಸಮರ್ಥವಾಗಿತ್ತಲ್ಲದೆ ಅದು ಬಹಳ ದುಬಾರಿಯದಾಗಿತ್ತು. ಏಕೆಂದರೆ ಅವರು ವಿಧಿಸುವ ಬಡ್ಡಿದರವು ಬಹಳ ಹೆಚ್ಚಾಗಿತ್ತು. ಅಲ್ಲದೆ ಅವರು ಸಾಲ ನೀಡುವ ಕರಾರುಗಳು ಬಹಳಷ್ಟು ಕಠೋರವಾಗಿದ್ದವು. ಖಾಸಗಿ ಲೇವಾದೇವಿ ವ್ಯವಹಾರಸ್ಥರಿಂದ ಒಮ್ಮೆ ಸಾಲಪಡೆದ ರೈತರು ಕೊನೆಯವರೆಗೂ ಸಾಲದಲ್ಲಿಯೇ ಮುಳುಗಿ ಹೋಗುವಂಥ ಪರಿಸ್ಥಿತಿ ಉಂಟಾಗುತ್ತಿತ್ತು. ಭಾರತವು ಸ್ವತಂತ್ರವಾದನಂತರ, ನಮ್ಮದೇ ಆದ ಸರಕಾರವು ರೈತರ ಈ ದುಸ್ಥಿತಿಯನ್ನು ನಿವಾರಿಸಲು ಹಾಗೂ ಅವರಿಗೆ ಅಗ್ಗ ದರದಲ್ಲಿ ಸಾಲವನ್ನೊದಗಿಸಲು ಹಲವಾರು ಕ್ರಮಗಳನ್ನು ಕೈಕೊಂಡಿತು. ಇದಕ್ಕಾಗಿ ಸಹಕಾರಿ ಸಂಘಗಳನ್ನು ಬಲಪಡಿಸಲು ವಾಣಿಜ್ಯ ಬ್ಯಾಂಕುಗಳಿಂದ ರೈತರು ಸಾಲ ಪಡೆಯುವಂತೆ ಮಾಡಲು ಮಹತ್ವದ ಕ್ರಮಗಳನ್ನು ಕೈಕೊಂಡಿತು. ಅಲ್ಲದೆ ರೈತರ, ಮುಖ್ಯವಾಗಿ ಗ್ರಾಮೀಣ ಜನರ, ಸರ್ವಾಂಗೀಣ ಅಭಿವೃದ್ಧಿಗಾಗಿ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲು ಹಾಗೂ ಈ ಗ್ರಾಮೀಣ ಬ್ಯಾಂಕುಗಳಿಗೂ ಮತ್ತು ವಾಣಿಜ್ಯ ಬ್ಯಾಂಕುಗಳಿಗೂ ಕೃಷಿ-ಹಣಕಾಸನ್ನೊದಗಿಸಲು ವಿಶೇಷ ಹಣಕಾಸಿನ ಸಂಸ್ಥೆಗಳನ್ನು ಸ್ಥಾಪಿಸಿತು. ರೈತರನ್ನು ಖಾಸಗಿ ಲೇವಾದೇವಿ ವ್ಯವಹಾರಸ್ಥರ ಕಪಿಮುಷ್ಟಿಯಿಂದ ಮುಕ್ತ ಮಾಡುವುದು, ರೈತರಿಗೆ ಸಾಕಷ್ಟು ಪತ್ತನ್ನು ಯೋಗ್ಯ ಬಡ್ಡಿದರದಿಂದ ನೀಡುವುದು, ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಸಮಯೋಚಿತವಾಗಿ ಪತ್ತನ್ನು ನೀಡುವುದು ಹಾಗೂ ಮುಖ್ಯವಾಗಿ ಸಮಾಜದ ಬಡವರ್ಗದವರಿಗೂ ಹಾಗೂ ಹಿಂದುಳಿದ ಪ್ರದೇಶಗಳಿಗೂ ಪತ್ತು ಸುಲಭವಾಗಿ ಹರಿದುಹೋಗುವಂತೆ ಮಾಡುವುದು ಸರಕಾರದ ಕೃಷಿ ಹಣಕಾಸಿನ ರಾಷ್ಟ್ರೀಯ ನೀತಿಯ ಪ್ರಮುಖ ಉದ್ದೇಶಗಳಾಗಿದ್ದವು.

ಈ ಉದ್ದೇಶಗಳನ್ನು ಈ ಕೆಳಗಿನಂತೆ ಸ್ಪಷ್ಟಪಡಿಸಬಹುದು:

1. ಕೃಷಿ ವಲಯಕ್ಕೆ ಸಮಯೋಚಿತವಾಗಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ಪತ್ತು ಲಭ್ಯವಾಗುವಂತೆ ಮಾಡುವುದು. ಇದಕ್ಕಾಗಿ ಸಹಕಾರಿ ಸಂಘಗಳನ್ನು ಬಲಪಡಿಸುವುದು.

2. ಗ್ರಾಮೀಣ ಪ್ರದೇಶಗಳಿಂದ ಖಾಸಗಿ ಲೇವಾದೇವಿ ವ್ಯವಹಾರಸ್ಥರನ್ನು ಕ್ರಮೇಣ ಉಚ್ಚಾಟಿಸುವುದು ಹಾಗೂ ಅವರ ಕಪಿಮುಷ್ಟಿಯಿಂದ ರೈತರನ್ನು ಮುಕ್ತಮಾಡುವುದು. ಇದಕ್ಕಾಗಿ ಕಾನೂನಿನ ಕ್ರಮಗಳನ್ನು ತಗೆದುಕೊಳ್ಳುವುದು.

3. ಕೃಷಿ ಪತ್ತು ದೇಶದ ಎಲ್ಲ ಭಾಗಗಳಲ್ಲಿಯೂ ಏಕರೂಪವಾಗಿ ಸುಲಭವಾಗಿ ಲಭ್ಯವಾಗುವಂತೆ ಮಾಡಿ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವುದು. ಇದಕ್ಕಾಗಿ ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳ ಮೂಲಕ ಪತ್ತಿನ ವ್ಯವಸ್ಥೆ ಮಾಡುವುದು.

4. ಕೃಷಿ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಕೈಗೊಂಡ ಪ್ರದೇಶಗಳಲ್ಲಿ ಪತ್ತಿನ ಸೌಲಭ್ಯಗಳು ಅಧಿಕ ಪ್ರಮಾಣದಲ್ಲಿ ಲಭ್ಯವಾಗುವಂತೆ ಮಾಡುವುದು. ಈ ವಿಶೇಷ ಕಾರ್ಯಕ್ರಮಗಳು ಯಾವುದೆಂದರೆ ರಾಷ್ಟ್ರೀಯ ಎಣ್ಣೆಕಾಳುಗಳ ಅಭಿವೃದ್ಧಿಯ ಯೋಜನೆ, ಬೇಳೆ ಕಾಳುಗಳ ಅಭಿವೃದ್ಧಿಯ ಕಾರ್ಯಕ್ರಮ ಇತ್ಯಾದಿ.

ಅಧ್ಯಯನದ ಸಮೀಕ್ಷೆ

ಹಸಿರು ಕ್ರಾಂತಿ ಕಾರ್ಯಕ್ರಮ ಪ್ರಾರಂಭವಾದ 1966–67ರ ಬಳಿಕ, ಹಣಕಾಸಿನ ಪ್ರಾಮುಖ್ಯತೆ ಕೃಷಿ ಕ್ಷೇತ್ರದಲ್ಲಿ ಗಮನಾರ್ಹವಾಗಿ ಹೆಚ್ಚಿದೆ. ರೈತರಿಗೆ ಕೇವಲ ಬೇಸಾಯದ ಅವಶ್ಯಕತೆಗಳಿಗೆ ಹಣಕಾಸಿನ ಅಗತ್ಯವಲ್ಲ. ಕೃಷಿ ಅಭಿವೃದ್ಧಿಗೆ ಬೇಕಾದ ಬಂಡವಾಳವನ್ನು ಹೆಚ್ಚಿಸಿಕೊಳ್ಳಲು ಹಣಕಾಸಿನ ಅಗತ್ಯವಿದೆ. ಸಹಜವಾಗಿಯೇ ಕೃಷಿ ಆದಾಯ ಕಡಿಮೆಯಾಗಿರುವುದರಿಂದ, ಮನೆ ವೆಚ್ಚದ ಬಳಿಕ ಬಂಡವಾಳ ಹೂಡಲು ಅಗತ್ಯವಾದ ಉಳಿತಾಯ ರೈತ ಸಮುದಾಯದಲ್ಲಿ ತೀರಾ ಕಡಿಮೆ. ಆದ್ದರಿಂದ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಹಣಕಾಸಿನ ವ್ಯವಸ್ಥೆ ಬಹಳ ಅಗತ್ಯವಾಗಿರುತ್ತದೆ. ರೇಗ್ನಾರ್ ನರ್ಕ್ಸ್‌ನ[2] 'ಬಡತನದ

ವಿಷಮರ್ತುಲ'ವನ್ನು ಹಿಂದುಳಿದ ರಾಷ್ಟ್ರಗಳಲ್ಲಿ ಬೇರ್ಪಡಿಸಲು ಹಣಕಾಸು ಕೃಷಿ ಕ್ಷೇತ್ರದ ಅಭಿವೃದ್ಧಿ ಕುಂಟಿತವನ್ನು ತೊಡೆದು ಹಾಕಲು ಹಣಕಾಸು ಒದಗಿಸುವುದು ಅನಿವಾರ್ಯವಾಗಿದೆ. ಅದರಲ್ಲೂ, ಚಿಕ್ಕ ಹಿಡುವಳಿದಾರರು ಕೃಷಿ ಅಭಿವೃದ್ಧಿಗೆ ಬೇಕಾದ ದೀರ್ಘಾವಧಿ ಹಣಕಾಸಿಗೆ ವಿವಿಧ ಸಾಂಸ್ಥಿಕವಲ್ಲದ ಮೂಲಗಳನ್ನೇ ಅವಲಂಬಿಸಬೇಕಾಗಿದೆ[3]. ದೋಷ ಪೂರ್ಣವಾಗಿರುವ ಸಾಂಸ್ಥಿಕವಲ್ಲದ ಹಣಕಾಸು ಮೂಲಗಳ ಬದಲಾಗಿ, ಸಾಂಸ್ಥಿಕ ಹಣಕಾಸಿನ ಮೂಲಗಳು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಇದರಂತೆ, ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ಹೆಚ್ಚು ವಿಸ್ತರಿಸಲ್ಪಟ್ಟಿತು. ಆದರೆ ಇತ್ತೀಚಿನ ಜಾಗತೀಕರಣ, ಖಾಸಗೀಕರಣ ನೀತಿಯಿಂದಾಗಿ ವಾಣಿಜ್ಯ ಬ್ಯಾಂಕುಗಳು ಸ್ಪರ್ಧಾತ್ಮವಾಗಿರಬೇಕಾದುದರಿಂದ, ಸ್ಥಳೀಯವಾದ ಕೃಷಿ ಸಹಕಾರಿ ಬ್ಯಾಂಕುಗಳು ಮಹತ್ವವನ್ನು ಪಡೆದಿವೆ.

ಕೃಷಿ ಕ್ಷೇತ್ರದಲ್ಲಿ ಸಾಂಸ್ಥಿಕ ಹಣಕಾಸಿನ ಪಾತ್ರವನ್ನು ವಿಶ್ಲೇಷಿಸಿ ಅನೇಕ ಅಧ್ಯಯನಗಳು ನಡೆದಿವೆ. 1950-51ರ ಪರಿಸ್ಥಿತಿಗೆ ವಿರುದ್ಧವಾಗಿ, ಈಗ ಕೃಷಿ ಕ್ಷೇತ್ರದ ಸಾಲದ ಬೇಡಿಕೆಯನ್ನು ಪೂರೈಸುವಲ್ಲಿ ಸಾಂಸ್ಥಿಕ ಮೂಲಗಳು ಪಾಲು ಸುಮಾರು ಶೇಕಡಾ 70ಕ್ಕಿಂತಲೂ ಹೆಚ್ಚು ಎಂಬುವುದು ಗಮನಾರ್ಹವಾದ ಬದಲಾವಣೆ,[4]

ಸ್ವಾತಂತ್ರ್ಯಾನಂತರದ ಪ್ರಯತ್ನದಿಂದ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಪತ್ತಿನ ಸಹಕಾರಿ ಸಂಘಗಳು ಸಾಕಷ್ಟು ವಿಸ್ತರಣೆಗೊಂಡಿವೆ ಮತ್ತು ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರಧಾನ ಪಾತ್ರವನ್ನು ವಹಿಸುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯವಾದ ಹಣಕಾಸು ಮೂಲದ ನಿರ್ಮಾಣ ಮಾಡಿ, ಕೃಷಿರಂಗಕ್ಕೆ ಸಹಾಯಕವಾಗಿದೆ. ಅದರಲ್ಲೂ, ಹಳ್ಳಿಗಳ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು ರೈತರಿಗೆ ಸಾಲವನ್ನು ಒದಗಿಸುವಲ್ಲಿ ಪ್ರಯತ್ನಗಳನ್ನು ನಡೆಸುತ್ತಿವೆ. ಆದರೆ, ಕೃಷಿಕರು ಈ ಸಾಲವನ್ನು ಉದ್ದೇಶಿತ ಉತ್ಪಾದಕ ಚಟುವಟಿಕೆಗಳಿಗೆ ಬಳಸಿ ತಮ್ಮ ಆರ್ಥಿಕತೆಯನ್ನು ಸುಧಾರಿಸಿಕೊಳ್ಳುವ ಪಾತ್ರ ಈ ಸಂಘಗಳ ಯಶಸ್ಸಿಗೆ ಅಗತ್ಯವಿದೆ.[5]

ಭಾರತದಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳು ಸುಮಾರು 92,000ದಷ್ಟಿದ್ದು ಕೃಷಿಕರಿಗೆ ತೀರಾ ಸಾಲವನ್ನು ಒದಗಿಸುತ್ತಿವೆ. 2004ರಲ್ಲಿ ಸುಮಾರು 4,04,792 ಲಕ್ಷ

ರೂಪಾಯಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲವನ್ನು ರೈತರಿಗೆ ಒದಗಿಸಿದೆ.[6] ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳನ್ನು ವಿವಿಧರೀತಿಯಲ್ಲಿ ವಿಶ್ಲೇಷಿಸಿ ಅಧ್ಯಯನ ನಡೆಸಿವೆಯಾದರೂ, ಮುಖ್ಯವಾಗಿ ಮುಂಗಡಸಾಲ, ಸಾಲದ ಮರುಪಾವತಿ, ಠೇವಣಿ ಸಂಗ್ರಹ, ಹೊರಬಾಕಿಯಿರುವ ಸಾಲಗಳ ಪ್ರಮಾಣ, ಮೊದಲಾದ ಅಂಶಗಳನ್ನು ವಿಶ್ಲೇಷಿಸಲಾಗಿದೆ.[7] ಆದರೆ ಈ ರೀತಿಯ ವಿಶ್ಲೇಷಣೆ ರಾಷ್ಟ್ರ, ರಾಜ್ಯ ಮಟ್ಟದಲ್ಲಿ ನಡೆದಿವೆಯಾದರೂ ಒಂದು ನಿರ್ದಿಷ್ಟ ತಾಲೂಕು ಮಟ್ಟದಲ್ಲಿ ನಡೆಸಬೇಕಾದ ಅಗತ್ಯವಿದೆ. ಯಾಕೆಂದರೆ, ಈ ಸಂಘಗಳ ನಿರ್ವಹಣೆ ಪ್ರದೇಶದಿಂದ ಪ್ರದೇಶಕ್ಕೆ ನಾನಾ ಕಾರಣಗಳಿಂದಾಗಿ ವ್ಯತ್ಯಾಸವಿರುತ್ತದೆ. ಬೆಳೆಗಳ ವ್ಯತ್ಯಾಸ, ಸಾಮಾಜಿಕ, ಆರ್ಥಿಕ, ಸ್ಥಿತಿಗತಿಗಳ ವ್ಯತ್ಯಾಸವೂ ಇದಕ್ಕೆ ಕಾರಣವಿರಬಹುದು. ಉದಾಹರಣೆಗೆ ಮಹಾರಾಷ್ಟ್ರದ ಅಧ್ಯಯನವೊಂದರಲ್ಲಿ ವಾಣಿಜ್ಯ ಬೆಳೆಗಳಾದ ಕಬ್ಬು ಮತ್ತು ಹತ್ತಿ ಬೆಳೆಗಳಿಗೆ ಈ ಸಂಘಗಳು ಹೆಚ್ಚು ಸಾಲವನ್ನು ಒದಗಿಸಿದೆ ಎಂದು ವಿಶ್ಲೇಷಿಸಲಾಗಿದೆ.[8] ಸಾಮಾಜಿಕ ಮತ್ತು ವೈಯಕ್ತಿಕ ಗುಣಗಳು ಸಹಕಾರಿ ಸಂಘಗಳಿಂದ ಸಾಲ ತೆಗೆಯುವ ನಿರ್ಧಾರಗಳಲ್ಲಿ ಪ್ರಭಾವ ಬೀರುವುದನ್ನು ಅಧ್ಯಯನ ಮಾಡಲಾಗಿದೆ.[9] ಈ ಅಧ್ಯಯನದಲ್ಲಿ ಪ್ರಾಥಮಿಕ ಸಹಕಾರಿ ಬ್ಯಾಂಕುಗಳಲ್ಲಿ ರೈತರಿಗೆ ಬೆಳೆ ಸಾಲ ಮತ್ತು ಚಿನ್ನಾಭರಣ ಸಾಲಗಳನ್ನು ಕೊಡುವುದರಲ್ಲಿ ಯಶಸ್ಸು ಕಂಡಿವೆ ಎಂದು ವಿಶ್ಲೇಷಿಸಲಾಗಿದೆ. ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿಂದ ಗ್ರಾಮೀಣ ಪ್ರದೇಶದಲ್ಲಿ ರೈತರು ನಿರೀಕ್ಷಿಸುವ ಅಂಶಗಳನ್ನು ವಿಶ್ಲೇಷಿಸಲಾಗಿದೆ.[10]

ಹೀಗೆ ಗ್ರಾಮೀಣ ಮಟ್ಟದಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳ ಪಾತ್ರ, ಕಾರ್ಯ ನಿರ್ವಹಣೆ, ಯಶಸ್ಸು, ಹಾಗೂ ದುರ್ಬಲತೆಯನ್ನು ವಿಶ್ಲೇಷಿಸಿ ಅನೇಕ ಅಧ್ಯಯನಗಳು ನಡೆದಿವೆ. ಆದರೆ, ಈ ಅಧ್ಯಯನಗಳು ಪ್ರಾದೇಶಿಕವಾಗಿ, ಕೆಲವೇ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡಿವೆ. ಸಂಘದ ಸಾಂಸ್ಥಿಕ ಸಾಮರ್ಥ್ಯ ಹಾಗೂ ರೈತರ ದೃಷ್ಟಿಕೋನಗಳನ್ನು ಒಟ್ಟಾಗಿ ವಿಶ್ಲೇಷಿಸುವುದು ಅಗತ್ಯವಿದೆ.

ಈ ಹಿನ್ನಲೆಯಲ್ಲಿ ಬೆಳ್ತಂಗಡಿ ತಾಲೂಕಿನ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಕಾರ್ಯವೈಖರಿಯನ್ನು ಈ ಸಂಶೋಧನಾ ಪ್ರಬಂಧದಲ್ಲಿ ಅವಲೋಕಿಸುವ ಪ್ರಯತ್ನಮಾಡಲಾಗಿದೆ.

ಅಧ್ಯಯನಕ್ಕೆ ಕಾರಣ ಮತ್ತು ಪ್ರೇರಣೆ

1. ದಕ್ಷಿಣ ಕನ್ನಡ ಜಿಲ್ಲೆಯು ಐದು ತಾಲೂಕು (ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ, ಬೆಳ್ತಂಗಡಿ) ಗಳನ್ನು ಹೊಂದಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡಾ 52ರಷ್ಟು ಜನರು ಹಳ್ಳಿಗಳಲ್ಲಿ ವಾಸವಾಗಿದ್ದರೆ, ಬೆಳ್ತಂಗಡಿ ತಾಲೂಕಿನಲ್ಲಿ ಶೇಕಡಾ 97ರಷ್ಟು ಜನರು ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಬೆಳ್ತಂಗಡಿ ತಾಲೂಕು ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಅತ್ಯಂತ ಮುಂದುವರಿದಿದೆ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಯಾಕೆಂದರೆ ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಯಂಸೇವಾ ಸಂಸ್ಥೆಯಾದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು 1980ರಲ್ಲಿ ಅನುಷ್ಠಾನಗೊಳಿಸಲಾಯಿತು. ಈ ಯೋಜನೆಯು ಗ್ರಾಮೀಣಾಭಿವೃದ್ಧಿಗೆ ಒಂದು ವಿಶಿಷ್ಟ ಆಯಾಮವನ್ನು ನೀಡಿದೆ.

2. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 115 ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿದ್ದು, ಬೆಳ್ತಂಗಡಿಯು ಹಳ್ಳಿಗಳ ಪ್ರದೇಶವಾದರೂ ಇಲ್ಲಿ 22 ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿವೆ.

3. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5.2 ಶೇಕಡಾದಷ್ಟು ಹಿಡುವಳಿದಾರ ಕೃಷಿಕರಿದ್ದಾರೆ. ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯಗಳಲ್ಲಿ ಕ್ರಮವಾಗಿ 4.2 ಶೇಕಡಾ, 6.5 ಶೇಕಡಾ, 3.6 ಶೇಕಡಾ, 1.0 ಶೇಕಡಾ ಹಿಡುವಳಿದಾರರಿದ್ದಾರೆ ಮತ್ತು ಬೆಳ್ತಂಗಡಿಯಲ್ಲಿ 10.9ಶೇಕಡಾದಷ್ಟು ಹಿಡುವಳಿದಾರ ಕೃಷಿಕರಿದ್ದಾರೆ. ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಇತರ ತಾಲೂಕಗಳಿಗಿಂತ ಅಧಿಕವಾಗಿದೆ.[11]

ಸಂಶೋಧನೆಯ ಉದ್ದೇಶ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸಾಂಸ್ಥಿಕ ಸ್ವರೂಪ ಹಾಗೂ ಕಾರ್ಯವಿಧಾನಗಳನ್ನು ವಿಶ್ಲೇಷಣೆ ಮಾಡುವುದು ಪ್ರಸ್ತುತ ಸಂಶೋಧನೆಯ ಮುಖ್ಯ ಉದ್ದೇಶ. ಶಾಖೆಗಳ ವಿಸ್ತರಣೆ, ಸದಸ್ಯರ ಸಂಖ್ಯೆಯಲ್ಲಿ ವೃದ್ಧಿ, ಕಟ್ಟಡ ಮತ್ತಿತರ ಅಂಶಗಳ ಆಧಾರದಲ್ಲಿ ಸಹಕಾರಿ ಸಂಘಗಳ ಕಾರ್ಯ ಸಾಮರ್ಥ್ಯವನ್ನು ಮತ್ತು ಆಯೋಜನಾ ಶಕ್ತಿಯನ್ನು ಅಧ್ಯಯನ ಮಾಡುವುದು ಈ ಸಂಶೋಧನೆಯ ಉದ್ದೇಶ.

ಈ ಸಂಶೋಧನೆಯ ಮುಖ್ಯ ಉದ್ದೇಶಗಳೆಂದರೆ:

1. ಕೃಷಿ ಸೇವಾ ಸಹಕಾರಿ ಸಂಘಗಳ ಸಾಂಘಿಕ ಸಾಮರ್ಥ್ಯವನ್ನು ವಿಶ್ಲೇಷಿಸುವುದು.
2. ಕೃಷಿ ಸೇವಾ ಸಹಕಾರಿ ಸಂಘಗಳ ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ವಿಶ್ಲೇಷಿಸುವುದು.
3. ಗ್ರಾಮಮಟ್ಟದಲ್ಲಿ ವ್ಯವಸಾಯ ಸಹಕಾರಿ ಸಂಘಗಳ ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳನ್ನು ಪರಿಶೀಲಿಸುವುದು.
4. ಸದಸ್ಯರಿಗೆ ಕೃಷಿ ಸಹಕಾರಿ ಸಂಘಗಳಿಂದ ದೊರುಕುತ್ತಿರುವ ಸೌಲಭ್ಯಗಳನ್ನು ವಿಶ್ಲೇಷಿಸುವುದು.
5. ವ್ಯವಸಾಯ ಸಹಕಾರಿ ಸಂಘಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸುವುದು.

ಅಧ್ಯಯನ ವಿಧಾನ

ಕಾರ್ಯವಿಧಾನ, ಲಾಭಾಂಶ ಹಾಗೂ ವೆಚ್ಚಗಳ ಸಹಕಾರಿ ಸಂಘಗಳ ಸಂಯೋಜನೆ ಹಾಗೂ ಕಾರ್ಯವಿಧಾನದ ಧನಾತ್ಮಕ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಸದಸ್ಯರ ಸಂಖ್ಯೆ ಹೆಚ್ಚಳ, ಪಾಲುಬಂಡವಾಳ ಹೆಚ್ಚಳ, ಸಾಲ ಮರುಪಾವತಿ ದರ, ಠೇವಣಿ ಸಂಗ್ರಹಣೆ, ಹೊರಬಾಕಿರುವ ಸಾಲಗಳನ್ನು ವಿಶ್ಲೇಷಿಸಲಾಗಿದೆ.

ಪ್ರಾಥಮಿಕ ವ್ಯವಸಾಯ ಸೇವಾ ಸಹಕಾರಿ ಸಂಘಗಳ ಲಾಭದಾಯಕ ಕಾರ್ಯವಿಧಾನವನ್ನು ಪರೀಕ್ಷಿಸಲು ಸಂಸ್ಥೆಯ ಆದಾಯ ಹಾಗೂ ವೆಚ್ಚದ ವಿಧಾನವನ್ನು

ಗಮನಿಸಬೇಕಾಗುತ್ತದೆ. ಲಾಭದ ಪ್ರಮಾಣವನ್ನು ತಿಳಿಯಲು ಲಾಭ ಹಾಗೂ ನಷ್ಟಕ್ಕೆ ಸಂಬಧಿಸಿದ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಒಟ್ಟು ಆದಾಯದ ಪ್ರಮಾಣ, ಬಡ್ಡಿ ನೀಡಿದ ಹಾಗೂ ವಸೂಲು ಮಾಡಿದ ಪ್ರಮಾಣ, ಮಾನವ ಸಂಪನ್ಮೂಲವೆಚ್ಚಗಳು, ನಿರ್ವಹಣಾವೆಚ್ಚಗಳು ಮತ್ತಿತರ ಆದಾಯ ಪ್ರಮಾಣಗಳನ್ನು ವೆಚ್ಚದ ಪ್ರಮಾಣಗಳೊಂದಿಗೆ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಉತ್ಪಾದಕತೆಯ ಪ್ರಮಾಣವು ಒಂದು ನಿರ್ದಿಷ್ಟ ಅವಧಿಯಲ್ಲಿ ಸಂಘದ ನೌಕರರು ತೋರಿದ ಕಾರ್ಯನಿರ್ವಹಣೆಯನ್ನು ಪ್ರತಿಬಿಂಬಿಸುತ್ತವೆ. ಈ ಕೆಳಗಿನ ಮಾನದಂಡಗಳ ಆಧಾರದಲ್ಲಿ ಅದನ್ನು ಪರಿಗಣಿಸಬಹುದು:

1. ಉದ್ಯೋಗಿಗಳ ತಲಾ ಠೇವಣಿ
2. ಉದ್ಯೋಗಿಗಳ ತಲಾ ಮುಂಗಡ
3. ಉದ್ಯೋಗಿಗಳ ತಲಾ ಆದಾಯ
4. ಉದ್ಯೋಗಿಗಳ ತಲಾ ವೆಚ್ಚ
5. ಉದ್ಯೋಗಿಗಳ ತಲಾ ವಿಸ್ತರಣೆ

ಸಹಕಾರಿ ಸಂಘಗಳ ಸದಸ್ಯರಿಗೆ ಉಂಟಾದ ಉಪಯೋಗಗಳನ್ನು ಅಂದಾಜಿಸಲು ಸಂಘಕ್ಕೆ ಸೇರಿದ ಮೇಲೆ ಸದಸ್ಯರಲ್ಲಿ ಆದ ಆರ್ಥಿಕ ಅಭಿವೃದ್ಧಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ವ್ಯವಸಾಯ ಸಹಕಾರಿ ಸಂಘಗಳ ಸಂಯೋಜನಾ ಸಾಮರ್ಥ್ಯವನ್ನು, ಸಂಘಟನಾ ಸಾಮರ್ಥ್ಯವನ್ನು, ಆಳಿಯಲು ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ, ಸಭೆಗಳಲ್ಲಿ ಭಾಗವಹಿಸುವುದು, ಸದಸ್ಯರಿಂದ ಸಾಲ ವಸೂಲಾತಿ ಮುಂತಾದ ಅಂಶಗಳು ಆಧಾರವಾಗುತ್ತವೆ.

ನಿರ್ಧಾರಗಳನ್ನು ಕೈಗೊಳ್ಳುವ ಆಡಳಿತ ಮಂಡಳಿಯ ಕಾರ್ಯವೈಖರಿಯನ್ನು ಗುಣಾತ್ಮಕವಾಗಿ ಪರೀಶೀಲಿಸುವ ಪ್ರಯತ್ನವನ್ನು ಮಾಡಲಾಗುವುದು.

ದತ್ತಾಂಶದ ಮೂಲಗಳು

ಅಗತ್ಯವಾದ ಮಾಹಿತಿ ಹಾಗೂ ಅಂಕೆ ಸಂಖ್ಯೆಗಳನ್ನು ಪ್ರಾಥಮಿಕ ಹಾಗೂ ಮಾಧ್ಯಮಿಕ ಮೂಲಗಳಿಂದ ಸಂಗ್ರಹಿಸಲಾಗಿದೆ. ಮಾದರಿಯಾಗಿ ಆಯ್ದುಕೊಂಡ ಸಹಕಾರಿ ಸಂಘಗಳಿಂದ ಅವುಗಳ ವಾರ್ಷಿಕ ವರದಿಗಳನ್ನು ಅಭ್ಯಸಿಸಲಾಗುವುದು. ಸಂಬಂಧಪಟ್ಟ ಇನ್ನೂ ಅನೇಕ ದಾಖಲೆಗಳನ್ನು ಪರಾಮರ್ಶಿಸಲಾಯಿತು. ಮೊದಲೇ ರೂಪಿಸಲಾದ ಪ್ರಶ್ನಾವಳಿಯ ಆಧಾರದಲ್ಲಿ ಸಂಘಗಳ ಅಧಿಕಾರಿಗಳನ್ನು ಹಾಗೂ ಸದಸ್ಯರನ್ನು ಸಂದರ್ಶಿಸಿ ಮಾಹಿತಿ ಕಲೆಹಾಕಲಾಯಿತು.

ಪ್ರೌಢಪ್ರಬಂಧದ ಸಂಘಟನೆ

ಅಧ್ಯಾಯ ಒಂದು : ಪ್ರಸ್ತಾವನೆ

ಅಧ್ಯಾಯ ಎರಡು : ವಿಶ್ವ ಮತ್ತು ಭಾರತದಲ್ಲಿ ಸಹಕಾರಿ ಸಂಘಗಳ ಚಳವಳಿ

ಅಧ್ಯಾಯ ಮೂರು : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಸಂಘಗಳು

ಅಧ್ಯಾಯ ನಾಲ್ಕು : ಅಧ್ಯಯನ ಫಲಿತಾಂಶಗಳ ವಿಶ್ಲೇಷಣೆ

ಅಧ್ಯಾಯ ಐದು : ಉಪಸಂಹಾರ ಮತ್ತು ಸಲಹೆಗಳು

ಟಿಪ್ಪಣಿ:

1. ಬಸವರಾಜ್ ಯಸ್. ಬೆನ್ನಿಯವರು (1999) "ಕರ್ನಾಟಕದಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘಗಳು" ಎಂಬ ತಮ್ಮ ಪಿ.ಹೆಚ್.ಡಿ. ಮಹಾಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ.
2. ಬಸವರಾಜ್ ಯಸ್. ಬೆನ್ನಿಯವರು (1999) "ಕರ್ನಾಟಕದಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘಗಳು" ಎಂಬ ತಮ್ಮ ಪಿ.ಹೆಚ್.ಡಿ. ಮಹಾಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ.
3. ವಿ.ಬಿ.ನಾಯ್ಡು ಮತ್ತು ಎ.ಸಿಲ್ವಾ ಶಂಕರ (2007) "ಫ್ಯಾಕ್ಟರ್ಸ್ ಇನ್‌ಫ್ಲೂಯೆನ್ಸಿಂಗ್ ಎಗ್ರಿಕಲ್ಚರಲ್ ಕ್ರೆಡಿಟ್, ಎ ಕೇಸ್ ಸ್ಟಡೀ", ಸದರ್ನ್ ಇಕೊನೋಮಿಕ್ಸ್, ಜನವರಿ 15, ಪಿ.ಪಿ.28–30.
4. ರಾಕೇಶ್ ಮೋಹನ್ (2006): "ಎಗ್ರಿಕಲ್ಚರಲ್ ಕ್ರೆಡಿಟ್ ಇನ್ ಇಂಡಿಯಾ, ಸ್ಟೇಟಸ್ ಇಶ್ಯುಸ್ ಆ್ಯಂಡ ಫ್ಯೂಚರ್ ಎಜೆಂಡ್", ಫೈನಾಸ್ಸಿಂಗ್ ಎಗ್ರಿಕಲ್ಚರ್, ಏಪ್ರಿಲ್–ಮೇ
5. ಸಿ.ವಾಸುದೇವಲು ನಾಯ್ಡು ಮತ್ತು ರುಕ್ಮಿಣಿ ರೆಡ್ಡಿ : (2007): "ಎಗ್ರಿಕಲ್ಚರಲ್ ಕ್ರೆಡಿಟ್ ಇನ್ ಇಂಡಿಯಾ: ಯಾನ್, ಯಾನಾಲಿಸಿಪ್", ಸದರ್ನ್ ಇಕೋನೋಮಿಕ್ಸ್, ಫೆಬ್ರವರಿ 15, ಪಿಪಿ 11–14.
6. ಶಂಕರ್ ಅಂಭೋರ್, (2007): "ಪ್ರೈಮರಿ ಎಗ್ರಿಕಲ್ಚರಲ್ ಕೋಪರೇಟಿವ್ ಕ್ರೆಡಿಟ್ ಸೊಸೈಟೀಸ್: ಮೈಕ್ರೊ ಸ್ಟಡೀ", ಸದರ್ನ್ ಇಕೋನಾಮಿಕ್ಸ್, ಮಾರ್ಚ್ 1,ಪಿ.ಪಿ.14–16.
7. ಶಂಕರ್ ಅಂಭೋರ್, (2007): "ಪ್ರೈಮರಿ ಎಗ್ರಿಕಲ್ಚರಲ್ ಕೋಪರೇಟಿವ್ ಕ್ರೆಡಿಟ್ ಸೊಸೈಟೀಸ್: ಮೈಕ್ರೊ ಸ್ಟಡೀ", ಸದರ್ನ್ ಇಕೋನಾಮಿಕ್ಸ್, ಮಾರ್ಚ್ 1,ಪಿ.ಪಿ.14–16.

8. ಶಂಕರ್ ಅಂಭೋರ್, (2007): "ಪ್ರೈಮರಿ ಎಗ್ರಿಕಲ್ಚರಲ್ ಕೋಪರೇಟಿವ್ ಕ್ರೆಡಿಟ್ ಸೊಸೈಟೀಸ್: ಮೈಕ್ರೊ ಸ್ಟಡೀ", ಸದರ್ನ್ ಇಕೋನಾಮಿಕ್ಸ್, ಮಾರ್ಚ್ 1,ಪಿ.ಪಿ.14–16.

9. ಜೆರಿ ಜೆಸೆಫೈನ್ ತನರತ್ನಂ (2006): "ವರ್ಕಿಂಗ್ ಆಫ್ ಪ್ರೈಮರಿ ಎಗ್ರಿಕಲ್ಚರಲ್ ಕೋಪರೇಟಿವ್ ಬ್ಯಾಂಕ್: ಎ ಕೇಸ್ ಸ್ಟಡೀ", ಸದರ್ನ್ ಇಕೋನೋಮಿಕ್ಸ್, ಸಪ್ಟಂಬರ್ 1, ಪಿ.ಪಿ. 29–34.

10. ಗಾರ್‌ವಾಲ್ ಪಿ.ಯಸ್ (1998): "ರೂರಲ್ ಬ್ಯಾಂಕಿಂಗ್ ಇನ್ ಇಂಡಿಯಾ", ಕಲ್ಯಾಣಿ ಪಬ್ಲಿಷರರ್ಸ್ ನ್ಯೂಡೆಲ್ಲಿ.

ಅಧ್ಯಾಯ– 2

ವಿಶ್ವ ಮತ್ತು ಭಾರತದಲ್ಲಿ ಸಹಕಾರಿ ಸಂಘಗಳ ಚಳವಳಿ

ಅಧ್ಯಾಯ– 2

ವಿಶ್ವ ಮತ್ತು ಭಾರತದಲ್ಲಿ ಸಹಕಾರಿ ಸಂಘಗಳ ಚಳವಳಿ

ಈ ಅಧ್ಯಾಯದಲ್ಲಿ ಸಹಕಾರಿ ತತ್ವ, ನಿಯಮ ಹಾಗೂ ಮೌಲ್ಯಗಳ ಕುರಿತು ಚರ್ಚಿಸಿ, ಸಹಕಾರಿ ಸಂಸ್ಥೆಗಳ ವ್ಯಾಖ್ಯೆಯನ್ನು ನಿರೂಪಿಸಲಾಗಿದೆ. ಜೊತೆಗೆ ವಿಶ್ವ ಹಾಗೂ ಭಾರತದಲ್ಲಿ ಸಹಕಾರಿ ಚಳುವಳಿಗಳ ವಿವಿಧ ಘಟ್ಟಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಅದರಲ್ಲೂ, ಕೃಷಿ ಸಾಲವ್ಯವಸ್ಥೆಯಲ್ಲಿ ಸಹಕಾರಿ ಸಂಘಗಳ ಪಾಲು ಮತ್ತು ಕೊಡುಗೆಗಳ ವಿಶ್ಲೇಷಣೆಯನ್ನು ಮಾಡಲಾಗಿದೆ.

ಸಹಕಾರಿ ಸಂಸ್ಥೆಗಳ ವ್ಯಾಖ್ಯೆ

ಸಹಕಾರಿ ಸಂಸ್ಥೆಗಳನ್ನು ನಿರ್ದಿಷ್ಟವಾಗಿ ವ್ಯಾಖ್ಯೆ ಮಾಡುವುದು ಸುಲಭವಲ್ಲ. ಯಾಕೆಂದರೆ, ಮಾನವ ಇತಿಹಾಸದಲ್ಲಿ ಸಹಕಾರಿ ತತ್ವದ ನೆಲೆಯಲ್ಲಿ ಸಾಮಾಜಿಕ ಚಟುವಟಿಕೆಗಳು ಪ್ರಾರಂಭವಾಗಿರುವುದು ಬೇರೆ ಬೇರೆ ಸಂದರ್ಭಗಳಲ್ಲಿ. ಆದ್ದರಿಂದ ವಿವಿಧ ರಾಷ್ಟ್ರಗಳಲ್ಲಿ ಸಹಕಾರಿ ತತ್ವದ ನೆಲೆಯಲ್ಲಿ ಸಾಂಘಿಕ ಚಟುವಟಿಕೆಗಳು ಪ್ರಾರಂಭವಾಗಿರುವುದು ಬೇರೆ ಬೇರೆ ಕಾರಣಕ್ಕೆ ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ. ಆದ್ದರಿಂದ ಸಹಕಾರಿ ಕ್ಷೇತ್ರದ ಬೇರೆ ಬೇರೆ ರಾಷ್ಟ್ರಗಳ ಅನುಭವವು ಬೇರೆ ಬೇರೆಯೇ ಆಗಿರುತ್ತದೆ. ಆಯಾಯ ರಾಷ್ಟ್ರಗಳ ಸಾಮಾಜಿಕ, ರಾಜಕೀಯ, ಆರ್ಥಿಕ, ಐತಿಹಾಸಿಕ ವೈವಿಧ್ಯತೆಗಳೂ ಇದಕ್ಕೆ ಕಾರಣವಾಗಿದೆ. ಏನಿದ್ದರೂ, ಸಹಕಾರ ಎನ್ನುವುದು ಒಂದು ಬಲಿಷ್ಟವಾದ ಸಿದ್ಧಾಂತ. ಸಮಾನ ಆಸಕ್ತರಿಗೆ ಸಾಮಾನ್ಯ ಗುರಿಗಳನ್ನು ಈಡೇರಿಸಿಕೊಳ್ಳಲು ಅಡಿಪಾಯವನ್ನು ಹಾಕಿಕೊಡುತ್ತದೆ. "ಎಲ್ಲರು ಒಟ್ಟಾಗಿ ಸಮಾನಗುರಿಯನ್ನು ಸಾಧಿಸಲು ಸಾಂಘಿಕವಾಗಿ ಪ್ರಯತ್ನಿಸುವ ಗುಂಪನ್ನು ಸಹಕಾರಿ ಸಂಘ"[1] ಎನ್ನಬಹುದು. ತಾನು ಎಲ್ಲರಿಗಾಗಿ ಮತ್ತು ಎಲ್ಲರೂ ತನಗಾಗಿ ಎಂಬ ತತ್ವದ ಆಧಾರದಲ್ಲಿ ಲಾಭದ ದೃಷ್ಟಿಯಿಲ್ಲದೆ ಸೇವೆಯ ಮೂಲಕ ಸಮಾನತೆ ಸಾಧಿಸಲು ಯತ್ನಿಸುವ ಸಂಘಟನೆಗಳಿಗೆ ಸಹಕಾರಿ ಸಂಸ್ಥೆಗಳೆನ್ನುವರು.

ಹೆರಿಕ್[2] ಎಂಬವನು, "ತಮ್ಮ ಸಾಮರ್ಥ್ಯ ಮತ್ತು ಸಂಪನ್ಮೂಲಗಳನ್ನು ಸ್ವಯಂ ಪ್ರೇರಣೆಯಿಂದ ಒಟ್ಟುಗೂಡಿಸಿ ಬಳಸುವ ಹಾಗೂ ಅನ್ಯೋನ್ಯವಾಗಿ ನಿರ್ವಹಣೆ ಮಾಡಿ ಲಾಭ ನಷ್ಟಗಳನ್ನು ಸಮಾನವಾಗಿ ಹಂಚಿಕೊಳ್ಳುವ ಮಾನವನ ನಡೆತೆಯನ್ನು ಸಹಕಾರಿ" ಎನ್ನುತ್ತಾನೆ. ಮಾನವನು ವೈಯಕ್ತಿಕವಾಗಿ ಮಾಡಿಕೊಳ್ಳಲಾಗದ ಕೆಲಸಗಳನ್ನು ಗುಂಪಿನಲ್ಲಿ ಸ್ವಯಂಸೇವಾ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳೊಂದಿಗೆ ಕಾರ್ಯನಿರ್ವಹಿಸುವುದಕ್ಕೆ ಸಹಕಾರಿ ವಿಧಾನ ಎನ್ನುವರು.

ಗೋರ್ಡನ್ ಮತ್ತು ಒಬ್ರಿಯನ್ನರ[3] ಪ್ರಕಾರ "ಸಹಕಾರಿ ಸಂಘಗಳು ಒಂದು ವೈಶಿಷ್ಟ್ಯ ಪೂರ್ಣವಾದ ಆರ್ಥಿಕ ಸಂಘಟನೆಯಾಗಿದೆ. ಇಲ್ಲಿ ಒಂದು ನಿರ್ದಿಷ್ಟ ವ್ಯವಹಾರಕ್ಕೆ ಜನರು ಒಟ್ಟು ಸೇರುತ್ತಾರೆ. ವ್ಯವಹಾರ ಮತ್ತು ಮೌಲ್ಯಗಳನ್ನು ಸಹಕಾರಿ ತತ್ವಗಳು ಒಂದುಗೂಡಿಸುತ್ತವೆ". ಆಧುನಿಕ ಜಗತ್ತಿನಲ್ಲಿ ಸ್ಪರ್ಧಾತ್ಮಕವಾಗಿ ವಿಸ್ತರಣೆಗೊಳ್ಳುತ್ತಿರುವ ವ್ಯಾಪಾರ ವ್ಯವಹಾರಗಳಿಗೆ ಒಂದು ಮೌಲ್ಯತ್ಮಕ ಚೌಕಟ್ಟನ್ನು ಕೊಡಲು ಇದು ಬಹಳ ಅಗತ್ಯ.

ಹೋಲ್ಲೋಕ್‌ನ[4] ಪ್ರಕಾರ, "ಅಸಮರ್ಥವಾಗಿ ಬೇರೆಯೇ ಆಗಿ ಗುರಿತಿಸಲ್ಪಡುವ ಮನುಷ್ಯನಿಗೆ ಸಾಂಘಿಕ ಸಾಮಾರ್ಥ್ಯವನ್ನು ನೈತಿಕ ಅಭಿವೃದ್ಧಿಯ ಮತ್ತು ಪರಸ್ಪರ ಬೆಂಬಲದ ಮೂಲಕ ಕಾರ್ಯಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದೇ ಸಹಕಾರಿ ತತ್ವದ ಮಹತ್ವ" ಸಣ್ಣ ಪ್ರಮಾಣದ ಸಂಪನ್ಮೂಲ ಹೊಂದಿರುವವರು ಅವುಗಳನ್ನು ಆರ್ಥಿಕವಾಗಿ ಬಳಸಿಕೊಳ್ಳುವ ಪರಿಸ್ಥಿತಿಯಿಂದ ಹೊರಬರಲು ಇದು ಬಹುಮುಖ್ಯ. ಉದಾಹರಣೆಗೆ ಭಾರತದ ಕೃಷಿ ಕ್ಷೇತ್ರದ ಸುಮಾರು ಶೇಕಡಾ 80ಕ್ಕಿಂತಲೂ ಹೆಚ್ಚು ಸಣ್ಣ ಹಿಡುವಳಿದಾರರು ಇದ್ದಾರೆ [5]. ಕೃಷಿಯನ್ನು ಆಧುನೀಕರಣಗೊಳಿಸಲು ಇದೊಂದು ತೊಡಕು. ಇದರಿಂದಾಗಿ ದೊಡ್ಡ ಪ್ರಮಾಣದ ಕೃಷಿಗೆ ಇರುವ ಅನುಕೂಲತೆಗಳಿಂದ ಈ ಸಣ್ಣ ರೈತರು ವಂಚಿತರಾಗುತ್ತಾರೆ. ಇಂತಹ ಸಂದರ್ಭದಲ್ಲಿ ಸಣ್ಣ ಸಣ್ಣ ರೈತರು ಒಟ್ಟು ಸೇರಿ ಸಹಕಾರಿ ತತ್ವದಿಂದ ಕಾರ್ಯನಿರ್ವಹಿಸುವುದರಿಂದ ದೊಡ್ಡ ಪ್ರಮಾಣದ ಕೃಷಿಯ ಲಾಭಗಳನ್ನು ಪಡೆದುಕೊಳ್ಳಬಹುದು.

ಸಹಕಾರಿ ಸಂಸ್ಥೆಯ ಲಕ್ಷಣಗಳು

ಸಹಕಾರಿ ಸಂಸ್ಥೆಗಳ ವ್ಯಾಖ್ಯಾನಗಳನ್ನು ಗಮನಿಸಿದಾಗ ಅವುಗಳ ಗುಣಲಕ್ಷಣಗಳನ್ನು ಗುರುತಿಸಿಕೊಳ್ಳಬಹುದು. ಸಹಕಾರಿ ಸಂಘಗಳಲ್ಲಿ ಇರುವ ಜನ ಕೇವಲ ಸದಸ್ಯರೂ ಅಥವಾ ಉದ್ಯೋಗಿಗಳೋ ಆಗಿರದೆ, ಆ ಸಂಘದ ಸಂಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಮಾತ್ರವಲ್ಲದೆ, ಯಾವುದೇ ಸಹಕಾರಿ ಸಂಘಗಳು ಕೇವಲ ಲಾಭಗಳಿಕೆಯ ವ್ಯವಹಾರವನ್ನು ಮಾಡದೆ, ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸುವ ಗುರಿಯನ್ನು ಹೊಂದಿರಬೇಕು. ಸಹಕಾರಿ ಸಂಘಗಳಿಗೆ ಸಾಂಘಿಕ ಯಜಮಾನ್ಯವಿರುವುದರಿಂದ ಯಾವುದೇ ನಿರ್ಧಾರಗಳನ್ನು ಕೈಗೊಳ್ಳುವಾಗ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿರಬೇಕು. ಸಹಕಾರಿ ಸಂಘಗಳ ಅಂಗರಚನೆಯು ಪ್ರಜಾಪ್ರಭುತ್ವ ಸ್ವಭಾವವನ್ನು ನಿರೂಪಿಸುತ್ತದೆ. ಸದಸ್ಯರೇ ಆ ಸಂಘದ ಪರಿಪೂರ್ಣ ನಿರ್ಧಾರವನ್ನು ಕೈಗೊಳ್ಳುವ ಶಕ್ತಿ.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಸಹಕಾರಿ ಸಂಸ್ಥೆಗಳ ಪ್ರಮುಖ ಗುಣಲಕ್ಷಣಗಳಾಗಿ ಈ ಕೆಳಗಿನವುಗಳನ್ನು ಗುರುತಿಸಿಕೊಳ್ಳಬಹುದು[6]

1. ಒಂದೇ ಸಾಮಾಜಿಕ ಹಿನ್ನಲೆಯ ಮತ್ತು ಆರ್ಥಿಕ ಚಟುವಟಿಕೆಯ ಅಗತ್ಯವುಳ್ಳ ಜನರ ಸ್ವಯಂ ಸೇವಾ ಸಂಸ್ಥೆ. ಎಲ್ಲಾ ಸದಸ್ಯರು ಒಟ್ಟಾಗಿ ಉದ್ದೇಶಿತ ಚಟುವಟಿಕೆಯನ್ನು ಸ್ವಯಂ ಸೇವಾ ಮನೋಭಾವದಿಂದ ಪ್ರಜಾಪ್ರಭುತ್ವ ಮೌಲ್ಯದ ಆಧಾರದಲ್ಲಿ ನಡೆಸಿಕೊಂಡು ಫಲಿತಾಂಶವನ್ನು ಎಲ್ಲಾ ಸದಸ್ಯರು ಹಂಚಿಕೊಳ್ಳುವರು.

2. ಉದ್ಯಮದಿಂದ ಲಾಭ ಪಡೆಯುವುದು ಇಲ್ಲಿ ಉದ್ದೇಶವಲ್ಲ, ಬದಲಾಗಿ ಎಲ್ಲಾ ಸದಸ್ಯರಿಗೆ ಸಮಾನವಾಗಿ ಅಗತ್ಯದ ಸೇವೆಯನ್ನು ಒದಗಿಸುವುದು.

3. ಸಹಕಾರಿ ತತ್ವದ ಅಡಿಯಲ್ಲಿ ಅನೇಕ ಚಟುವಟಿಕೆಯನ್ನು ಕೈಗೊಳ್ಳಲಾಗುತ್ತದೆ. ಅವುಗಳನ್ನು ಕೃಷಿ, ಕೃಷಿಯೇತರ, ನಗರ, ಗ್ರಾಮೀಣ, ಪತ್ತಿನ, ಪತ್ತು ಹೊರತಾದ... ಹೀಗೆ ಅನೇಕ ವಿಧಗಳಲ್ಲಿ ವರ್ಗೀಕರಿಸಬಹುದು.

ಯಾವುದೇ ಒಂದು ನಿರ್ದಿಷ್ಟ ಚಟುವಟಿಕೆಯನ್ನು ಕೈಗೊಳ್ಳಲು ಸಮಾನ ಮನಸ್ಕ ಜನರು ಒಟ್ಟು ಸೇರಿ ಸಹಕಾರಿ ಸಂಘವನ್ನು ಹುಟ್ಟು ಹಾಕುತ್ತಾರೆ. ನಿರ್ದಿಷ್ಟ ಗುರಿಯನ್ನು ಒಟ್ಟಾಗಿ ಶ್ರಮದಿಂದ ಮುಟ್ಟುತ್ತಾರೆ. ಬಳಿಕ ಲಾಭಾಂಶವನ್ನು ಸಮಾನವಾಗಿ ಹಂಚಿಕೊಳ್ಳುತ್ತಾರೆ. ಈ ರೀತಿ ಸಂಘ ಸಂಸ್ಥೆಗಳ ಪ್ರಮುಖ ಲಕ್ಷಣಗಳೆಂದರೆ [7],

1. ಮುಕ್ತ ಮತ್ತು ಐಚ್ಛಿಕ ಸದಸ್ಯತ್ವ
2. ಒಬ್ಬನಿಗೆ ಒಂದೇ ಮತ ಮತ್ತು ಬಹುಮತಕ್ಕೆ ಮನ್ನಣೆ
3. ಜವಾಬ್ದಾರಿ ಮತ್ತು ಸವಲತ್ತುಗಳ ಸಮಾನ ಹಂಚಿಕೆ
4. ಸದಸ್ಯರ ಪಾಲ್ಗೊಳ್ಳುವಿಕೆ ಮತ್ತು ಸಮಾನ ಹಿತಾಸಕ್ತಿ
5. ಸೇವೆಯೇ ಮುಖ್ಯ ಗುರಿ, ಲಾಭಗಳಿಕೆ ಗೌಣ
6. ಸರ್ಕಾರದ ಹತೋಟಿಯಲ್ಲಿರುತ್ತದೆ

ಜರ್ಮನಿಯ ಹೆರ್.ಎಫ್.ಡಬ್ಲ್ಯೂ.ರೈಫೀಸನ್ (1818–1888) ಮತ್ತು ಹೆರ್ ಫ್ರಾಂಜ್ ಶೂಲ್ಜ್‌ಡೆಲಿಟ್ಜ್ (1819–1993)[8] ಎಂಬವರನ್ನು ಆಧುನಿಕ ಸಹಕಾರಿ ಆಂದೋಲನದ ಮೂಲ ಪುರುಷರೆಂದು ಗುರುತಿಸಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಂಘಟಿಸಲಾಗುವ ಸಹಕಾರಿ ಸಂಘಗಳನ್ನು ರೈಫೀಸನ್ ಸಂಘಗಳೆಂದೂ, ನಗರ ಪ್ರದೇಶಗಳಲ್ಲಿ ಸಂಘಟಿಸಲಾಗುವ ಸಹಕಾರಿ ಸಂಘಗಳನ್ನು ಶೂಲ್ಜ್ ಡೆಲಿಟ್ಜ್ ಸಂಘಗಳೆಂದೂ ಕರೆಯುತ್ತಾರೆ.

ಸಹಕಾರಿ ಸಂಘಗಳು ಬಹಳ ಹಿಂದಿನ ಕಾಲದಲ್ಲಿ ಧಾರ್ಮಿಕಸಿದ್ಧಾಂತಗಳಿಗೆ ಹೊಂದಿಕೊಂಡಿದ್ದವು. ಕ್ರಮೇಣ ಸಹಕಾರಿ ಚಳವಳಿಯು ವಿಸ್ತರಿಸುತ್ತಾ, ಅದರದ್ದೇ ಆದ ನೀತಿನಿಯಮಗಳನ್ನು ನಿರ್ಮಿಸಿಕೊಂಡಿತು. ಸಹಕಾರಿ ಆಂದೋಲನದ ಅಂತಾರಾಷ್ಟ್ರೀಯ ಸಂಸ್ಥೆಯಾದ 'ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟ' ಸಹಕಾರಿ ತತ್ವಗಳ ಪ್ರಮುಖ ಮೌಲ್ಯಗಳನ್ನು ಈ ರೀತಿಯಾಗಿ ನಿರೂಪಿಸಿದೆ.[9]

ಮಾನವನ ಸಾಂಘಿಕ ಚಟುವಟಿಕೆಗಳಿಗೆ ಅತ್ಯಂತ ಭದ್ರ ಹಾಗೂ ಜನಪ್ರಿಯವಾಗಿರುವ ಸಿದ್ಧಾಂತ ಸಹಕಾರಿ ಸಿದ್ಧಾಂತ. ಇಲ್ಲಿ ಪರಸ್ಪರ ಹೊಂದಿಕೊಂಡು ಎಲ್ಲಾ ಸದಸ್ಯರಿಗೂ ಸಾಮಾನ್ಯವಾಗಿರುವ ಗುರಿಯನ್ನು ಸದಸ್ಯರೆಲ್ಲರೂ ಶ್ರಮಪಟ್ಟು ಬಂದ ಫಲಿತಾಂಶವನ್ನು ಸಮಾನವಾಗಿ ಹಂಚಿಕೊಳ್ಳುವುದು. ಮಾನವ ಸಂಘಟನೆಗಳಲ್ಲಿ ಒಂದು ಉತ್ಕೃಷ್ಟವಾದ ನಮೂನೆ ಎಂದು ಹೇಳಬಹುದು. ಸಹಕಾರಿ ಸಂಘಟನೆಗಳು ಈ ಕೆಳಗಿನ ನಿಯಮಗಳಂತೆ ಕಾರ್ಯನಿರ್ವಹಿಸುತ್ತದೆ.

1. **ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತನ:** ಸಹಕಾರಿ ಸಂಘಗಳ ಸದಸ್ಯರಾಗಲು ಸಾಮಾಜಿಕ, ರಾಜಕೀಯ, ಜಾತಿ, ಧರ್ಮ, ಲಿಂಗ ಭೇದಗಳಲಿರುವುದಿಲ್ಲ. ಆದರೆ, ಸಂಘದ ಚಟುವಟಿಕೆಯ ಜವಾಬ್ದಾರಿಯನ್ನು ಅರಿತುಕೊಳ್ಳುವವನು ಮುಕ್ತವಾಗಿ ಸದಸ್ಯನಾಗಲು ಅವಕಾಶವಿದೆ.

2. **ಪ್ರಜಾಪ್ರಭುತ್ವ ಸಂಸ್ಥೆ:** ಸಹಕಾರಿ ಸಂಸ್ಥೆಗಳು ಪ್ರಜಾಪ್ರಭುತ್ವ ಸಂಘಟನೆಗಳಾಗಿವೆ. ಅದರ ನೀತಿ ನಿರ್ಧಾರಗಳನ್ನು ಎಲ್ಲಾ ಸದಸ್ಯರು ಸಮಾನವಾಗಿ ಪಾಲ್ಗೊಂಡು ಕೈಗೊಳ್ಳುತ್ತಾರೆ. ಸದಸ್ಯರು ಆ ಸಂಘದ ಆಡಳಿತ ಮಂಡಳಿಯನ್ನು ಆಯ್ಕೆಮಾಡುತ್ತಾರೆ. ಎಲ್ಲಾ ಸದಸ್ಯರಿಗೂ ಸಮಾನವಾಗಿ ಮತ ಚಲಾಯಿಸುವ ಹಕ್ಕು ಇರುತ್ತದೆ.

3. **ಸ್ವಾಯತ್ತ ಸಂಸ್ಥೆಗಳು:** ಸಹಕಾರಿ ಸಂಘಗಳು ಸ್ವಸಹಾಯ ಸಂಘಗಳು ಸದಸ್ಯರಿಂದಲೇ ಆಡಳಿತ ಮಾಡುವ, ನಿಯಂತ್ರಿಸುವ ಸಂಘಗಳು.

4. ಸಹಕಾರಿ ಸಂಘಗಳು ಸದಸ್ಯರಿಗೆ ಶಿಕ್ಷಣ ತರಬೇತಿಗಳ ಮೂಲಕ ಸಹಕಾರಿ ತತ್ವಗಳನ್ನು ಮನವರಿಕೆ ಮಾಡುತ್ತವೆ.

ವಿಶ್ವದಾದ್ಯಂತ ಸಹಕಾರಿ ಚಳವಳಿಯನ್ನು ಉತ್ತೇಜಿಸುವ ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟ 1895ರಲ್ಲಿ ಪ್ರಾರಂಭವಾಯಿತು. ಅಂದಿನಿಂದ ಅಂತರಾಷ್ಟ್ರೀಯವಾಗಿ ಸಹಕಾರಿ ತತ್ವಗಳ

ವ್ಯಾಖ್ಯೆ, ನೀತಿ ನಿಯಮಗಳನ್ನು ನಿರೂಪಿಸುವ ಸಂಸ್ಥೆಯಾಗಿ ವಿಶ್ವದಾದ್ಯಂತ ಒಪ್ಪಿಕೊಳ್ಳಲಾಗಿದೆ. ಸಹಕಾರಿ ಉದ್ದಿಮೆಗಳನ್ನು ಪ್ರಚೋದಿಸಿ ಸಹಕಾರಿ ತತ್ವವನ್ನೇ ಸಂರಕ್ಷಿಸುವುದೇ ಈ ಸಂಸ್ಥೆಯ ಪ್ರಮುಖ ಉದ್ದೇಶ. ಈ ಸಂಸ್ಥೆಯು ಸಹಕಾರಿ ನೀತಿ ನಿಯಮಗಳನ್ನು ಮೂರು ಹಂತಗಳಲ್ಲಿ ಪರಿಷ್ಕರಿಸಿ ನಿರೂಪಿಸಿದೆ. 1937, 1966, ಮತ್ತು 1995 ರಲ್ಲಿ ಅತ್ಯಂತ ಜಾಗರೂಕತೆಯಿಂದ ಪ್ರಸ್ತುತ ಜಗತ್ತಿಗೆ ಅನುಗುಣವಾಗಿ ಸಹಕಾರಿ ನಿಯಮಗಳನ್ನು ನಿರೂಪಿಸಿದೆ.

ವಿಶ್ವದ ಸಹಕಾರಿ ಕ್ಷೇತ್ರ

ಇತ್ತೀಚಿನ ದಿನಗಳಲ್ಲಿ ಸಹಕಾರಿ ಚಳವಳಿ ಜಗತ್ತಿನಾದ್ಯಂತ ಜನಪ್ರಿಯವಾಗುತ್ತಿದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಬಂಡವಾಳ ಷಾಹಿಯ ಮಾರುಕಟ್ಟೆ ವ್ಯವಸ್ಥೆ ಮತ್ತು ಸಮಾಜವಾದದ ಸರಕಾರಿ ನಿಯಂತ್ರಣ ಚರ್ಚೆಗಳ ಮಧ್ಯೆ ಪೌರಸಮಾಜ ಪಾಲ್ಗೊಳ್ಳುವುದು ಜನಪ್ರಿಯವಾಗುತ್ತಿದೆ. ಇದು ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಅನೇಕ ರೂಪಗಳಲ್ಲಿ ನಾವು ಕಾಣಬಹುದು. ಇದರಲ್ಲಿ ಸರಕಾರಿ ಸಂಘ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರಿಯಾಗಿದೆ. 1937ರಲ್ಲಿ ಸುಮಾರು 103 ದೇಶಗಳಲ್ಲಿ 8,10,000 ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದವು. ಈ ಸಂಘಗಳಲ್ಲಿ 143 ಮಿಲಿಯ ಸದಸ್ಯರಿದ್ದರು. ಆ ಬಳಿಕ ವಿಶ್ವದಾದ್ಯಂತ ಸಹಕಾರಿ ಚಳವಳಿಯು ವಿಸ್ತರಣೆಗೊಂಡು ಅನೇಕ ಬದಲಾವಣೆಗಳನ್ನು ಕಂಡುಕೊಂಡಿತು. 1988ರಲ್ಲಿ ವಿಶ್ವದಾದ್ಯಂತ ಸುಮಾರು 6,74,967 ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ 5 ಲಕ್ಷಕ್ಕೂ ಹೆಚ್ಚಿನವುಗಳು ಹಿಂದುಳಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿದ್ದುವು. ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟದ ಅಂದಾಜಿನಂತೆ ಈಗ ವಿಶ್ವದಾದ್ಯಂತ 800 ಮಿಲಿಯ ಜನರು ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದು, ಸುಮಾರು 100 ಮಿಲಿಯ ಜನರು ಉದ್ಯೋಗಿಗಳಾಗಿದ್ದಾರೆ [10].

ಸಹಕಾರಿ ಚಳವಳಿಗಳ ಅನುಭವ ವಿವಿಧ ರಾಷ್ಟ್ರಗಳಲ್ಲಿ ಬೇರೆ ಬೇರೆ ಆಗಿರುತ್ತದೆ. ಜಪಾನ್ ದೇಶದಲ್ಲಿ ವಸ್ತುಗಳ ಮಾರಾಟವನ್ನು ಸುಮಾರು ಶೇಕಡಾ 90ಕ್ಕಿಂತಲೂ ಹೆಚ್ಚು, ಸಹಕಾರಿ ಮಾರುಕಟ್ಟೆಗಳ ಮೂಲಕ ನಡೆಸಲಾಗುತ್ತಿದೆ. ಬ್ರೆಜಿಲ್‌ನಂತಹ ದೇಶಗಳಲ್ಲಿ ಆರೋಗ್ಯ

ಸಹಕಾರಿ ಸಂಘಗಳು ಜನಪ್ರಿಯವಾಗಿವೆ[11]. ಹೀಗೆಯೇ ಸಾಲ, ಮಾರುಕಟ್ಟೆ ವ್ಯವಸ್ಥೆ, ಆರೋಗ್ಯ ಮೊದಲಾದ ವಿವಿಧ ಸೇವೆಗಳನ್ನು ಸದಸ್ಯರಿಗೆ ಒದಗಿಸಲು ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಭಾರತದಲ್ಲಿ ಸಹಕಾರಿ ಚಳವಳಿಯ ಸಂಕ್ಷಿಪ್ತ ಇತಿಹಾಸ

ಭಾರತದಲ್ಲಿ ಸಹಕಾರಿ ಚಳವಳಿಯನ್ನು ಬಹಳ ಪ್ರಾಚೀನ ಕಾಲದಿಂದಲೇ ಗುರುತಿಸಬಹುದು. ಆದರೆ 19ನೇ ಶತಮಾನದಿಂದೀಚೆಗೆ ಅದರ ಬೆಳವಣಿಗೆ ಗಮನಾರ್ಹವಾಗಿದೆ. ಆದ್ದರಿಂದ, ಭಾರತದ ಸಹಕಾರಿ ಚಳವಳಿಯ ಇತಿಹಾಸವನ್ನು ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದ ಘಟ್ಟಗಳಲ್ಲಿ ಗುರುತಿಸಬಹುದು.

ಸ್ವಾತಂತ್ರ್ಯ ಪೂರ್ವ

ಭಾರತದಲ್ಲಿ ಸಹಕಾರಿ ಚಳವಳಿಯ ಇತಿಹಾಸ 19ನೇ ಶತಮಾನದ ಕೊನೆಯ ಭಾಗದಲ್ಲಿ ಪ್ರಾರಂಭವಾಯಿತು. ಪಂಜಾಬ್ ಮತು ಉತ್ತರಪ್ರದೇಶ ರಾಜ್ಯಗಳಲ್ಲಿ ಅನೇಕ ಪತ್ತಿನ ಸಹಕಾರಿ ಸಂಘಗಳು ಸ್ಥಾಪಿಸಲ್ಪಟ್ಟವು. ಅದೇ ಕಾಲದಲ್ಲಿ ಜರ್ಮನಿಯಲ್ಲಿ ನಡೆಯುತ್ತಿದ್ದ ಸಹಕಾರಿ ಆಂದೋಲನವನ್ನು ಅಭ್ಯಾಸಮಾಡಲು ಆಗಿನ ಮದ್ರಾಸ್ ಸರ್ಕಾರ ಸರ್ ಫೆಡ್ರಿಕ್ ನಿಕೋಲ್ಸನ್ ಅವರನ್ನು ಕಳಿಸಿಕೊಟ್ಟಿತು. ನಿಕೋಲ್ಸನ್ 1895ರಲ್ಲಿ ವರದಿ ಸಲ್ಲಿಸಿ ರೈಫಿಜನ್ ಮಾದರಿಯಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕೆಂದು ಶಿಫಾರಸ್ಸು ಮಾಡಿದರು. 1901ರಲ್ಲಿ ಕ್ಷಾಮ ಪರಿಹಾರ ಸಮಿತಿ ಸಹ ಇದೇ ಮಾದರಿಯ ಸಂಘಗಳನ್ನು ಸ್ಥಾಪಿಸುವಂತೆ ಶಿಫಾರಸ್ಸು ಮಾಡಿತು [12]. ಆ ಮೇರೆಗೆ ಸರ್ಕಾರ 1904ರಲ್ಲಿ ಸರ್ಕಾರವು ಸಹಕಾರಿ ಸಂಘಗಳ ಕಾಯಿದೆಯನ್ನು ಜಾರಿಗೆ ತರುವುದರೊಂದಿಗೆ ಭಾರತದಲ್ಲಿ ಸಹಕಾರಿ ಆಂದೋಲನ ಆರಂಭವಾಯಿತು

1904ರ ಸಹಕಾರಿ ಸಂಘಗಳ ಕಾನೂನು ಗ್ರಾಮೀಣ ಭಾಗದಲ್ಲಿ ರೈಫಿಜನ್ ಮಾದರಿಯಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ಷೂಲ್ಜ್ ಡೆಲಿಶ್ ಮಾದರಿಯ ಸಂಘಗಳನ್ನು ಸ್ಥಾಪಿಸಲು ಅವಕಾಶ ನೀಡಿತು. ಆದರೆ ಈ ಕಾಯಿದೆಯಲ್ಲಿ ಹಲವು ನ್ಯೂನತೆಗಳಿದ್ದವು. ಈ

ಕಾನೂನು ಸಾಲ ನೀಡುವ ಸಂಘಗಳಿಗೆ ಅವಕಾಶ ನೀಡಿರಲಿಲ್ಲ ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳೆಂಬ ವರ್ಗೀಕರಣವನ್ನು ವೈಜ್ಞಾನಿಕವಾಗಿ ಮಾಡಿರಲಿಲ್ಲ. ಆದುದರಿಂದ ಈ ದೋಷಗಳ ನಿವಾರಣೆಗೆ 1912ರಲ್ಲಿ ಹೊಸದಾದೊಂದು ಕಾಯಿದೆಯನ್ನು ಅನುಷ್ಠಾನಕ್ಕೆ ತಂದು ಪತ್ತು ಹೊರತಾದ ಸಹಕಾರಿ ಸಂಘಗಳ ಸ್ಥಾಪನೆಗೆ ಅವಕಾಶಕಲ್ಪಿಸಿಕೊಡಲಾಯಿತು.

1919ರಲ್ಲಿ ಸರ್ಕಾರ ಮತ್ತೊಂದು ಸಹಕಾರಿ ಕಾನೂನನ್ನು ರಚಿಸಿ ಸಹಕಾರವನ್ನು ರಾಜ್ಯಗಳ ಅಧಿಕಾರಕ್ಕೆ ವರ್ಗಾಯಿಸಿತು. ಈ ಕಾಯಿದೆ ರಾಜ್ಯಗಳಿಗೆ 1912ರ ಸಹಕಾರಿ ಸಂಘಗಳ ಕಾನೂನನ್ನು ಅನುಸರಿಸುವ ಅಥವಾ ತಮ್ಮದೇ ಕಾನೂನನ್ನು ರಚಿಸಿಕೊಳ್ಳುವ ಸ್ವಾತಂತ್ರ್ಯನೀಡಿತು. ಪರಿಣಾಮವಾಗಿ ರಾಜ್ಯಗಳು ತಮ್ಮ ಪ್ರಾದೇಶಿಕ ಅಗತ್ಯಗಳಿಗೆ ತಕ್ಕಂತೆ ಸಹಕಾರಿ ಸಂಘಗಳನ್ನು ರಚಿಸಿಕೊಂಡವು. ಪ್ರಪಂಚದ ಮಹಾ ಆರ್ಥಿಕ ಮುಗ್ಗಟ್ಟು ಸಹಕಾರಿ ಚಳುವಳಿಗೆ ದೊಡ್ಡ ಆಘಾತನೀಡಿತು. ಆದರೆ ದ್ವಿತೀಯ ಮಹಾಯುದ್ಧದ ವೇಳೆಯಲ್ಲಿ ಸಹಕಾರಿ ರಂಗ ಪುನ: ಚೇತರಿಸಿಕೊಂಡಿತು [13].

ಸ್ವಾತಂತ್ರ್ಯನಂತರ

ದೇಶದ ಸ್ವಾತಂತ್ರ್ಯದ ತರುವಾಯ ಸಹಕಾರಿ ಚಳುವಳಿ ಸರ್ಕಾರದಿಂದ ಉತ್ತಮ ಪ್ರೋತ್ಸಾಹ ಪಡೆಯಿತು. 1954ರ ಆಲ್ ಇಂಡಿಯಾ ರೂರಲ್ ಕ್ರೆಡಿಟ್ ಸರ್ವೆ[14] ವರದಿಯು ಭಾರತದಲ್ಲಿ ಸಹಕಾರಿ ಚಳವಳಿಯ ಬೆಳವಣಿಗೆಗೆ ಅಡಿಗಲ್ಲು ಹಾಕಿಕೊಟ್ಟಿತು. ಪಂಚವಾರ್ಷಿಕ ಯೋಜನೆಗಳಾವಧಿಯಲ್ಲಿ ಸಹಕಾರಿ ಚಳವಳಿ ಯೋಜಿತ ಅಭಿವೃದ್ಧಿಯ ಮೂಲಮಂತ್ರವಾಯಿತು. ಆ ಅವಧಿಯಲ್ಲಿ ವಿವಿಧ ರೀತಿಯ ಸಹಕಾರಿ ಸಂಘಗಳು ಸ್ಥಾಪನೆಗೊಂಡವು. ಕರ್ನಾಟಕ, ಉತ್ತರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಗುಜರಾತ್, ಪಂಜಾಬ್, ಹರ್ಯಾಣ, ಮುಂತಾದ ರಾಜ್ಯಗಳಲ್ಲಿ ಸಹಕಾರಿ ಚಳವಳಿ ಅದ್ವಿತೀಯ ಪ್ರಗತಿ ಸಾಧಿಸಿತು. ಸಹಕಾರಿ ಆಂದೋಲನ ದೇಶದ ಮೂಲೆ ಮೂಲೆಗೂ ಹಬ್ಬಿತು. ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸಹಕಾರಿ ಸಂಘಗಳನ್ನು ವಿಶೇಷವಾಗಿ ಆಶ್ರಯಿಸಲಾಯಿತು. ಆರ್ಥಿಕತೆಯ ಎಲ್ಲಾ ಕ್ಷೇತ್ರಗಳಲ್ಲಿ ಸಹಕಾರಿ ಸಂಘಗಳು ತಲೆ ಎತ್ತಿದವು.

ಚಳವಳಿಯ ಮಹತ್ವ (ಒಳಿತುಗಳು) [15]

ಭಾರತದಲ್ಲಿ ಸಹಕಾರಿ ಚಳವಳಿಯು ಹಲವಾರು ಪ್ರಯೋಜನಗಳನ್ನು ಕಲ್ಪಿಸಿಕೊಟ್ಟಿದೆ. ಅವುಗಳಲ್ಲಿ ಪ್ರಮುಖವಾದವುಗಳಿವು.

1. **ಸುಲಭ ಸಾಲ ಸೌಲಭ್ಯ:** ಸಹಕಾರಿ ಸಂಘಗಳು ಸದಸ್ಯರಿಗೆ ಸುಲಭವಾಗಿ ಕಡಿಮೆ ಬಡ್ಡಿಯ ದರದಲ್ಲಿ ಸಾಲವನ್ನು ಒದಗಿಸುತ್ತವೆ. ಅವು ಅಸ್ತಿತ್ವಕ್ಕೆ ಬಂದ ಬಳಿಕ ವೃತ್ತಿಪರ ಸಾಲದಾತರ ಮಹತ್ವ ಕಡಿಮೆಯಾಗಿದೆ. ಶೋಷಣೆ ಮಾಯವಾಗಿ ರೈತರಿಗೆ ತಮ್ಮ ಜೀವನಮಟ್ಟವನ್ನು ಎತ್ತರಿಸಲು ಸಾಧ್ಯವಾಗಿದೆ.

2. **ಅಧಿಕ ಉತ್ಪಾದನೆ:** ಸಹಕಾರಿ ಸಂಘಗಳು ಕೃಷಿಗೆ ಬಹಳ ಉತ್ತೇಜನ ನೀಡಿವೆ. ಕೃಷಿ ಯಂತ್ರೋಪಕರಣ, ಪಂಪುಸೆಟ್ಟು, ರಸಗೊಬ್ಬರ, ಅಧಿಕ ಇಳುವರಿಯ ಸುಧಾರಿತ ಬೀಜಗಳ ಪೂರೈಕೆ, ಕೀಟನಾಶಕಗಳು, ಕೃಷಿಯುತ್ಪನ್ನ ಮಾರಾಟ ವ್ಯವಸ್ಥೆ ಇವೇ ಮುಂತಾದ ಸೌಲಭ್ಯಗಳಿಂದಾಗಿ ಕೃಷಿ ಉತ್ಪಾದನೆ ಅಧಿಕವಾಗಿದೆ.

3. **ಮೌಲ್ಯಾವಧಿ:** ಸಹಕಾರವು ಒಂದು ಜೀವನ ತತ್ವವಾಗಿದೆ. ಅದು ಜನರಲ್ಲಿ ಭ್ರಾತೃತ್ವ, ಸಮಾನತೆ, ಸ್ವಸಹಾಯ, ಪರಸ್ಪರ ಸಹಾಯ, ಪ್ರಾಮಾಣಿಕತೆ, ಉದ್ಯಮಶೀಲತೆ, ಸರಳತನ ಮುಂತಾದ ಮೌಲ್ಯಗಳನ್ನು ಬೆಳೆಸುತ್ತದೆ. ಸಹಕಾರಿ ಸಂಘಗಳು ಉತ್ಪಾದಕ ಉದ್ದೇಶಗಳಿಗೆ ಸಾಲ ನೀಡುತ್ತವೆ. ಹಾಗಾಗಿ ಜನರು ದುಂದುವೆಚ್ಚ ಮಾಡಲು ಸಾಧ್ಯವಾಗುವುದಿಲ್ಲ. ಸಹಕಾರ ಚಳವಳಿ ಮಾನವೀಯತೆಯನ್ನು ನೆಲೆಗೊಳಿಸುತ್ತದೆ.

4. **ಯೋಗ್ಯ ಪ್ರತಿಫಲ:** ಮೊದಲು ರೈತರ ಹುಟ್ಟುವಳಿಗೆ ಮಾರುಕಟ್ಟೆಯಲ್ಲಿ ಬಹಳ ಕಡಿಮೆ ಪ್ರತಿಫಲ ದೊರೆಯುತ್ತಿತ್ತು. ವ್ಯಾಪಾರಿಗಳು ಮತ್ತು ಮಧ್ಯವರ್ತಿಗಳು ರೈತರ ಹುಟ್ಟುವಳಿಗೆ ಬಹಳ ಕಡಿಮೆ ಬೆಲೆ ನೀಡಿ ಅವರನ್ನು ಶೋಷಿಸುತ್ತಿದ್ದರು. ಸಹಕಾರಿ ಸಂಘಗಳ ರಚನೆಯಾದ

ಬಳಿಕ ಪರಿಸ್ಥಿತಿ ಬದಲಾಗಿದೆ. ಸಹಕಾರಿ ಮಾರುಕಟ್ಟೆ ಸಂಘಗಳು ರೈತರ ಹುಟ್ಟುವಳಿಗೆ ಯೋಗ್ಯವಾದ ಪ್ರತಿಫಲವನ್ನು ದೊರಕಿಸಿಕೊಡುತ್ತವೆ.

5. **ಅವಶ್ಯಕ ಸಾಮಗ್ರಿಗಳ ಪೂರೈಕೆ:** ಸಹಕಾರಿ ಸಂಘಗಳು ಭಾರತದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸಹಕಾರಿಯಾಗಿವೆ. ಬಳಕೆದಾರರ ಸಹಕಾರಿ ಸಂಘಗಳು ಕಡಿಮೆ ಬೆಲೆಯಲ್ಲಿ ಗ್ರಾಹಕರಿಗೆ ಅವಶ್ಯಕ ಸಾಮಾಗ್ರಿಗಳನ್ನು ಒದಗಿಸುತ್ತವೆ. ಮಧ್ಯಮ, ಬಡ ಮತ್ತು ದುರ್ಬಲ ವರ್ಗಗಳ ಜನರಿಗೆ ವಸತಿ ನಿರ್ಮಾಣಕ್ಕೆ ಸಹಕಾರಿ ಸಂಘಗಳು ಸಹಾಯ ಮಾಡುತ್ತವೆ.

6. **ಪ್ರಜಾಪ್ರಭುತ್ವದ ಸಂರಕ್ಷಣೆ:** ಸಹಕಾರಿ ಸಂಘಗಳು ಪ್ರಜಾಪ್ರಭುತ್ವದ ತಳಹದಿಯಲ್ಲಿ ಸ್ಥಾಪಿತವಾಗಿರುತ್ತವೆ. ಮತ ಚಲಾವಣೆಯ ಮಹತ್ವವನ್ನು ಅವು ತಿಳಿಯಪಡಿಸುತ್ತವೆ. ತನ್ಮೂಲಕ ಪ್ರಜಾಪ್ರಭುತ್ವದ ಸಂರಕ್ಷಣೆ ಮಾಡುತ್ತವೆ.

7. **ಸಾಮಾಜಿಕ ಲಾಭಗಳು:** ಸಹಕಾರಿ ಸಂಘಗಳು ಅನೇಕ ಸಾಮಾಜಿಕ ಸೇವೆಗಳನ್ನು ಸಲ್ಲಿಸುತ್ತಿವೆ. ಶಿಕ್ಷಣ ಪ್ರಸಾರ, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ಪೂರೈಕೆ ಮುಂತಾದ ಸೌಲಭ್ಯಗಳನ್ನು ಪೂರೈಸುತ್ತಿವೆ. ಇದರಿಂದಾಗಿ ಸಾಮಾಜಿಕ ಪರಿಸರ ಉತ್ತಮಗೊಳ್ಳುತ್ತಿದೆ.

8. **ನೈತಿಕ ಲಾಭಗಳು:** ಸಹಕಾರಿ ಸಂಘಗಳು ಗ್ರಾಮೀಣ ಪ್ರದೇಶಗಳಲ್ಲಿ ನೈತಿಕ ಪರಿಸರವನ್ನು ಸುಧಾರಿಸಲು ನೆರವಾಗಿವೆ. ಅವು ಜನರ ಕುಡಿತ, ಜೂಜಾಟ, ಮುಂತಾದ ದುಷ್ಚಟಗಳನ್ನು ಕಡಿಮೆಗೊಳಿಸಿವೆ.

9. **ರಾಜಕೀಯ ತಿಳುವಳಿಕೆ:** ಸಹಕಾರಿ ಸಂಘಗಳು ಜನರಲ್ಲಿ ರಾಜಕೀಯ ತಿಳುವಳಿಕೆಗಳನ್ನು ನೀಡುತ್ತಿವೆ. ಅವುಗಳು ರಾಜಕೀಯ ತರಬೇತಿ ಮತ್ತು ತಿಳುವಳಿಕೆಯನ್ನು ನೀಡುವ ಪ್ರಮುಖ ಸ್ಥಳಗಳಾಗಿವೆ.

ಚಳವಳಿಯ ಸಮಸ್ಯೆಗಳು (ದೋಷಗಳು) [16]

ಭಾರತದಲ್ಲಿ ಸಹಕಾರಿ ಚಳವಳಿಯು ಕೆಲವು ದೋಷಗಳಿಂದ ಬಳಲುತ್ತಿದೆ:

1. **ಜನಪ್ರಿಯವಲ್ಲ:** 1904ರಿಂದಲೇ ಸಹಕಾರಿ ಚಳವಳಿ ಭಾರತದಲ್ಲಿ ಆರಂಭವಾಗಿದ್ದರೂ ಅದು ಸರಕಾರದ ಆಂದೋಲನವಾಗಿ ಉಳಿದಿರುವುದು ಒಂದು ದೊಡ್ಡ ದುರಂತ. ಜನರು ಸಹಕಾರಿ ತತ್ವವನ್ನು ಮೈಗೂಡಿಸಿಕೊಳ್ಳದಿರುವುದು ಮತ್ತು ಸಹಕಾರವನ್ನು ಸರಕಾರದ ಕಾರ್ಯಕ್ರಮವೆಂದೇ ತಿಳಿದಿರುವುದರಿಂದ ಚಳವಳಿ ನಿಜವಾದ ಅರ್ಥದಲ್ಲಿ ಜನರ ಚಳವಳಿಯಾಗಿಲ್ಲ.

2. **ಬಂಡವಾಳದ ಕೊರತೆ :** ಸಹಕಾರಿ ಸಂಘಗಳು ಸಾಲ ನೀಡಲಿಕ್ಕಾಗಿಯೇ ಇರುವ ಸಂಸ್ಥೆಗಳೆಂದು ಜನ ಭಾವಿಸಿದಂತಿದೆ. ಸಹಕಾರಿ ಸಂಘಗಳು ಷೇರುಗಳನ್ನು ಮತ್ತು ಸಾರ್ವಜನಿಕರಿಂದ ಠೇವಣಿಗಳನ್ನು ಸಂಗ್ರಹಿಸುವಲ್ಲಿ ಸೋತಿವೆ. ಆ ಕಾರಣದಿಂದಾಗಿ ವ್ಯವಹಾರ ಬಂಡವಾಳಕ್ಕೆ ಸಹಕಾರಿ ಸಂಘಗಳು ಸರಕಾರವನ್ನು ಅಥವಾ ರಿಜರ್ವ್ ಬ್ಯಾಂಕನ್ನು ಅವಲಂಬಿಸಬೇಕಾಗುತ್ತದೆ. ಸರಕಾರವಾಗಲಿ, ರಿಸರ್ವ್ ಬ್ಯಾಂಕಾಗಲಿ, ಸಹಕಾರಿ ಸಂಘಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಬಂಡವಾಳ ಒದಗಿಸುವುದಿಲ್ಲ. ಹಾಗಾಗಿ ಸದಸ್ಯರುಗಳಿಗೆ ಸಾಕಷ್ಟು ಹಣಕಾಸು ಒದಗಿಸಲು ಸಹಕಾರಿ ಸಂಘಗಳಿಗೆ ಸಾಧ್ಯವಾಗಿಲ್ಲ.

3. **ನಿಧಾನ ಪ್ರಗತಿ :** ಸಹಕಾರಿ ಸಂಘಗಳ ಪ್ರಗತಿ ಬಹಳ ನಿಧಾನವಾಗಿದೆ. ಅವಶ್ಯಕತೆಯಿರುವ ವ್ಯಕ್ತಿಗಳನ್ನು ತಮ್ಮ ತೆಕ್ಕೆಯಲ್ಲಿ ಬಳಸಿಕೊಳ್ಳಲು ಸಹಕಾರಿ ಸಂಘಗಳಿಗೆ ಸಾಧ್ಯವಾಗಿಲ್ಲ. ಮಾತ್ರವಲ್ಲ ಸಾಲ ನೀಡಿಕೆಯಲ್ಲಿ ಅನ್ಯಾಯ ಸಂಭವಿಸುತ್ತಿದೆ. ಬಡ ಮತ್ತು ಮಧ್ಯಮ ವರ್ಗೀಯರಿಗೆ ಸಾಲ ಕೊಡುವ ಬದಲು ಶ್ರೀಮಂತರಿಗೇ ಬಹುತೇಕ ಸಾಲ ನೀಡಲಾಗಿದೆ. ಆಗತ್ಯವುಳ್ಳವರಿಗೆ ಅಗತ್ಯಕ್ಕೆ ತಕ್ಕಷ್ಟು ಹಣಕಾಸು ಒದಗಿಸಲು ಸಹಕಾರಿ ಸಂಘಗಳಿಗೆ ಸಾಧ್ಯವಾಗದ ಕಾರಣ ಗ್ರಾಮೀಣ ಋಣಭಾರ ನಿರೀಕ್ಷಿತ ಮಟ್ಟದಲ್ಲಿ ಕಡಿಮೆಯಾಗಿಲ್ಲ.

4. **ಆಡಳಿತ ದೋಷ :** ಅದಕ್ಷ ಆಡಳಿತವು ಸಹಕಾರಿ ಸಂಘಗಳ ಬಲು ದೊಡ್ಡ ದೋಷವಾಗಿದೆ. ಸಹಕಾರಿ ಸಂಘಗಳ ಆಡಳಿತ ವರ್ಗಕ್ಕೆ ಮತ್ತು ಸಿಬ್ಬಂದಿ ವರ್ಗಕ್ಕೆ ಸಾಕಷ್ಟು ತರಬೇತಿ ಇಲ್ಲ. ಸಹಕಾರಿ ಸಂಸ್ಥೆಗಳಿಗೆ ಪಕ್ಷ ರಾಜಕೀಯ ಪ್ರವೇಶಿಸಿದೆ. ಸ್ವಾರ್ಥಿ ರಾಜಕಾರಣಿಗಳು ಸಹಕಾರಿ ತತ್ವವನ್ನು ತಮ್ಮ ಮೂಗಿನ ನೇರಕ್ಕೆ ಅರ್ಥೈಸಿಕೊಂಡಿದ್ದಾರೆ ಹಾಗೂ ಸಹಕಾರಿ ಸಂಘಗಳನ್ನು ದುರುಪಯೋಗಿಸಿಕೊಳ್ಳುತ್ತಾರೆ. ಅದಕ್ಷ ಆಡಳಿತ, ಜಾತೀಯತೆ ಮತ್ತು ಪಕ್ಷ ರಾಜಕೀಯ ಸಹಕಾರಿ ಆಂದೋಲನವನ್ನು ದುರ್ಬಲಗೊಳಿಸಿವೆ.

5. **ಸ್ಥಾಪಿತ ಹಿತಗಳು:** ಸಹಕಾರಿ ಸಂಸ್ಥೆಗಳು ಪಟ್ಟಭದ್ರರ ಕೈಯಲ್ಲಿರುವುದು ಇನ್ನೊಂದು ದೋಷ. ಇಂದಿಗೂ ಸಹಕಾರಿ ಸಂಸ್ಥೆಗಳು ಶ್ರೀಮಂತರ, ಪಟ್ಟಭದ್ರ ಹಿತಾಸಕ್ತಿಗಳ ಹಿಡಿತದಲ್ಲಿವೆ. ಬಡವರಿಗೆ ಮತ್ತು ದುರ್ಬಲರಿಗೆ ಸಾಲ ನೀಡಿಕೆಯಲ್ಲಿ ಅನ್ಯಾಯವಾಗುತ್ತಿದೆ. ಎಷ್ಟೋ ಮಂದಿ ಶ್ರೀಮಂತ ಸದಸ್ಯರು ಸಹಕಾರಿ ಸಂಘಗಳಿಂದ ಕಡಿಮೆ ಬಡ್ಡಿಯ ದರಕ್ಕೆ ಸಾಲ ಪಡೆದು, ಹೆಚ್ಚು ಬಡ್ಡಿ ನೀಡುವ ಹಣಕಾಸು ಸಂಸ್ಥೆಗಳಲ್ಲಿ ಈ ಸಾಲವನ್ನು ನಿರಖು ಠೇವಣಿಯಾಗಿ ಇರಿಸಿ ಹಣ ಮಾಡಿಕೊಂಡ ಉದಾಹರಣೆಗಳು ಬೇಕಷ್ಟಿವೆ.

6. **ಸರಕಾರಿ ನಿಯಂತ್ರಣ:** ಸರಕಾರವು ಕೂಡಾ ಸಹಕಾರಿ ಚಳವಳಿಯಲ್ಲಿ ಅನಗತ್ಯ ಹಸ್ತಕ್ಷೇಪ ನಡೆಸುತ್ತದೆ. ಕೆಲವು ನಿಯಂತ್ರಣಗಳಿಂದಾಗಿ ಸಹಕಾರಿ ಸಂಸ್ಥೆಗಳ ಬೆಳವಣಿಗೆ ಕುಂಠಿತವಾಗಿದೆ. ಅನೇಕ ರಾಜ್ಯಗಳಲ್ಲಿ ಸಹಕಾರಿ ಸಂಘಗಳಿಗೆ ಸರಿಯಾದ ಸಮಯದಲ್ಲಿ ಚುನಾವಣೆಗಳು ನಡೆಯುತ್ತಿಲ್ಲ. ಲೆಕ್ಕ ಪರಿಶೋಧನೆಯೂ ನಡೆಯುತ್ತಿಲ್ಲ.

7. **ಸಾಲ ವಸೂಲಿಯಲ್ಲಿ ಸೋಲು:** ಸಹಕಾರಿ ಸಂಘಗಳು ಸಾಲ ನೀಡುತ್ತಿವೆಯೇ ವಿನಾ, ಸಾಲ ವಸೂಲಿಯಲ್ಲಿ ಯಶಸ್ಸು ಸಾಧಿಸಿಲ್ಲ. ಶ್ರೀಮಂತ ರೈತರುಗಳು ಸಂಘಟನೆ ಮಾಡಿಕೊಂಡು ಸಾಲ ವಸೂಲಿಯಾಗದಂತೆ ನೋಡಿಕೊಳ್ಳುತ್ತಿರುವುದು ವಿಷಾದದ ಸಂಗತಿ. ಸಹಕಾರಿ ಸಾಲ ಮನ್ನಾ ಆದರೆ ಪ್ರಯೋಜನ ದೊರೆಯುವುದು ಬಹುತೇಕವಾಗಿ ಶ್ರೀಮಂತ ರೈತರಿಗೆ.

ಸಹಕಾರಿ ಕ್ಷೇತ್ರದ ಸುಧಾರಣೆಗಳು

ಆರ್ಥಿಕ ಉದಾರೀಕರಣ ಮತ್ತು ಜಾಗತೀಕರಣದಿಂದಾಗಿ ಸಹಕಾರಿ ಸಂಸ್ಥೆಗಳು ತೀರಾ ಸಂಕಷ್ಟಕ್ಕೆ ಸಿಲುಕಿವೆ. ಅದಕ್ಕಾಗಿ ಭಾರತ ಸರ್ಕಾರ ಸಹಕಾರಿ ಕ್ಷೇತ್ರದಲ್ಲಿ ಈ ಕೆಳಗಿನ ಸುಧಾರಣೆಗಳಿಗೆ ಆಸ್ಪದವಿತ್ತಿದೆ:


ಬ್ರಹ್ಮ ಪ್ರಕಾಶ ಸಮಿತಿಯ[17] ಶಿಫಾರಸ್ಸಿನಂತೆ ಅಗೋಸ್ತು 2002ರಲ್ಲಿ ನೂತನ ಬಹುರಾಜ್ಯ ಸಹಕಾರಿ ಸಂಘಗಳ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಈ ಕಾಯಿದೆಯ ಮುಖ್ಯಾಂಶಗಳು ಹೀಗಿವೆ:

1. ಸಹಕಾರಿ ಸಂಘಗಳಿಗೆ ಸಂಪೂರ್ಣ ಕಾರ್ಯಾತ್ಮಕ ಸ್ವಾಯತ್ತತೆ ನೀಡುವುದು ಮತ್ತು ಪ್ರಜಾಸತ್ತಾತ್ಮಕ ಆಡಳಿತಕ್ಕೆ ಅವಕಾಶ ಕಲ್ಪಿಸುವುದು.
2. ಸರ್ಕಾರವು ಶೇ.51ರಷ್ಟು ಮತ್ತು ಅದಕ್ಕಿಂತ ಹೆಚ್ಚು ಪಾಲು ಬಂಡವಾಳ ಹೊಂದಿರುವ ಸಂಘಗಳಲ್ಲಿ ಮಾತ್ರ ಸರ್ಕಾರಕ್ಕೆ ಸಂಘದ ಮೇಲೆ ಅಧಿಕಾರವಿರುತ್ತದೆ. ಶೇ.51ಕ್ಕಿಂದ ಕಡಿಮೆ ಪಾಲು ಬಂಡವಾಳವಿದ್ದರೆ ಸರ್ಕಾರಕ್ಕೆ ಸಂಘದ ಮೇಲೆ ಯಾವುದೇ ಅಧಿಕಾರವಿರುವುದಿಲ್ಲ.
3. ಠೇವಣಿ ಸಂಗ್ರಹ, ಸಾಲ ಎತ್ತುಗಡೆ ಮತ್ತು ಅನುದಾನಗಳಿಂದ ಸಂಪನ್ಮೂಲಗಳನ್ನು ಸಂಚಯಿಸಲು ಸಂಘಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ.
4. ಕೇಂದ್ರ ಸಹಕಾರಿ ಸಂಘಗಳಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಗಿದೆ. ವಿವಾದಗಳನ್ನು ಪರಿಹರಿಸುವ ಮತ್ತು ಲೆಕ್ಕ ಪತ್ರ ಶೋಧಕರನ್ನು ನೇಮಿಸಿಕೊಳ್ಳುವ ಸ್ವಾತಂತ್ರ್ಯ ಅವಕ್ಕಿದೆ. ಸಹಕಾರಿ ಕ್ಷೇತ್ರಕ್ಕೆ ನೀಡಲಾಗಿರುವ ಸ್ವಾಯತ್ತತೆ ಸಹಕಾರ ಚಳವಳಿಯ ಚಿತ್ರಣವನ್ನು ಸಂಪೂರ್ಣವಾಗಿ ಬದಲಾಯಿಸಲಿದೆ.

ಸಹಕಾರಿ ಸಂಘಗಳ ವರ್ಗೀಕರಣ

ಸೇವಾ ದೃಷ್ಟಿಯಿಂದ ಒಬ್ಬನು ಎಲ್ಲರಿಗಾಗಿ ಮತ್ತು ಎಲ್ಲರೂ ಒಬ್ಬನಿಗಾಗಿ ಎಂಬ ತತ್ವದ ಆಧಾರದಲ್ಲಿ ಪ್ರಜಾಸತ್ತಾತ್ಮಕ ರೀತಿಯಲ್ಲಿ, ಸಹಕಾರಿ ಸಂಘಗಳ ಕಾಯ್ದೆಯನ್ವಯ ರಚನೆಯಾಗುವ ಸಂಘಟನೆಗಳನ್ನು ಸಹಕಾರಿ ಸಂಘಗಳೆಂದು ಕರೆಯಲಾಗುತ್ತದೆ.

ಸಹಕಾರಿ ಸಂಘಗಳನ್ನು ಹೀಗೆ ವರ್ಗೀಕರಿಸಲಾಗುತ್ತದೆ.[18]



ನಕ್ಷೆ: ಸಹಕಾರಿ ಸಂಘಗಳ ವರ್ಗೀಕರಣ

ಸ್ಥೂಲವಾಗಿ ಸಹಕಾರಿ ಸಂಘಗಳನ್ನು ಪತ್ತಿನ ಸಂಘಗಳು ಮತ್ತು ಪತ್ತು ಹೊರತಾದ ಸಂಘಗಳೆಂದು ವರ್ಗೀಕರಿಸಲಾಗುತ್ತದೆ.

ಪತ್ತಿನ ಸಹಕಾರಿ ಸಂಘಗಳು

ಸಹಕಾರಿ ತತ್ವದಡಿಯಲ್ಲಿ ಕಡಿಮೆ ಬಡ್ಡಿಯ ದರದಲ್ಲಿ ಸದಸ್ಯರಿಗೆ ಸಾಲ ನೀಡುವುದನ್ನು ಪ್ರಧಾನ ಉದ್ದೇಶವಾಗಿರಿಸಿಕೊಂಡಿರುವ ಸಹಕಾರಿ ಸಂಘಗಳಿಗೆ ಪತ್ತಿನ ಸಹಕಾರಿ ಸಂಘಗಳೆಂದು ಹೆಸರು. ಪತ್ತಿನ ಸಹಕಾರಿ ಸಂಘಗಳಲ್ಲಿ 1. ಕೃಷಿ ಪತ್ತಿನ ಸಹಕಾರಿ ಸಂಘಗಳು ಮತ್ತು 2. ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳು ಎಂದು ಎರಡು ವಿಧ.

1. **ಕೃಷಿ ಪತ್ತಿನ ಸಹಕಾರಿ ಸಂಘಗಳು:** ಕೃಷಿ ಮತ್ತು ಸಂಬಂಧೀ ಚಟುವಟಿಕೆಗಳಿಗೆ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಸಹಕಾರ ತತ್ವದಡಿಯಲ್ಲಿ ನೀಡುವ ಸಂಸ್ಥೆಗಳಿಗೆ ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳೆಂದು ಹೆಸರು.

ಕೃಷಿ ಮತ್ತು ಸಂಬಂಧೀ ಚಟುವಟಿಕೆಗಳಿಗೆ ಐದು ವರ್ಷಗಳ ವರೆಗಿನ ಸಾಲ ನೀಡುವ ಸಹಕಾರಿ ಸಂಸ್ಥೆಗಳು ಅಲ್ಪಾವಧಿ ಕೃಷಿ ಪತ್ತಿನ ಸಹಕಾರಿ ಸಂಘಗಳಾಗಿವೆ. ಅವು ಮೂರು ಹಂತದ ರಚನೆಯನ್ನು ಹೊಂದಿವೆ:

1. ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು
2. ಜಿಲ್ಲಾ ಮಟ್ಟದಲ್ಲಿ ಕೇಂದ್ರೀಯ ಕೃಷಿ ಪತ್ತಿನ ಸಹಕಾರಿ ಸಂಘಗಳು
3. ರಾಜ್ಯ ಮಟ್ಟದಲ್ಲಿ ಅಪೆಕ್ಸ್ ಕೃಷಿ ಪತ್ತಿನ ಸಹಕಾರಿ ಸಂಘಗಳು

ಕೃಷಿ ಮತ್ತು ಸಂಬಂಧೀ ಚಟುವಟಿಕೆಗಳಿಗೆ ಐದಕ್ಕಿಂತ ಹೆಚ್ಚು ವರ್ಷಗಳ ಅವಧಿಯ ಸಾಲವನ್ನು ನೀಡುವ ಸಹಕಾರಿ ಸಂಸ್ಥೆಗಳು ದೀರ್ಘಾವಧಿ ಕೃಷಿ ಪತ್ತಿನ ಸಹಕಾರಿ ಸಂಘಗಳಾಗಿವೆ. ದೀರ್ಘಾವಧಿ ಕೃಷಿ ಪತ್ತಿನ ಸಂಘಗಳು ಎರಡು ಹಂತಗಳ ರಚನೆಯನ್ನು ಹೊಂದಿರುತ್ತವೆ:

1. ಪ್ರಾಥಮಿಕ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕುಗಳು ಮತ್ತು
2. ಕೇಂದ್ರ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕುಗಳು

ಭೂ ಅಭಿವೃದ್ಧಿ ಬ್ಯಾಂಕುಗಳ ಕಾರ್ಯಗಳಿವು:

1. ನೀರಾವರಿ ಮತ್ತು ಭೂಸಾರ ಸಂರಕ್ಷಣೆಗೆ ಸಾಲ ನೀಡುವುದು
2. ಭೂಮಿಯಲ್ಲಿ ಶಾಶ್ವತ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸಾಲ ನೀಡುವುದು
3. ಭೂಮಿಯನ್ನು ಕೊಳ್ಳಲು ಸಾಲ ನೀಡುವುದು
4. ವ್ಯವಸಾಯ ಯಂತ್ರೋಪಕರಣಗಳನ್ನು ಕೊಳ್ಳಲು ಸಾಲ ನೀಡುವುದು

2. ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳು

ನಗರ ಪ್ರದೇಶದ ಕುಶಲ ಕರ್ಮಿಗಳಿಗೆ, ಪಾರಂಪರಿಕ ವೃತ್ತಿಯವರಿಗೆ, ಸಣ್ಣ ವ್ಯಾಪಾರಸ್ಥರಿಗೆ ಮತ್ತು ಮಧ್ಯಮ ವರ್ಗೀಯ ಉದ್ಯೋಗಿಗಳಿಗೆ ಸಾಲ ನೀಡುವ ಸಹಕಾರಿ ಸಂಸ್ಥೆಗಳಿಗೆ ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳೆಂದು ಹೆಸರು.

ಕೃಷಿಯೇತರ ಪತ್ತಿನ ಸಹಕಾರಿ ಸಂಘಗಳಲ್ಲಿ ಎರಡು ವಿಧ:

1. ನಗರ ಸಹಕಾರಿ ಬ್ಯಾಂಕುಗಳು: ಇವು ವೈಯಕ್ತಿಕ ಭದ್ರತೆ ಮತ್ತು ಸದಸ್ಯರೊಬ್ಬರ ಜಾಮೀನಿನ ಆಧಾರದ ಮೇಲೆ ಕಡಿಮೆ ಬಡ್ಡಿದರದಲ್ಲಿ ಸದಸ್ಯರಿಗೆ ಸಾಲ ನೀಡುವ ಸಹಕಾರಿ ಸಂಸ್ಥೆಗಳಾಗಿವೆ.
2. ಉದ್ಯೋಗಿಗಳ ಸಹಕಾರಿ ಸಂಘಗಳು: ಇವು ವಿವಿಧ ಉದ್ಯೋಗಗಳಲ್ಲಿರುವ ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರ ಪ್ರಯೋಜನಕ್ಕಾಗಿ ರಚನೆಯಾದ ಸಹಕಾರ ಸಂಸ್ಥೆಗಳು.

ಕೃಷಿಯೇತರ ಪತ್ತಿನ ಸಹಕಾರಿ ಬ್ಯಾಂಕುಗಳು ಕೇಂದ್ರ ಬ್ಯಾಂಕಿನ ಸುಪರ್ದಿಯಲ್ಲಿರುತ್ತದೆ.

ಪತ್ತು ಹೊರತಾದ ಸಹಕಾರಿ ಸಂಘಗಳು

ಸಾಲ ನೀಡಿಕೆಯನ್ನು ಪ್ರಧಾನ ಕಾರ್ಯವಾಗಿಸದೆ, ಇತರ ಕಾರ್ಯಗಳನ್ನು ಸಹಕಾರಿ ತತ್ವದಡಿಯಲ್ಲಿ ಮಾಡುವ ಸಂಸ್ಥೆಗಳಿಗೆ ಪತ್ತು ಹೊರತಾದ ಸಹಕಾರಿ ಸಂಘಗಳೆಂದು ಹೆಸರು. ಪತ್ತು ಹೊರತಾದ ಸಹಕಾರಿ ಸಂಘಗಳಲ್ಲಿ ನಾಲ್ಕು ವಿಧಗಳಿವೆ:

1. ಕೃಷಿಕರ ಸಹಕಾರಿ ಮಾರಾಟ ಸಂಘಗಳು
2. ಕೃಷಿಕರ ಸಹಕಾರಿ ವ್ಯವಸಾಯ ಸಂಘಗಳು
3. ಉತ್ಪಾದಕರ ಸಹಕಾರಿ ಸಂಘಗಳು ಮತ್ತು
4. ಗ್ರಾಹಕರ ಸಹಕಾರಿ ಸಂಘಗಳು

ಇವುಗಳಲ್ಲಿ ಮೊದಲಿನವೆರಡು ಪತ್ತು ಹೊರತಾದ ಕೃಷಿ ಸಹಕಾರಿ ಸಂಘಗಳಾಗಿವೆ. ಕೊನೆಯವೆರಡು ಪತ್ತು ಹೊರತಾದ ಕೃಷಿಯೇತರ ಸಹಕಾರಿ ಸಂಘಗಳಾಗಿವೆ.

1. **ಕೃಷಿಕರ ಸಹಕಾರಿ ಮಾರಾಟ ಸಂಘಗಳು:** ರೈತರ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಹಕರಿಸುವ ಸಹಕಾರಿ ಸಂಸ್ಥೆಗಳಿಗೆ ಕೃಷಿಕರ ಸಹಕಾರಿ ಮಾರಾಟ ಸಂಘಗಳು ಎಂದು ಹೆಸರು. ಅವುಗಳ ಪ್ರಮುಖ ಕಾರ್ಯಗಳಿವು:

1. ಮಧ್ಯವರ್ತಿಗಳಿಂದ ರೈತರ ಶೋಷಣೆಯನ್ನು ತಪ್ಪಿಸಿ ಸದಸ್ಯರ ಕೃಷಿ ಹುಟ್ಟುವಳಿಗೆ ಯೋಗ್ಯ ಬೆಲೆ ಬರುವಂತೆ ಮಾಡುವುದು.
2. ರೈತರ ಚೌಕಾಶಿ ಸಾಮರ್ಥ್ಯವನ್ನು ಹೆಚ್ಚಿಸುವುದು.
3. ಸಾಗಾಟ ಮತ್ತು ದಾಸ್ತಾನು ಸೌಲಭ್ಯವನ್ನು ಒದಗಿಸುವುದು.
4. ಉತ್ಪನ್ನಗಳ ವರ್ಗೀಕರಣಕ್ಕೆ ಮತ್ತು ಗುಣಮಟ್ಟ ನಿರ್ಣಯಕ್ಕೆ ಸಹಕರಿಸುವುದು.

2. **ಕೃಷಿಕರ ಸಹಕಾರಿ ವ್ಯವಸಾಯ ಸಂಘಗಳು:** ಸದಸ್ಯರ ಕೃಷಿ ಭೂಮಿಗಳನ್ನು ಒಗ್ಗೂಡಿಸಿ ದೊಡ್ಡ ಪ್ರಮಾಣದಲ್ಲಿ ಬೇಸಾಯ ಮಾಡಿ ವರ್ಷದ ಕೊನೆಯಲ್ಲಿ ಭೂಮಿಯ ಗಾತ್ರಕ್ಕನುಗುಣವಾಗಿ ಹುಟ್ಟುವಳಿಯನ್ನು ಹಂಚುವ ಸಹಕಾರಿ ಸಂಸ್ಥೆಗಳಿಗೆ ಕೃಷಿಕರ ಸಹಕಾರಿ ವ್ಯವಸಾಯ ಸಂಘಗಳು ಎಂದು ಹೆಸರು. ಅಂತಹ ಸಂಘಗಳು ಅಸ್ತಿತ್ವದಲ್ಲಿರುವುದು ಬಹಳ ಕಡಿಮೆ.

3. **ಉತ್ಪಾದಕರ ಸಹಕಾರಿ ಸಂಘಗಳು:** ಗೃಹ ಉದ್ದಿಮೆ, ಕುಲ ವೃತ್ತಿ ಮತ್ತು ಸಣ್ಣ ಪ್ರಮಾಣದ ಉತ್ಪಾದಕರು ಸಹಕಾರಿ ತತ್ವದಡಿಯಲ್ಲಿ ರಚಿಸಿಕೊಳ್ಳುವ ಪ್ರಜಾಸತ್ತಾತ್ಮಕ ಸಂಘಟನೆಗಳಿಗೆ ಉತ್ಪಾದಕರ ಸಹಕಾರಿ ಸಂಘಗಳೆಂದು ಹೆಸರು.

ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯಗಳಿವು:

1. ಸಣ್ಣ ಉತ್ಪಾದಕರ ಚೌಕಾಶಿ ಸಾಮರ್ಥ್ಯವನ್ನು ಹೆಚ್ಚಿಸುವುದು
2. ದಲ್ಲಾಳಿಗಳಿಂದ ಸಣ್ಣ ಉತ್ಪಾದಕರ ಶೋಷಣೆಯಾಗದಂತೆ ನೋಡಿಕೊಳ್ಳುವುದು
3. ಕಡಿಮೆ ಬೆಲೆಯಲ್ಲಿ ಕಚ್ಚಾಸರಕುಗಳನ್ನು ಸದಸ್ಯರಿಗೆ ದೊರಕಿಸಿಕೊಡುವುದು
4. ಸದಸ್ಯರ ಉತ್ಪನ್ನಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವುದು

4. **ಗ್ರಾಹಕರ ಸಹಕಾರಿ ಸಂಘಗಳು:** ಕೆಳ ಮತ್ತು ಮಧ್ಯಮ ವರ್ಗಗಳಿಗೆ ಸೇರಿದ ಗ್ರಾಹಕರು ಉತ್ತಮ ಗುಣಮಟ್ಟದ ಸರಕುಗಳನ್ನು ಕಡಿಮೆ ಬೆಲೆಗಳಲ್ಲಿ ಪಡೆದು ಕೊಳ್ಳಲು ಸಹಕಾರಿ ತತ್ವದಡಿಯಲ್ಲಿ ರಚಿಸುವ ಸಂಘಟನೆಗಳಿಗೆ ಗ್ರಾಹಕರ ಸಹಕಾರಿ ಸಂಘಗಳು ಎಂದು ಹೆಸರು.

ಇತರ ಪ್ರಕಾರಗಳು

ವಿವಿಧೋದ್ದೇಶ ಸಹಕಾರಿ ಸಂಘಗಳು, ರೈತರ ಸೇವಾ ಸಂಘಗಳು ಮತ್ತು ಗೃಹ ನಿರ್ಮಾಣ ಸಂಘಗಳು ಇತರ ಪ್ರಕಾರಕ್ಕೆ ಸೇರಿದ ಸಹಕಾರಿ ಸಂಘಗಳಾಗಿವೆ:

1. **ವಿವಿಧೋದ್ದೇಶ ಸಹಕಾರಿ ಸಂಘಗಳು:** ಕೃಷಿಕರ ವಿವಿಧ ಅಗತ್ಯಗಳ ಈಡೇರಿಕೆಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ತತ್ವದಡಿಯಲ್ಲಿ ರಚನೆಯಾಗುವ ಸಂಘಟನೆಗಳನ್ನು ವಿವಿಧೋದ್ದೇಶ ಸಹಕಾರಿ ಸಂಘಗಳು ಎಂದು ಕರೆಯಲಾಗುತ್ತದೆ.

ವಿವಿಧೋದ್ದೇಶ ಸಹಕಾರಿ ಸಂಘಗಳ ಮುಖ್ಯ ಕಾರ್ಯಗಳಿವು

1. ಸದಸ್ಯರಿಗೆ ಅಲ್ಪಾವಧಿ ಮತ್ತು ಮಧ್ಯಾವಧಿ ಸಾಲ ನೀಡುವುದು
2. ಸದಸ್ಯರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಇತರ ಕೃಷಿ ಸರಂಜಾಮುಗಳನ್ನು ಒದಗಿಸುವುದು
3. ಸದಸ್ಯರಿಗೆ ಕೃಷಿ ಬಗ್ಗೆ ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣ ನೀಡುವುದು
4. ಸದಸ್ಯರ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರಕುವಂತೆ ನೋಡಿಕೊಳ್ಳುವುದು

2. **ರೈತರ ಸೇವಾ ಸಂಘಗಳು:** ರೈತರಿಗೆ ವಿವಿಧ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ತತ್ವದಡಿಯಲ್ಲಿ ರಚನೆಯಾಗುವ ಸಂಘಟನೆಗಳಿಗೆ ರೈತರ ಸೇವಾ ಸಂಘಗಳು ಎಂದು ಹೆಸರು.

ರೈತರ ಸೇವಾ ಸಂಘದ ಪ್ರಮುಖ ಕಾರ್ಯಗಳಿವು

1. ಸದಸ್ಯರಿಗೆ ಉತ್ತಮ ಗುಣಮಟ್ಟದ ಕೃಷಿ ಸರಂಜಾಮುಗಳ ಪೂರೈಕೆ
2. ಸದಸ್ಯರ ಉತ್ಪನ್ನಗಳಿಗೆ ಒಳ್ಳೆಯ ಬೆಲೆ ಬರಲು ಮಾರ್ಗದರ್ಶನ
3. ನೀರಾವರಿ ಮತ್ತು ಮಣ್ಣಿನ ಸಾರಸಂರಕ್ಷಣೆಯ ಶಿಕ್ಷಣ ನೀಡಿಕೆ
4. ರೇಷ್ಮೆಗಾರಿಕೆ, ಹೈನುಗಾರಿಕೆ, ಕೋಳಿಸಾಗಣೆ, ಹಂದಿ, ಕುರಿ ಸಾಕಣೆ, ಇತ್ಯಾದಿ ಉಪ ಉದ್ಯಮಗಳ ಬೆಳವಣಿಗೆಗೆ ಸಹಾಯ ಮಾಡುವುದು.

3. **ಗೃಹ ನಿರ್ಮಾಣ ಸಂಘಗಳು:** ನಗರ ಪ್ರದೇಶಗಳ ಮಧ್ಯಮ ವರ್ಗೀಯರು ಸ್ವಂತ ಮನೆ ಹೊಂದುವ ಉದ್ದೇಶದಿಂದ ಸಹಕಾರ ತತ್ವದಡಿಯಲ್ಲಿ ರಚಿಸಿಕೊಳ್ಳುವ ಸಂಘಟನೆಗಳನ್ನು ಗೃಹನಿರ್ಮಾಣ ಸಂಘಗಳು ಎಂದು ಕರೆಯಲಾಗುತ್ತದೆ.

ಗೃಹ ನಿರ್ಮಾಣ ಸಂಘಗಳು ಕೃಷಿಯೇತರ ಪತ್ತಿನ ಸಹಕಾರ ಸಂಘಗಳಂತೆ ಕೆಲಸ ಮಾಡುತ್ತವೆ. ಸದಸ್ಯರುಗಳಿಗೆ ಮನೆ ನಿರ್ಮಾಣಕ್ಕೆ ಮಧ್ಯಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ನೀಡುವುದು ಅವುಗಳ ಪ್ರಮುಖ ಕಾರ್ಯವಾಗಿದೆ.

ಭಾರತದಲ್ಲಿ ಸಹಕಾರಿ ಬ್ಯಾಂಕಿನ ಪ್ರಗತಿ

ಭಾರತದಲ್ಲಿ ಸಹಕಾರಿ ಸಾಲದ ಚರಿತ್ರೆ ಬಹಳ ಹಳೆಯದು. 1904 ರಲ್ಲಿ ಸಹಕಾರಿ ಸಾಲ ಸಂಘಗಳ ರಚನೆಯ ಮೂಲಕ ಭಾರತಕ್ಕೆ ಸಹಕಾರಿ ಚಳವಳಿ ಹಬ್ಬಿತು. ಗ್ರಾಮೀಣ ಋಣಭಾರವನ್ನು ಕುಗ್ಗಿಸಿ ಜನರಲ್ಲಿ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸುವುದು ಸಹಕಾರಿ ಕೃಷಿಸಾಲ ಸಂಘಗಳ ಮುಖ್ಯ ಉದ್ದೇಶವಾಗಿತ್ತು. ಪಂಚವಾರ್ಷಿಕ ಯೊಜನೆಗಳ ಬಳಿಕ ಕೃಷಿಗೆ ಸಹಕಾರಿ ಸಂಘಗಳಿಂದ ದೊರೆಯುವ ಸಾಲದ ಪ್ರಮಾಣ ಗಣನೀಯವಾಗಿ ಏರಿದೆ. ಸಹಕಾರಿ ಸಂಘಗಳು ಮುಖ್ಯವಾಗಿ ಸಣ್ಣ ರೈತರ ಅಭಿವೃದ್ಧಿಯನ್ನು ತಮ್ಮ ಗುರಿಯಾಗಿರಿಸಿಕೊಂಡಿವೆ.

1951-52ರಲ್ಲಿ ಗ್ರಾಮೀಣ ಸಾಲದಲ್ಲಿ ಸಹಕಾರಿ ಸಂಘಗಳ ಪಾಲು ಕೇವಲ 3% ಆಗಿದ್ದರೆ ಈಗ ಅದು 45% ಏರಿದೆ. 1951-52ರಲ್ಲಿ ಸಹಕಾರಿ ಸಂಘಗಳು ರೂ.23 ಕೋಟಿ ಸಾಲ ನೀಡಿದ್ದಾರೆ. 2001ರಲ್ಲಿ ಸಹಕಾರಿ ಸಂಘಗಳು ಸುಮಾರು ರೂ. 34,520 ಕೋಟಿಗಳಷ್ಟು ಕೃಷಿಸಾಲ ನೀಡಿವೆ.

ಕೃಷಿ ಸಾಲ ಸಂಘಗಳು 6% ದಿಂದ 15% ರವರೆಗೆ ವಾರ್ಷಿಕ ಬಡ್ಡಿ ವಿಧಿಸುತ್ತವೆ. ವಾಣಿಜ್ಯ ಬ್ಯಾಂಕುಗಳಿಗೆ ಮತ್ತು ಅಸಾಂಸ್ಥಿಕ ಮೂಲಗಳಿಗೆ ಹೋಲಿಸಿದರೆ ಇದು ಬಹಳ ಕಡಿಮೆಯಾದ ಬಡ್ಡಿಯ ದರವಾಗಿದೆ. ಸಾಮಾನ್ಯವಾಗಿ ಅಲ್ಪಾವಧಿಯ ಮತ್ತು ಮಧ್ಯಾವಧಿಯ ಸಾಲಗಳನ್ನು ಸಹಕಾರಿ ಸಂಘಗಳು ನೀಡುತ್ತವೆ. ಬೀಜ, ಗೊಬ್ಬರ, ಕೃಷಿ ಉಪಕರಣಗಳ ಕೊಳ್ಳುವಿಕೆ ಮತ್ತಿತ್ತರ ಉತ್ಪಾದಕ ಉದ್ದೇಶಗಳಿಗೆ ಸಾಲ ನೀಡಲಾಗುತ್ತದೆ. ಸಾಲಗಳನ್ನು ಸದಸ್ಯರ ಭದ್ರತೆಯ ಆಧಾರದ ಮೇಲೆ ನೀಡಲಾಗುತ್ತದೆ.

ಪಂಚವಾರ್ಷಿಕ ಯೋಜನೆಗಳು ಆರಂಭವಾದ ಬಳಿಕ ಸಾಲ ನೀಡುವ ಸಹಕಾರಿ ಸಂಸ್ಥೆಗಳ ಸಂಖ್ಯೆ ಅಧಿಕವಾಗಿ, ಸಾಲದ ಮೊತ್ತ ಹೆಚ್ಚಾದರೂ ಸಹಕಾರಿ ಸಾಲಸಂಸ್ಥೆಗಳಲ್ಲಿ ಕೆಲವು ದೋಷಗಳಿವೆ. 1. ಹಣಕಾಸು ಮೂಲಗಳು ಬಹಳ ಕಡಿಮೆ ಇರುವುದರಿಂದ ರೈತರ ಸಾಲದ ಬೇಡಿಕೆಯನ್ನು ಸಂಪೂರ್ಣವಾಗಿ ಸಹಕಾರಿ ಸಂಘಗಳಿಂದ ಈಡೇರಿಸಲಾಗುತ್ತಿಲ್ಲ. 2. ಸಾಲದ ಮರುಪಾವತಿ ಸರಿಯಾಗಿ ಆಗುತ್ತಿಲ್ಲ. ಶ್ರೀಮಂತ ರೈತರುಗಳೇ ಸಾಲ ಪಡೆದುಕೊಂಡು ಮರುಪಾವತಿ ಮಾಡದೆ ಸಹಕಾರಿ ಸಂಘಗಳನ್ನು ಮುಳುಗಿಸಿ ತಾವು ಇನ್ನಷ್ಟು

ಶ್ರೀಮಂತರಾಗುತ್ತಿದ್ದಾರೆ. 3. ಸಹಕಾರಿ ಆಡಳಿತವು ಬಹುತೇಕವಾಗಿ ಅದಕ್ಷರ ಮತ್ತು ಅಪ್ರಾಮಾಣಿಕರ ಕೈಯಲ್ಲಿದೆ 4. ರೈತರ ಉಳಿತಾಯ ಸಂಗ್ರಹಿಸುವಲ್ಲಿ ಸಹಕಾರಿ ಸಂಘಗಳು ವಿಫಲವಾಗಿದೆ.

ಭೂ ಅಭಿವೃದ್ಧಿ ಬ್ಯಾಂಕುಗಳು

ಭೂ ಅಭಿವೃದ್ಧಿ ಬ್ಯಾಂಕುಗಳು ಕೃಷಿಗೆ ದೀರ್ಘಾವಧಿ ಸಾಲವನ್ನು ಒದಗಿಸುತ್ತವೆ. ಕೃಷಿ ಭೂಮಿಯ ಆಧಾರದ ಮೇಲೆ ಕಡಿಮೆ ಬಡ್ಡಿಯ ದರದಲ್ಲಿ ದೀರ್ಘಾವಧಿಯ ಸಾಲ ನೀಡಲಿಕ್ಕಾಗಿಯೇ ಭೂ ಅಭಿವೃದ್ಧಿ ಬ್ಯಾಂಕುಗಳು ತಲೆ ಎತ್ತಿವೆ. ಒಂದು ಕಾಲದಲ್ಲಿ ಭೂ ಅಭಿವೃದ್ಧಿಯ ಬ್ಯಾಂಕುಗಳಿಗೆ ಭೂ ಅಡಮಾನದ ಬ್ಯಾಂಕುಗಳು ಎಂಬ ಹೆಸರಿತ್ತು. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ತಾಲ್ಲೂಕು ಅಥವಾ ಜಿಲ್ಲಾಮಟ್ಟದಲ್ಲಿ ಕಾರ್ಯನಿರ್ವಹಿಸುತ್ತವೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ರೈತರಿಗೆ ನೇರವಾಗಿ ದೀರ್ಘಾವಧಿ ಸಾಲ ನೀಡುತ್ತದೆ. ರಾಜ್ಯ ಮಟ್ಟದ ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಕೃಷಿ ಸಾಲಕ್ಕಾಗಿ ಹಣಕಾಸು ಒದಗಿಸುತ್ತವೆ. ಭೂ ಅಭಿವೃದ್ಧಿ ಬ್ಯಾಂಕುಗಳು ನೀಡಿದ ಸಾಲದಮೊತ್ತವು 1950-51ರಲ್ಲಿ ಕೇವಲ 3 ಕೋಟಿ ರೂ. ಗಳಷ್ಟಿದ್ದು, 2000-01 ರಲ್ಲಿ ಅದು 6,800 ಕೋಟಿ ರೂ. ಗಳಷ್ಟಾಗಿದೆ.

ಭೂ ಅಭಿವೃದ್ಧಿ ಬ್ಯಾಂಕುಗಳು ಭೂವ್ಯವಸಾಯದ ಬೆಳವಣಿಗೆಯಲ್ಲಿ ವಹಿಸುವ ಪಾತ್ರವನ್ನು ಕೆಳಗಿನ ಅಂಶಗಳು ಸ್ಪಷ್ಟಪಡಿಸುತ್ತವೆ. 1. ಭೂ ಅಭಿವೃದ್ಧಿ ಬ್ಯಾಂಕುಗಳು 15 ರಿಂದ 25 ವರ್ಷಗಳ ವರೆಗಿನ ದೀರ್ಘಾವಧಿಯ ಸಾಲ ನೀಡುತ್ತವೆ. 2. ಸಾಲವನ್ನು ಅಭಿವೃದ್ಧಿಯ ಕಾರಣಗಳಿಗಾಗಿ ನೀಡಲಾಗುತ್ತದೆ. ಅಭಿವೃದ್ಧಿಯ ಕಾರ್ಯಗಳೆಂದರೆ ಕೆರೆ, ಬಾವಿಗಳನ್ನು ತೋಡುವುದು, ಯಂತ್ರೋಪಕರಣಗಳನ್ನು ಕೊಳ್ಳುವುದು, ಪಂಪುಸೆಟ್ಟು, ಸ್ಪ್ರಿಂಕ್ಲರ್‌ಗಳನ್ನು ಹಾಕಿಸುವುದು ಇತ್ಯಾದಿ ಶಾಶ್ವತ ಕೆಲಸಗಳು. ಇವುಗಳಲ್ಲದೆ, ರೈತರ ಹಳೆಯ ಬಾಕಿ ತೀರಿಸಲು ಭೂ ಅಭಿವೃದ್ಧಿ ಬ್ಯಾಂಕುಗಳು ಸಾಲ ನೀಡಬಹುದು. 3. ಭೂ ಅಭಿವೃದ್ಧಿ ಬ್ಯಾಂಕುಗಳ

ಸಾಲವನ್ನು ಬಹಳ ಸುಲಭವಾದ ಕಂತುಗಳಲ್ಲಿ ಮರುಪಾವತಿ ಮಾಡಬಹುದು, 4. ಭೂ ಅಭಿವೃದ್ಧಿ ಬ್ಯಾಂಕುಗಳು ಬಹಳ ಕಡಿಮೆ ಬಡ್ಡಿಯ ದರ ವಿಧಿಸುತ್ತವೆ.

ಸ್ವಾತಂತ್ರ್ಯನಂತರ ಭೂ ಅಭಿವೃದ್ಧಿ ಬ್ಯಾಂಕುಗಳ ಸಂಖ್ಯೆ ಅಧಿಕವಾದರೂ, ಕೃಷಿ ಸಾಲ ನೀಡಿಕೆಯಲ್ಲಿ ಅವುಗಳ ಪ್ರಗತಿ ಹರ್ಷದಾಯಕವಾಗಿಲ್ಲ. ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ, ಬಿಹಾರಗಳಲ್ಲಷ್ಟೇ, ಭೂ ಅಭಿವೃದ್ಧಿ ಬ್ಯಾಂಕುಗಳು ಪ್ರಗತಿ ಸಾಧಿಸಿವೆ. ಉಳಿದ

ರಾಜ್ಯಗಳಲ್ಲಿ ಇನ್ನೂ ಭೂ ಅಭಿವೃದ್ಧಿ ಬ್ಯಾಂಕುಗಳ ಪ್ರಗತಿ ನಿರಾಶಾದಾಯಕವಾಗಿದೆ. ಅಲ್ಲದೆ, ಭೂ ಅಭಿವೃದ್ಧಿ ಬ್ಯಾಂಕುಗಳು ಸಾಕಷ್ಟು ಪ್ರಮಾಣದಲ್ಲಿ ಸಾಲ ನೀಡುತ್ತಿಲ್ಲ.

ಭಾರತದ ರಾಜ್ಯ ಸಹಕಾರಿ ಬ್ಯಾಂಕುಗಳು

ಭಾರತದಲ್ಲಿ 28 ರಾಜ್ಯ ಸಹಕಾರಿ ಬ್ಯಾಂಕುಗಳಿವೆ. ಇವುಗಳು ರಾಜ್ಯಗಳ ಅಪೆಕ್ಸ್ ಬ್ಯಾಂಕುಗಳಾಗಿ ಕೆಲಸ ಮಾಡುತ್ತಿದೆ. ರಾಜ್ಯದಲ್ಲಿರುವ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ಹಣಕಾಸು ಮತ್ತು ನಿಯಂತ್ರಣದ ಕೆಲಸವನ್ನು ಮಾಡುತ್ತದೆ. ರಾಜ್ಯ ಸಹಕಾರಿ ಬ್ಯಾಂಕುಗಳು ನಬಾರ್ಡ್‌ನಿಂದ ಹಣ ಪಡೆದು ಕೇಂದ್ರ ಸಹಕಾರಿ ಬ್ಯಾಂಕು ಮತ್ತು ಪ್ರಾಥಮಿಕ ಬ್ಯಾಂಕುಗಳಿಗೆ ಕೊಡುವ ಮಧ್ಯವರ್ತಿ ಕೆಲಸವನ್ನು ಮಾಡುತ್ತದೆ. ರಾಜ್ಯ ಸಹಕಾರಿ ಬ್ಯಾಂಕು ತನಗೆ ಬೇಕಾದ ನಿಧಿಯನ್ನು ಅದು ತನ್ನ ಸ್ವಂತ ಷೇರು ಬಂಡವಾಳದಿಂದ ಮತ್ತು ಮೀಸಲುಗಳಿಂದ, ಜನರಿಂದ ಸಿಗುವ ಠೇವಣಿಯಿಂದ, ನಬಾರ್ಡ್‌ನಿಂದ ಪಡೆಯುವ ಸಾಲ ಮತ್ತು ಮುಂಗಡಗಳ ಮೂಲಕ ಪಡೆಯುತ್ತದೆ. ಇದು ಕೇವಲ ಗ್ರಾಮೀಣ ಸಹಕಾರಿ ಬ್ಯಾಂಕಿಗೆ ಸಾಲ ನೀಡುವ ಕೆಲಸ ಮಾಡದೆ ಇತರ ಸಹಕಾರದ ಕೆಲಸವನ್ನು ಮಾಡುತ್ತ ಸಹಕಾರದ ತತ್ವವನ್ನು ಪ್ರಚಾರಪಡಿಸುತ್ತದೆ. ಈವರೆಗೆ 28 ರಾಜ್ಯ ಸಹಕಾರಿ ಬ್ಯಾಂಕುಗಳು ರೂ.7700 ಕೋಟಿಗಳನ್ನು ಕೇಂದ್ರ ಸಹಕಾರಿ ಬ್ಯಾಂಕು ಮತ್ತು ಪ್ರಾಥಮಿಕ ಸಹಕಾರಿ ಬ್ಯಾಂಕಿಗೆ ಕೊಟ್ಟಿದೆ.[19]

ಭಾರತದಲ್ಲಿ 1995–96 ರಿಂದ 2000–01 ರ ವರೆಗಿನ ರಾಜ್ಯ ಸಹಕಾರಿ ಬ್ಯಾಂಕಿನ ಪ್ರಗತಿಯನ್ನು ಕೆಳಗಿನ ಕೋಷ್ಟಕ 2.1 ರಲ್ಲಿ ವಿವರಿಸಿದೆ.

ಕೋಷ್ಟಕ 2.1: ಭಾರತದಲ್ಲಿ ರಾಜ್ಯ ಸಹಕಾರಿ ಬ್ಯಾಂಕಿನ ಪ್ರಗತಿ (1995–96 ರಿಂದ 2000–2001)

ವಿವರಗಳು	1995–96	1996–97	1998–99	1999–00	2000–01
ಬ್ಯಾಂಕಿನ ಸಂಖ್ಯೆ	28	28	29	29	29
ಶಾಖೆಗಳ ಸಂಖ್ಯೆ	740	789	814	855	880
ಸದಸ್ಯರು (ಒಟ್ಟು)	135,365	121,800	1,39,188	1,49,203	1,25,779
ಸಹಕಾರಿಯ ಸದಸ್ಯತನ	21,071	20,691	22,592	19,062	18,466
ಒಟ್ಟು ಪಾಲು ಬಂಡವಾಳ	3,950.7	4,096.03	5,760.5	6,226.6	6752.7
ಸರಕಾರದ ಸಹಭಾಗಿತ್ವ (%)	10.4%	9.73%	9.89%	9.64%	8.53%
ಪಡೆದುಕೊಂಡಿರುವುದು (ಒಟ್ಟು)	64,995.4	61,121.71	96,966.5	109,169,8	118,389.3
ನಬಾರ್ಡಿಂದ ಪಡೆದುಕೊಂಡಿರುವುದು	69.8%	74.11%	82.56%	78.0%	80.5%
ಮೀಸಲುಗಳು	191,34.6	20,758.9	27,752.2	31,479.8	35,992.8
ಠೇವಣಿಗಳು	134,696.8	167,575.8	2,53,139.3	2,79,453.4	3,14,697.2
ಸಹಕಾರಿಯಿಂದ ಠೇವಣಿ	78.7%	74.54%	80.75%	83.09%	81.6%
ಕೆಲಸದ ಬಂಡವಾಳ	250,094.4	281,494	4,05,330.8	4,51,172.7	5,04,740.0
ಮುಂಗಡ ಸಾಲ	288,254.3	308,597.3	3,60,831,.8	3,95,076.2	3,66,487.3
ಲಾಭದಲ್ಲಿರುವ ಬ್ಯಾಂಕಿನ ಸಂಖ್ಯೆ	331	300	373	408	426
ನಷ್ಟದಲ್ಲಿರುವ ಬ್ಯಾಂಕುಗಳ ಸಂಖ್ಯೆ	309	340	345	314	282
ಆಡಳಿತ ವೆಚ್ಚ (ನಿರ್ವಹಣಾ ವೆಚ್ಚ)	2908.6	3,778.3	5,178.8	5,660.2	ಲಭ್ಯವಿಲ್ಲ
ಉದ್ಯೋಗಿಗಳ ಸಂಖ್ಯೆ	15,633	15,589	16,190	16,178	16,242
ಮಹಿಳೆಯರ ಸಂಖ್ಯೆ	ಲಭ್ಯವಿಲ್ಲ	1267	1864	1891	1883
ಪುರುಷರ ಸಂಖ್ಯೆ	ಲಭ್ಯವಿಲ್ಲ	14,322	14,326	14,287	11,474

ಆಧಾರ: ರಾಷ್ಟ್ರೀಯ ಮೀಸಲು ಕೇಂದ್ರ

Source: National Reserve Centre (NCUI)

ಮೇಲಿನ ಕೋಷ್ಟಕದಿಂದ ನಾವು ಕೆಲವೊಂದು ಅಂಶಗಳನ್ನು ಗಮನಿಸಬಹುದು. ಮುಖ್ಯವಾಗಿ ರಾಜ್ಯ ಸಹಕಾರಿ ಬ್ಯಾಂಕಿನ ಸದಸ್ಯತನವು 1,35,365 ರಿಂದ 1,25,779 ಸಂಖ್ಯೆಗೆ ಏರಿಕೆಯಾಗಿದೆ. ಹಾಗೂ ಪಾವತಿಯಾದ ಪಾಲು ಬಂಡವಾಳವು ರೂ.3,950.7 ಕೋಟಿಯಿಂದ 6,752.7 ಕೋಟಿಗೆ ಹೆಚ್ಚಾಗಿದೆ. 78.7ಶೇಕಡಾ ದಿಂದ 81.6ಶೇಕಡಾಕ್ಕೆ ಬ್ಯಾಂಕಿನ ಠೇವಣಿ ಏರಿಕೆಯಾಗಿದೆ. ಅಲ್ಲದೆ, ಮುಂಗಡಗಳು ರೂ.2,88,254ರಿಂದ 3,66,487ಕೋಟಿಗೆ 1995–96 ರಿಂದ 2000–01 ಹೆಚ್ಚಳವಾಗಿದೆ.

ಸದಸ್ಯತ್ವ, ಪಾಲು ಬಂಡವಾಳ, ಒಟ್ಟು ಠೇವಣಿ, ಮುಂಗಡ ಸಾಲಗಳಲ್ಲಿ ರಾಜ್ಯ ಸಹಕಾರಿ ಬ್ಯಾಂಕುಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಕೃಷಿ ಮತ್ತು ಸಂಬಂಧಿ ಚಟುವಟಿಕೆಯಲ್ಲಿ ಅಭಿವೃದ್ಧಿಯನ್ನು ಸಾಧಿಸುತ್ತಿದೆ.

ಕೇಂದ್ರ ಸಹಕಾರಿ ಬ್ಯಾಂಕುಗಳು

ಭಾರತದಲ್ಲಿ 368 ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿವೆ. ಪ್ರತಿಯೊಂದು ವಿಶೇಷ ಪ್ರದೇಶದಲ್ಲಿ ಪ್ರಾಥಮಿಕ ಸಹಕಾರಿ ಸಂಘಗಳ ಒಕ್ಕೂಟವಿದೆ. (ಅದನ್ನು ಕೆಲವು ಸಲ ಜಿಲ್ಲಾ ಸಹಕಾರಿ ಬ್ಯಾಂಕುಗಳೆಂದು ಕರೆಯುತ್ತಾರೆ).

ಈ ಬ್ಯಾಂಕುಗಳಲ್ಲಿ ಕೆಲವು ಖಾಸಗಿ ವ್ಯಕ್ತಿಗಳು ಪಾಲು ಬಂಡವಾಳವನ್ನು ಹೂಡಿದ್ದಾರೆ ಮತ್ತು ಅವರು ಹಣಕಾಸಿನ ಮತ್ತು ನಿರ್ವಹಣೆಯ ಕೆಲಸವನ್ನು ಮಾಡುತ್ತಾರೆ. ಇದರ ಮುಖ್ಯ ಉದ್ದೇಶ ಪ್ರಾಥಮಿಕ ಸಹಕಾರಿ ಸಂಘಗಳಿಗೆ ಸಾಲ ನೀಡುವುದು ಅಲ್ಲದೆ ಜನರಿಂದ ಠೇವಣಿಗಳನ್ನು ಸ್ವೀಕರಿಸುವುದು. ಆದರೆ ಇದು ನೆರವೇರುತ್ತಿಲ್ಲ. ಕೇಂದ್ರ ಸಹಕಾರಿ ಬ್ಯಾಂಕುಗಳು ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳು ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ನಡುವಿನ ಕೊಂಡಿಯಾಗಿ ಸಹಾಯ ಮಾಡುತ್ತದೆ. ನಬಾರ್ಡ್ ಬ್ಯಾಂಕುಗಳು ನಷ್ಟದಲ್ಲಿರುವ ಕೇಂದ್ರ ಸಹಕಾರಿ ಬ್ಯಾಂಕನ್ನು ಪುನಶ್ಚೇತನಗೊಳಿಸುವ ಕೆಲಸವನ್ನು ಮಾಡುತ್ತದೆ.

ನಬಾರ್ಡ್ ಬ್ಯಾಂಕುಗಳು ಹಣಕಾಸನ್ನು ನೀಡಿ ಕೇಂದ್ರ ಸಹಕಾರಿ ಬ್ಯಾಂಕುಗಳನ್ನು ಮೇಲಕ್ಕೆತ್ತುವಂತೆ ಮಾಡುತ್ತದೆ.

1995–96 ರಿಂದ 2000–01ರ ವರೆಗಿನ ಕೇಂದ್ರ ಸಹಕಾರಿ ಬ್ಯಾಂಕಿನ ಪ್ರಗತಿಯನ್ನು ಕೋಷ್ಟಕ 2.2 ರಲ್ಲಿ ವಿವರಿಸಲಾಗಿದೆ.

ಕೋಷ್ಟಕ 2.2: ಭಾರತದಲ್ಲಿ ಕೇಂದ್ರ ಸಹಕಾರಿ ಬ್ಯಾಂಕಿನ ಪ್ರಗತಿ (1995–96ರಿಂದ 2000–2001)

ವಿವರಗಳು (ಹಣದ ಮೌಲ್ಯ ಮಿಲಿಯನ್‌ಗಳಲ್ಲಿ)	1995–96	1996–99	1999–00	2000–01
ಬ್ಯಾಂಕುಗಳ ಸಂಖ್ಯೆ	364	367	367	368
ಮುಖ್ಯ ಕೇಂದ್ರಗಳು	12,077	12,982	13,029	12,763
ಸದಸ್ಯತನ (ಒಟ್ಟು)	1.7014	1.651721	2.347966	2.312354
ಸಹಕಾರಿಯ ಸದಸ್ಯತ್ವ	0.2748	0.282703	0.560220	0.548288
ಒಟ್ಟು ಪಾಲು ಬಂಡವಾಳ	16,476.1	24,935.2	26,425.6	28,236.3
ಸರಕಾರದ ಪಾಲ್ಗೊಳ್ಳುವಿಕೆ ಶೇಕಡಾದಲ್ಲಿ	19.96	18.47	17.49	17.09
ಠೇಣಿಗಳು (ಒಟ್ಟು)	242,482.2	453,439.1	48,029.5	555,239.0
ಸಹಕಾರಿ ಸಂಘಗಳಿಂದ ಠೇವಣಿಗಳು (ಶೇಕಡಾದಲ್ಲಿ)	35.7	37.86	37.03	38.75
ಮೀಸಲುಗಳು	19,008.8	40836.3	48029.5	55,187.6
ಪಡೆದುಕೊಂಡದ್ದು (ಒಟ್ಟು)	100,612.4	131728.8	140,217.3	
ದುಡಿಯುವ ಬಂಡವಾಳ	397.163.6	711133.5	767,263.5	829,895.2
ಮುಂಗಡಪಾವತಿ	363,751.7	402465.1	443,565.1	506381.8
ಲಾಭದಲ್ಲಿರುವ ಬ್ಯಾಂಕುಗಳು	6895	7,499	7,851	7,054
ನಷ್ಟದಲ್ಲಿರುವ ಬ್ಯಾಂಕುಗಳು	4619	4,456	3,223	3,498
ನಿರ್ವಹಣಾ ವೆಚ್ಚ	128,06.5	16,587.8	21,332.1	31,746.3
ಉದ್ಯೋಗಿಗಳ ಸಂಖ್ಯೆ	103,287	97,313	113,032	112,691

ಆಧಾರ: ರಾಷ್ಟ್ರೀಯ ಮೀಸಲು ಕೇಂದ್ರ

Source: National Reserve Centre (NCUI)

ಮೇಲಿನ ಕೋಷ್ಟಕದಿಂದ ತಿಳಿಯಬಹುದಾದ ಅಂಶವೆಂದರೆ 1995-96ರಿಂದ 2000-01ರವರೆಗಿನ ಬ್ಯಾಂಕುಗಳ ಸಂಖ್ಯೆ 364ರಿಂದ 368ಕ್ಕೆ ಏರಿದೆ. ಅಲ್ಲದೆ ಸದಸ್ಯತನವು 1,7014 ರಿಂದ 2,312354ಕ್ಕೆ ಏರಿದೆ. ಪಾಲು ಬಂಡವಾಳವು ರೂ.16,476.1 ಕೋಟಿಯಿಂದ 28,236.3 ಕೋಟಿಗೆ ಹೆಚ್ಚಿದೆ ಹಾಗೂ ಠೇವಣಿಯಲ್ಲಿ ಬದಲಾವಣೆಯಾಗಿದೆ. ಅಂದರೆ 1995-96ರಿಂದ 2000-01ರ ತನಕ ಠೇವಣಿಯು ರೂ.363,751.7 ಕೋಟಿಯಿಂದ 506,381.8 ಕೋಟಿಗೆ ಹೆಚ್ಚಾಗಿದೆ. ಇದೇ ವರ್ಷದಲ್ಲಿ ಇದೇ ಬ್ಯಾಂಕಿನ ದುಡಿಯುವ ಬಂಡವಾಳ ರೂ. 397,163.6 ಕೋಟಿಯಿಂದ ರೂ. 829,895.2 ಕೋಟಿಗೇರಿದೆ. ಆದ್ದರಿಂದ ಭಾರತದಲ್ಲಿ ಕೇಂದ್ರ ಸಹಕಾರಿ ಬ್ಯಾಂಕಿನ ಅಭಿವೃದ್ಧಿಯು ಸುಧಾರಿಸಿದೆ.

ಪ್ರಾಥಮಿಕ ಕೃಷಿ ಸಹಕಾರಿ ಪತ್ತಿನ ಸಂಘಗಳು

ಗ್ರಾಮೀಣ ಪ್ರದೇಶದಲ್ಲಿರುವ ಗ್ರಾಮ ಪಂಚಾಯತ್, ಗ್ರಾಮದ ಸಹಕಾರಿ ಸಂಘ, ಮತ್ತು ಗ್ರಾಮದಲ್ಲಿರುವ ಶಾಲೆಗಳು ಗ್ರಾಮವು ಸ್ವಾವಲಂಬಿಗಳಾಗಲು ಮತ್ತು ಆರ್ಥಿಕ ಸಾಮಾಜಿಕ ರಚನೆಯಲ್ಲೂ ಪ್ರಮುಖ ಪಾತ್ರವಹಿಸುತ್ತದೆ ಎಂದು ಭಾರತದ ಯೋಜನಾಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಕೃಷಿಗೆ ಬೇಕಾದ ಕಡಿಮೆ ಬಡ್ಡಿದರದ ಹಣಕಾಸನ್ನು ಕೃಷಿಕರಿಗೆ ನೀಡಲು ಮತ್ತು ಹಣದ ಲೇವಾದೇವಿಗಾರರಿಂದ ಆಗುವ ತೊಂದರೆಯನ್ನು ತಡೆಗಟ್ಟಲು ಭಾರತದಲ್ಲಿ ಸಹಕಾರಿ ಸಂಘಗಳ ಸ್ಥಾಪನೆಯಾಯಿತು.

ಸಹಕಾರಿ ಪತ್ತಿನ ಸಂಘವನ್ನು ಸಾಮಾನ್ಯವಾಗಿ ಪ್ರಾಥಮಿಕ ಕೃಷಿ ಪತ್ತಿನ ಸಂಘ ಎಂದು ಕರೆಯಲಾಗುತ್ತದೆ. ಇವುಗಳು ಹಳ್ಳಿಯ ಜನರಿಂದ ರಚಿಸಲ್ಪಟ್ಟಿರುತ್ತದೆ. ಇದರ ಪಾಲಿನ ಬೆಲೆ ಸಾಮಾನ್ಯವಾಗಿ ಬಡವರಿಗೆ ಕೊಂಡುಕೊಂಡು ಸದಸ್ಯತ್ವವನ್ನು ಪಡೆಯಲು ಅರ್ಹರಾಗುವಷ್ಟು ಇರುತ್ತದೆ. ಸಂಘಗಳು ನಷ್ಟವನ್ನು ಅನುಭವಿಸಿದರೆ ಆ ಸಂದರ್ಭದಲ್ಲಿ ಪಾಲುಗಾರರಾದ ಸದಸ್ಯರೇ ನಷ್ಟವನ್ನು ತುಂಬಬೇಕಾಗುತ್ತದೆ. ಇಲ್ಲಿ ಪ್ರತಿಯೊಬ್ಬರು ಪ್ರತಿಯೊಬ್ಬರನ್ನು ಅರಿತಿರಬೇಕು. ಇದರ ಆಡಳಿತವನ್ನು ನೋಡಿಕೊಳ್ಳಲು ಒಬ್ಬ ಅಧ್ಯಕ್ಷ, ಕಾರ್ಯದರ್ಶಿ ಹಾಗೂ

ಕೋಶಾಧಿಕಾರಿ ಇರುತ್ತಾನೆ. ಜೊತೆಗೆ ಒಬ್ಬ ಲೆಕ್ಕ ಪರಿಶೋಧಕನಿರುತ್ತಾನೆ. ಕೃಷಿಗೆ ಸಂಬಂಧಪಟ್ಟಂತೆ ಅಲ್ಪಾವಧಿಯ ಸಾಲವನ್ನು ನೀಡುತ್ತದೆ ಅಂದರೆ ಒಂದು ವರ್ಷದ ಕೃಷಿ ಸಾಲವನ್ನು ನೀಡುತ್ತದೆ. ಇಲ್ಲಿಯ ಬಡ್ಡಿದರ ಕಮ್ಮಿ ಇರುತ್ತದೆ. ಲಾಭವನ್ನು ಪಾಲು ಬಂಡವಾಳದಾರರಿಗೆ ಹಂಚದೆ ಅದನ್ನು ಗ್ರಾಮದ ಕಲ್ಯಾಣಕ್ಕಾಗಿ ಅಂದರೆ ಬಾವಿ ನಿರ್ಮಾಣ ಅಥವಾ ಗ್ರಾಮದ ಶಾಲೆಯ ನಿರ್ವಹಣೆ ಮುಂತಾದ ಉದ್ದೇಶಕ್ಕೆ ಬಳಸಲಾಗುತ್ತದೆ.

ಕೋಷ್ಟಕ :2.3 ದಕ್ಷಿಣದ ರಾಜ್ಯಗಳಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳ ಸಾಲ ಮುಂಗಡಗಳು (1998–99)

ವರ್ಷ	ಅವಧಿ	ಆಂಧ್ರಪ್ರದೇಶ	ಕರ್ನಾಟಕ	ಕೇರಳ	ತಮಿಳು ನಾಡು	ಇಡೀ ಭಾರತದಲ್ಲಿ
1995–96	ಅಲ್ಪಾವಧಿ/ಮಧ್ಯಮಾವಧಿ	103431	45798	28090	64050	921177
	ದೀರ್ಘಾವಧಿ	---	9839	7195	5158	126712
	ಒಟ್ಟು	103431	55637	35285	69208	1047889
1996–97	ಅಲ್ಪಾವಧಿ/ಮಧ್ಯಮಾವಧಿ	132600	46057	33596	75722	1022475
	ದೀರ್ಘಾವಧಿ	---	11306	8823	8945	171993
	ಒಟ್ಟು	132600	57363	42419	84667	1194468
1997–98	ಅಲ್ಪಾವಧಿ/ಮಧ್ಯಮಾವಧಿ	154143	76381	41519	97784	123911
	ದೀರ್ಘಾವಧಿ	----	12919	9027	10465	169342
	ಒಟ್ಟು	154143	89300	50546	108249	1408453
1998–99	ಅಲ್ಪಾವಧಿ/ಮಧ್ಯಮಾವಧಿ	127034	80219	49310	100283	1337740
	ದೀರ್ಘಾವಧಿ	35801	10828	9260	14985	253951
	ಒಟ್ಟು	162835	91047	58570	115266	1591691

Source: Agricultural Statistics-2000 p.126,127

ಗ್ರಾಮೀಣ ಮಟ್ಟದಲ್ಲಿ ಪ್ರಾಥಮಿಕ ಸಹಕಾರಿ ಬ್ಯಾಂಕುಗಳು ರೈತರಿಗೆ ಸಾಲ ಒದಗಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುವುದನ್ನು ಗಮನಿಸಬಹುದು.

ಭಾರತದಲ್ಲಿ ಸ್ವಾತಂತ್ರ್ಯ ಬಳಿಕ ಸಹಕಾರಿ ಚಳವಳಿಗೆ ಪ್ರೋತ್ಸಾಹ ನೀಡಿದ ಪರಿಣಾಮ ಈ ಕ್ಷೇತ್ರದಲ್ಲಿ ಸಾಕಷ್ಟು ಬೆಳವಣಿಗೆ ಆಗಿದೆ. ಆದರೆ ಅವುಗಳ ಸಾಂಘಿಕ, ಸಾಮಾಜಿಕ, ಆರ್ಥಿಕ ಅಂಶಗಳನ್ನು ವಿಶ್ಲೇಷಣೆ ಮಾಡುವುದರಿಂದ ಅನೇಕ ಅಂಶಗಳನ್ನು ಶೋಧಿಸಬಹುದು. ಇದು ಅವುಗಳ ಪ್ರಗತಿಗೆ ಅನುಕೂಲಕರವೂ ಹೌದು.

ಟಿಪ್ಪಣಿ

1. Quoted from Mamoria C.B. and Saksena R.D (1973), Cooperation in India, Allahabad: Kitab Mahala.
2. Herrick M.T. (1914), Rural Credits : Land and Cooperatives, New York, D. Appleton and Co.,
3. Cole, G.D.H. (1968), A Century of Cooperation, Oxford: George Allen and Unwin Ltd., for the Cooperative Union Ltd.,
4. Quoted in 'Cooperation' – A Worker's Manual, Geneva :ILO, (1956)
5. Manorama Year Book, 2006
6. Cooperative Development Foudnation (1954), Cooperatives Values- A critique, 50 years of cooperation, Golden Jubilee Souvenir-1904-54, Bombay: The Bombay Provinicial Institute of Cooperative.

7. ಡಾ.ಪ್ರಭಾಕರ ಶಿಶಿಲ, ಪ್ರೊ.ಕುಮಾರಸ್ವಾಮಿ (2005): ಭಾರತದ ಆರ್ಥಿಕ ಅಭಿವೃದ್ಧಿ, ಮಂಗಳಾ ಪ್ರಕಾಶನ, ಮಂಗಳೂರು, ಎಚ್ಚಾರ್ಕೆ (2006-07). ಭಾರತದ ಆರ್ಥಿಕ ಅಭಿವೃದ್ಧಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
8. Simha, B.P.,Co-operation Instrument for Socio-Economic Justice, (1992), Himalaya Publishing House, New Delhi.
9. Cooperative Development Foundation, (1954) Cooperatives Values-A Critique, 50 years of

cooperation, Golden Jubilee Souvenir-1904-54, Bombay: The Bombay Provinicial Institute of Cooperative.

10. Tucker S. Donald (1992) The Evolution of People;s Banks, New York, Columbia University Press.
11. Tucker S. Donald (1992) The Evolution of People;s Banks, New York, Columbia University Press.
12. Saxena K.K. (1974), Evolution of Cooperative Thought, New Delhi, Somaiya Publications, Pvt. Ltd.,
13. H.Srinivas Rao (2004) Cooperative Banking in New Millennium, J.L.Kumar for Anmol Publications Pvt. Ltd., New Delhi.
14. RBI (1954), All India Rural Credit Survey Report.
15. ಡಾ.ಪ್ರಭಾಕರ ಶಿಶಿಲ, ಪ್ರೊ.ಕುಮಾರಸ್ವಾಮಿ (2005): ಭಾರತದ ಆರ್ಥಿಕ ಅಭಿವೃದ್ಧಿ, ಮಂಗಳಾ ಪ್ರಕಾಶನ, ಮಂಗಳೂರು, ಎಚ್ಚಾರ್ಕೆ (2006–07), ಭಾರತದ ಆರ್ಥಿಕ ಅಭಿವೃದ್ಧಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
16. ಬ್ರಹ್ಮಪ್ರಕಾಶ ಸಮಿತಿ (2002)
17. ಎಚ್ಚಾರ್ಕೆ (2004–05) ಭಾರತದ ಆರ್ಥಿಕ ವ್ಯವಸ್ಥೆ ಸ್ವಪ್ನ ಬುಕ್ ಹೌಸ್, ಬೆಂಗಳೂರು
18. ಡಾ.ಪ್ರಭಾಕರ ಶಿಶಿಲ, ಪ್ರೊ.ಕುಮಾರಸ್ವಾಮಿ (2005): ಭಾರತದ ಆರ್ಥಿಕ ಅಭಿವೃದ್ಧಿ, ಮಂಗಳಾ ಪ್ರಕಾಶನ, ಮಂಗಳೂರು, ಎಚ್ಚಾರ್ಕೆ (2006–07), ಭಾರತದ ಆರ್ಥಿಕ ಅಭಿವೃದ್ಧಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
19. H.Srinivas Rao (2004) Cooperative Banking in New Millennium, J.L.Kumar for Anmol Publications Pvt. Ltd., New Delhi.

‡‡‡‡‡

ಅಧ್ಯಾಯ – 3

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಸಂಘಗಳು

ಅಧ್ಯಾಯ – 3

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಸಂಘಗಳು


ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಒಂದು. ಜಿಲ್ಲೆಯ ಉತ್ತರದಿಕ್ಕಿನಲ್ಲಿ ಉಡುಪಿ, ಪಶ್ಚಿಮದಲ್ಲಿ ಅರಬೀಸಮುದ್ರ, ದಕ್ಷಿಣದಲ್ಲಿ ಕೇರಳದ ಕಾಸರಗೋಡು ಜಿಲ್ಲೆ, ಪೂರ್ವಕ್ಕೆ ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳು ಇವೆ. ಅರಬ್ಬೀ ಸಮುದ್ರದ ದಡದಲ್ಲಿ ಜಿಲ್ಲೆಯ ಕೇಂದ್ರವಾದ ಮಂಗಳೂರು ತಾಲೂಕು ಇದ್ದು, ಸುಮಾರು 90ಕಿ.ಮೀ ಅರಬ್ಬೀ ಸಮುದ್ರದ ದಡವನ್ನು ಹೊಂದಿದೆ. ಪಶ್ಚಿಮಘಟ್ಟ ಮತ್ತು ಅರಬ್ಬೀ ಸಮುದ್ರಗಳ ಮಧ್ಯೆ ವ್ಯಾಪಿಸಿಕೊಂಡಿರುವ ದಕ್ಷಿಣಕನ್ನಡ ಜಿಲ್ಲೆ ಅನೇಕ ಪ್ರಾಕೃತಿಕ ವೈಭವವನ್ನು ಹೊಂದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಸುಳ್ಯ, ಮಂಗಳೂರು ಎಂಬ ಐದು ತಾಲೂಕುಗಳಿವೆ. ಸುಮಾರು 4,866 ಚದರ ವಿಸ್ತೀರ್ಣವನ್ನು ಹೊಂದಿರುವ ದಕ್ಷಿಣಕನ್ನಡ ಜಿಲ್ಲೆ ಅನೇಕ ಪ್ರಾಕೃತಿಕ ವೈವಿಧ್ಯತೆಯನ್ನು ಹೊಂದಿದೆ. ಪ್ರತಿವರ್ಷ ಜೂನ್–ಅಕ್ಟೋಬರ್ ಮಳೆಗಾಲವಾಗಿದ್ದು, ಸುಮಾರು 4,000 ಮಿಲಿ ಮೀಟರಿನಷ್ಟು ವಾರ್ಷಿಕ ಮಳೆಯಾಗುತ್ತದೆ. ವರ್ಷದಲ್ಲಿ ಹೆಚ್ಚು ಕಮ್ಮಿ 100ರಿಂದ 130 ದಿನಗಳಷ್ಟು ಮಳೆಯಾಗುತ್ತದೆ. ಫೆಬ್ರವರಿ–ಮೇ ತಿಂಗಳುಗಳು ಬೇಸಿಗೆ ಕಾಲವಾಗಿದ್ದು, ಗರಿಷ್ಟ ಉಷ್ಣತೆ 27° ಸೆಂಟಿಗ್ರೇಡ್‌ನಿಂದ 37° ಸೆಂಟಿಗ್ರೇಡಿನವರೆಗೆ ಇರುತ್ತದೆ. ಚಳಿಗಾಲದಲ್ಲಿ ಉಷ್ಣತೆಯು 17° ಸೆಂಟಿಗ್ರೇಡಿನಿಂದ 24° ಸೆಂಟಿಗ್ರೇಡಿನವರೆಗೆ ಕಾಣಿಸಿಕೊಳ್ಳುತ್ತದೆ.


ಜನಸಂಖ್ಯೆ

2001ರ ಜನಗಣತಿ ಪ್ರಕಾರ ಜಿಲ್ಲೆಯಲ್ಲಿ ಜನವಸತಿಯಿರುವ ಗ್ರಾಮಗಳು 354 ಮತ್ತು 12 ಪಟ್ಟಣ, ನಗರ ಸಮುದಾಯಗಳು ಹಾಗೂ ಒಟ್ಟು ಜನಸಂಖ್ಯೆ, 1,89,77,000. ಇದರಲ್ಲಿ 11,684,28 ಗ್ರಾಮೀಣ ಜನಸಂಖ್ಯೆಯಾದರೆ 7,392 ನಗರ ಜನಸಂಖ್ಯೆ. ಜಿಲ್ಲೆಯಲ್ಲಿ ಮಂಗಳೂರು ತಾಲೂಕು ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ತಾಲೂಕು (8,828,56) ಸುಳ್ಯದಲ್ಲಿ ಅತ್ಯಂತ ಕಡಿಮೆ ಜನಸಂಖ್ಯೆ (1,405,75). ಆದರೆ ಗ್ರಾಮೀಣ ಜನಸಂಖ್ಯೆ

ಹೆಚ್ಚಿರುವುದು (3,067,34). ಜಿಲ್ಲೆಯಲ್ಲಿ ಜನಸಾಂದ್ರತೆಯು ಪ್ರತಿ ಚದರ ಕಿ.ಮೀಗೆ 390. ಜನಸಾಂದ್ರತೆಯು ಮಂಗಳೂರು ತಾಲೂಕಿನಲ್ಲಿ ಅತ್ಯಂತ ಹೆಚ್ಚಾಗಿದ್ದು (1,059) ಸುಳ್ಯ ತಾಲೂಕಿನಲ್ಲಿ ಅತ್ಯಂತ ಕಡಿಮೆ (170) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಿಂಗಾನುಪಾತವು 10:22 ಜಿಲ್ಲೆಯಲ್ಲಿ ಶೇ.90ಕ್ಕಿಂತಲೂ ಹೆಚ್ಚು ಅಕ್ಷರಸ್ಥರಾಗಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ನಕ್ಷೆ





ಕೋಷ್ಟಕ:3.1: ದಕ್ಷಿಣ ಕನ್ನಡ ಜಿಲ್ಲೆಯ ವಿಸ್ತೀರ್ಣ ಹಾಗೂ ಜನಸಂಖ್ಯೆ (ಜನಗಣತಿ-2001)

ವಿಸ್ತೀರ್ಣ	ಜನಸಾಂದ್ರತೆ	ವಿವರಗಳು	ಪುರುಷರು	ಮಹಿಳೆಯರು	ಒಟ್ಟು	ಲಿಂಗ ಅನುಪಾತ
4,559	416		937651 (49.4)	958752 (51.0)	1896403 (100)	1023
		ಗ್ರಾಮೀಣ ಪ್ರದೇಶಗಳಲ್ಲಿ	567092 (49.0)	586850 (51.0)	1153942 (60.8)	1035
		ನಗರ ಪ್ರದೇಶಗಳಲ್ಲಿ	370496 (50.0)	371929 (50.0)	742425 (100)	1004

Source: (i) Dakshina Kannada at a Glance, various years

Note: Figures in brackest indicate % to totals

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 42,566 ಕೃಷಿ ಕಾರ್ಮಿಕರು, 15,935 ಗೃಹಕೈಗಾರಿಕ ಕೆಲಸಗಾರರು ಸೇರಿ ಒಟ್ಟು 9,46,390 ಕೆಲಸಗಾರರಿದ್ದಾರೆ. ಜಿಲ್ಲೆಯಲ್ಲಿ 49,684 ಕೃಷಿ ಸಾಗುವಳಿದಾರರು ಇದ್ದಾರೆ.

ಕೃಷಿ

ದಕ್ಷಿಣ ಕನ್ನಡ ಜಿಲ್ಲೆ ಭೌಗೋಳಿಕವಾಗಿ ವೈವಿಧ್ಯಮಯ ಕೃಷಿಗೆ ಅನುಕೂಲವಾದ ಪ್ರದೇಶ 4.77 ಲಕ್ಷ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣದಲ್ಲಿ 1.28 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಅರಣ್ಯಪ್ರದೇಶಗಳಿವೆ. ಭತ್ತ, ಅಡಿಕೆ, ಗೇರು, ತೆಂಗು, ಕಬ್ಬು, ಕೊಕ್ಕು, ರಬ್ಬರ್, ಬಾಳೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುವ ಮುಖ್ಯ ಬೆಳೆಗಳು. 2003-2004ರಲ್ಲಿ ಜಿಲ್ಲೆ 55.551 ಹೆಕ್ಟೇರ್ ವಿಸ್ತೀರ್ಣದಲ್ಲಿ ಭತ್ತ ಬೆಳೆಯಲಾಗುತ್ತದೆ. 27,070 ಹೆಕ್ಟೇರ್ ಭೂಪ್ರದೇಶದಲ್ಲಿ ಅಡಿಕೆ ಬೆಳೆಯಾಲಾಗಿದ್ದು 29,382 ಹೆಕ್ಟೇರ್ ಭೂಪ್ರದೇಶದಲ್ಲಿ ಗೇರು ಕೃಷಿಯನ್ನು ಮಾಡಲಾಗಿತ್ತು. ಇತ್ತೀಚೆಗೆ ರೇಷ್ಮೆ ವ್ಯವಸಾಯವು ಜಿಲ್ಲೆಯಲ್ಲಿ ಜನಪ್ರಿಯವಾಗುತ್ತಿದೆ. ಜಿಲ್ಲೆಯ ಕೃಷಿಕ್ಷೇತ್ರದಲ್ಲಿ

ಅಡಿಕೆ, ಗೇರು, ತೆಂಗು ಮತ್ತು ರಬ್ಬರ್, ಕೃಷಿಕರಿಗೆ ಹೆಚ್ಚು ಆದಾಯವನ್ನು ತಂದುಕೊಡುವ ಬೆಳೆಗಳಾಗಿವೆ.

ಜಿಲ್ಲೆಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳ ವಿಸ್ತೀರ್ಣವನ್ನು ಕೋಷ್ಟಕ 3.2 ರಲ್ಲಿ ಕೊಡಲಾಗಿದೆ.

ಕೋಷ್ಟಕ 3.2: ಜಿಲ್ಲೆಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳ ವಿಸ್ತೀರ್ಣ (2003–04)

ಹೆಕ್ಟೇರುಗಳಲ್ಲಿ

ತಾಲೂಕು	ಭತ್ತ	ಒಟ್ಟು ಧಾನ್ಯಗಳು	ಅಡಿಕೆ	ಗೇರು	ರಬ್ಬರ್	ಎಲ್ಲಾ ಬೆಳಗಳ ನಿವ್ವಳ ವಿಸ್ತೀರ್ಣ
ಬಂಟ್ವಾಳ	15868	16114	5196	5584	217	25995
ಬೆಳ್ತಂಗಡಿ	15068	15775	7001	9252	3710	38048
ಮಂಗಳೂರು	21814	23946	1390	3523	183	26316
ಪುತ್ತೂರು	6040	6173	5358	6111	735	22033
ಸುಳ್ಯ	761	737	8125	4912	5131	21854
ಒಟ್ಟು	59551	62745	27070	29382	9976	134246

ಆಧಾರ: ದಕ್ಷಿಣ ಕನ್ನಡ ಜಿಲ್ಲಾ ಅಂಕಿ ಅಂಶಗಳು 2003–2004

ಜಿಲ್ಲೆಯಲ್ಲಿ ಭೂಹಿಡುವಳಿ ಮತ್ತು ವಿಸ್ತೀರ್ಣವನ್ನು ಗಮನಿಸಿದಾಗ, ಅತೀಸಣ್ಣ (1 ಹೆಕ್ಟೇರಿಗಿಂತ ಕಡಿಮೆ ಸಣ್ಣ 1 ರಿಂದ 2 ಹೆಕ್ಟೇರ್‌ವರೆಗೆ) ರೈತರ ಸಂಖ್ಯೆ ಹೆಚ್ಚಾಗಿದೆ. ಜಿಲ್ಲೆಯಲ್ಲಿ ಒಟ್ಟು ಎಲ್ಲಾ ಬೆಳೆಗಳ ನಿವ್ವಳ ವಿಸ್ತೀರ್ಣ 1,34,246 ಹೆಕ್ಟೇರುಗಳಾಗಿರುತ್ತದೆ.

ಆರ್ಥಿಕತೆಯ ಮುಖ್ಯಾಂಶಗಳು

ದಕ್ಷಿಣ ಕನ್ನಡ ಜಿಲ್ಲೆಯನ್ನು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಕೆಲವು ಆರ್ಥಿಕ ಅಂಶಗಳಿಗೆ ಹೋಲಿಸಿದಾಗ ವಿಶಿಷ್ಟ ಅಂಶಗಳು ಕಂಡುಬರುತ್ತದೆ. ಜಿಲ್ಲಾ ಆದಾಯ, ತಲಾ ಆದಾಯಗಳು ರಾಜ್ಯ ಮಟ್ಟದ ಸರಾಸರಿಗಿಂತ ಹೆಚ್ಚಾಗಿವೆ. ಜಿಲ್ಲಾ ಆದಾಯದಲ್ಲಿ ಕೃಷಿ, ಕೈಗಾರಿಕೆ, ಹಾಗೂ ಸೇವಾ ಕ್ಷೇತ್ರಗಳ ಕೊಡುಗೆಗಳನ್ನು ಗಮನಿಸಿದಾಗ ಕೈಗಾರಿಕಾ ಕ್ಷೇತ್ರದ ಕೊಡುಗೆ ಹೆಚ್ಚು ಎಂಬುವುದನ್ನು ಗಮನಿಸಬಹುದು. ಈ ಅಂಶಗಳನ್ನು ಕೋಷ್ಟಕ 3.3 ರಲ್ಲಿ ತಿಳಿಯಬಹುದು.

ಕೋಷ್ಟಕ 3.3: ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕರ್ನಾಟಕ ರಾಜ್ಯದ ವಿವಿಧ ಮುಲಗಳಿಂದ ಬರುವ ಆದಾಯ

(1995–96)

ವಿವರ	ಕರ್ನಾಟಕ (ರೂ.ಲಕ್ಷಗಳಲ್ಲಿ)	ದಕ್ಷಿಣ ಕನ್ನಡ (ರೂ.ಲಕ್ಷಗಳಲ್ಲಿ)
ಕೃಷಿ ವಲಯ	1748568 (38.6)	97391 (31.6)
ಕೈಗಾರಿಕಾ ವಲಯ	973786 (21.5)	91748 (29.8)
ಸೇವಾವಲಯ	1802876 (39.8)	118937 (38.6)
ಒಟ್ಟು	4525230 (100.0)	308076 (100.0)
ತಲಾ ಆದಾಯ ರೂ.ಗಳಲ್ಲಿ	9,384	10,665

Source: State Domestic product Karnataka 1980-81, 1990-91, 96-97, Directorate of Economics and Statistics Bangalore 1998.
*Dakshina Kannada district (including Udupi).

2000–2001ರ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿ ತಲಾ ಆದಾಯವು ಸುಮಾರು ರೂ.29,962 ರಷ್ಟಿದ್ದು, ರಾಜ್ಯದ ಸರಾಸರಿ ತಲಾ ಆದಾಯದ ಸುಮಾರು ಎರಡರಷ್ಟು ಆಗುತ್ತದೆ. ಈ ಅಂಶಗಳನ್ನು ಕೋಷ್ಟಕ 3.4ರಲ್ಲಿ ಗಮನಿಸಬಹುದು.

ಕೋಷ್ಟಕ 3.4: ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕರ್ನಾಟಕದ ನಿವ್ವಳ ಆದಾಯ (1998–99)

ವಿವರಗಳು	ಒಟ್ಟು ಆದಾಯ (ರೂ.ಲಕ್ಷಗಳಲ್ಲಿ)		ತಲಾ ಆದಾಯ (ರೂ.ಗಳಲ್ಲಿ)	
	1993–94	1998–99	1993–94	1998–99
ಕರ್ನಾಟಕ	36,96,593	76,26,287	7,835	14,909
ದಕ್ಷಿಣ ಕನ್ನಡ	2,60,663	5,56,327	9,223	29,962

Source: Directorate of Economics and Statistics, Bangalore. (Government of Karnataka, Economic Survey 2000-2001).

1993–94ರಿಂದ ಜಿಲ್ಲೆಯ ನಿವ್ವಳ ಆದಾಯ ಹಾಗೂ ತಲಾ ಆದಾಯ ಗಮನಾರ್ಹವಾಗಿ ಹೆಚ್ಚಿದೆ.

ದಕ್ಷಿಣ ಕನ್ನಡ ಜಿಲ್ಲೆ ಬ್ಯಾಂಕುಗಳ ತವರೂರು ಎಂದೇ ಪ್ರಸಿದ್ಧಿಯನ್ನು ಪಡೆದಿದೆ. ಈ ಜಿಲ್ಲೆಯಲ್ಲಿ ನಾಲ್ಕು ರಾಷ್ಟ್ರೀಕೃತ ಬ್ಯಾಂಕುಗಳು ಬಹಳ ವರ್ಷಗಳ ಹಿಂದೆಯೇ ಜನ್ಮತಾಳಿದ್ದು ಇತರ ಅನೇಕ ವಾಣಿಜ್ಯ ಹಾಗೂ ಸಹಕಾರಿ ಬ್ಯಾಂಕುಗಳು ಜನಪ್ರಿಯವಾಗಿವೆ.

ಜಿಲ್ಲೆಯಲ್ಲಿ ಬ್ಯಾಂಕು ಸೌಲಭ್ಯಗಳ ಅಂಕಿ ಅಂಶಗಳನ್ನು ಕೋಷ್ಟಕ 3.5ರಲ್ಲಿ ಗಮನಿಸಬಹುದು.

ಕೋಷ್ಟಕ 3.5: ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬ್ಯಾಂಕುಗಳು (2003-04)

ವರ್ಷ	ಬ್ಯಾಂಕುಗಳು	ಒಟ್ಟು ಬ್ಯಾಂಕುಗಳ ಸಂಖ್ಯೆ	ಒಟ್ಟು ಜನಸಂಖ್ಯೆ	ಪ್ರತಿ ಶಾಖೆಗೆ ಸರಾಸರಿ ಜನಸಂಖ್ಯೆ
1990-91	ವಾಣಿಜ್ಯ ಬ್ಯಾಂಕುಗಳು	253	1567820	6,197
	ಗ್ರಾಮೀಣ ಬ್ಯಾಂಕುಗಳು	10	----	1,56,782
1996-97	ವಾಣಿಜ್ಯ ಬ್ಯಾಂಕುಗಳು	267	1776032	6,652
	ಗ್ರಾಮೀಣ ಬ್ಯಾಂಕುಗಳು	09	---	1,97,336
1999-2000	ವಾಣಿಜ್ಯ ಬ್ಯಾಂಕುಗಳು	290	1896403	6,539
	ಗ್ರಾಮೀಣ ಬ್ಯಾಂಕುಗಳು	11	---	1,72,400
2003-2004	ವಾಣಿಜ್ಯ ಬ್ಯಾಂಕುಗಳು	292	---	---
	ಗ್ರಾಮೀಣ ಬ್ಯಾಂಕುಗಳು	11	--	---

Source: Dakshina Kannada District at a glance 1990-91, 1996097, 1999-2000.

1990-2000 ಅವಧಿಯಲ್ಲಿ ವಾಣಿಜ್ಯ ಬ್ಯಾಂಕುಗಳ ಶಾಖೆಗಳು ಗಮನಾರ್ಹವಾಗಿ ಹೆಚ್ಚಿರುವುದನ್ನು ಗಮನಿಸಬಹುದು. ಜಿಲ್ಲೆಯ ಬ್ಯಾಂಕುಗಳ ಸೌಲಭ್ಯವನ್ನು ರಾಜ್ಯಮಟ್ಟಕ್ಕೆ ಹೋಲಿಸಿದಾಗ ಹೆಚ್ಚು ಅಭಿವೃದ್ಧಿಹೊಂದಿದೆ ಎಂಬುವುದನ್ನು ಗಮನಿಸಬಹುದು. ಈ ಅಂಶಗಳನ್ನು ಕೋಷ್ಟಕ 3.6ರಲ್ಲಿ ಗುರುತಿಸಲಾಗಿದೆ.

ಕೋಷ್ಟಕ 3.6: ದಕ್ಷಿಣ ಕನ್ನಡ ಹಾಗೂ ಕರ್ನಾಟಕದಲ್ಲಿ ಬ್ಯಾಂಕುಗಳ ಸೌಲಭ್ಯ (1999-2000)

ವಿಷಯಗಳು	ವಾಣಿಜ್ಯ ಬ್ಯಾಂಕುಗಳ ಸಂಖ್ಯೆ	ಗ್ರಾಮೀಣ ಬ್ಯಾಂಕುಗಳ ಸಂಖ್ಯೆ	ಒಟ್ಟು ಜನಸಂಖ್ಯೆ	ಪ್ರತಿಶಾಖೆಗೆ ಸರಾಸರಿ ಜನಸಂಖ್ಯೆ
ಕರ್ನಾಟಕ	3,098	862	36992866	9,341
ದಕ್ಷಿಣ ಕನ್ನಡ	296	11	1633392	5,320

Source: Karnataka at a glance 1999-2000

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಚಳವಳಿ

ಜಿಲ್ಲೆಯಲ್ಲಿ ಸಹಕಾರಿ ಚಳವಳಿಯು ಒಂದು ಇತಿಹಾಸವನ್ನೇ ಹೊಂದಿದೆ. ಕೆಲವು ಪ್ರಮುಖ ಸಹಕಾರಿ ನಾಯಕರು ಇಲ್ಲಿಯ ಸಹಕಾರಿ ಚಳವಳಿಯ ನೇತಾರರಾಗಿದ್ದರು. ಮೊಲಹಳ್ಳಿ ಶಿವರಾಮ್, ಕಾರ್ನಾಡ್ ಸದಾಶಿವರಾವ್ ಮೊದಲಾದ ಸಾಮಾಜಿಕ ಕಳಕಳಿಯ ನಾಯಕರು ಸಹಕಾರಿ ಸಂಘಗಳ ವಿಸ್ತರಣೆಗೆ ಶ್ರಮಿಸಿದವರು. 1904ರ ಪತ್ತಿನ ಸಹಕಾರಿ ಸಂಘದ ಕಾಯ್ದೆಯನ್ವಯ ಪುತ್ತೂರು ತಾಲೂಕಿನಲ್ಲಿ ಪ್ರಪ್ರಥಮ ಗ್ರಾಮೀಣ ಸಹಕಾರಿ ಸಂಘವು 1909ರಲ್ಲಿ ಸ್ಥಾಪಿಸಲ್ಪಟ್ಟಿತು. ಬಳಿಕ ಸ್ಥಳೀಯ ಸಹಕಾರಿ ಒಕ್ಕೂಟ ಮತ್ತು ಜಿಲ್ಲಾ ಸಹಕಾರಿ ಮಂಡಳಿಗಳು ಸ್ಥಾಪಿಸಲ್ಪಟ್ಟವು. ಈ ಸಹಕಾರಿ ಸಂಘಗಳು ಮುಖ್ಯವಾಗಿ ಹಿಂದುಳಿದ ಸಮುದಾಯದ ಅಭಿವೃದ್ಧಿಗೆ ಬೆಂಬಲವಾಗಿ ಕಾರ್ಯನಿರ್ವಹಿಸಿದವು. ಕೃಷಿಕರಿಗೆ ತಮ್ಮ ಕೃಷಿ ಚಟುವಟಿಕೆಗಳಿಗೆ ಬಂಡವಾಳ ಹೂಡಲು ಹಣಕಾಸಿನ ಬೆಂಬಲವನ್ನು ಈ ಸಹಕಾರಿ ಸಂಘಗಳು ನೀಡಿದವು. ಆರ್ಥಿಕವಾಗಿ ಉತ್ಪಾದಕ ಚಟುವಟಿಕೆಗಳಿಗೆ ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಕೊಡುತ್ತಿದ್ದವು. ಇದರಿಂದಾಗಿ ರೈತರು ಸಾಂಘಿಕವಲ್ಲದ ಹಣಕಾಸು ಮೂಲಗಳನ್ನು ಅವಲಂಬಿಸುವುದು ಕಡಿಮೆಯಾಯಿತು. ಮುಂದಿನ ವರ್ಷಗಳಲ್ಲಿ ಸಹಕಾರಿ ಚಳವಳಿಯು ಕೃಷಿ ಉತ್ಪನ್ನಗಳ ಮಾರುಕಟ್ಟೆ, ಹಾಲು ಉತ್ಪಾದನೆ, ಸಕ್ಕರೆ ಉತ್ಪಾದನೆ, ಬಳಕೆದಾರರ ಸೇವೆ, ಮೀನುಗಾರಿಕೆ ಹೀಗೆ ಅನೇಕ ಕ್ಷೇತ್ರಗಳಿಗೆ ವಿಸ್ತರಣೆಗೊಂಡಿತು. ಕೇಂದ್ರ ಅಡಿಕೆ ಮತ್ತು ಕೊಕ್ಕು ಮಾರುಕಟ್ಟೆ ಹಾಗೂ ಪರಿಷ್ಕರಣಾ ಸಹಕಾರಿ ಸಂಘ (ಕ್ಯಾಂಪ್ಕೊ) 1970ದಶಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿತು. ಇದು ಏಷ್ಯಾದಲ್ಲೇ ಅತ್ಯಂತ ದೊಡ್ಡ ಸಹಕಾರಿ ಸಂಘ.

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು, ಅಲ್ಲದೆ ಇತರ ಅನೇಕ ನಗರ ಸಹಕಾರಿ ಬ್ಯಾಂಕುಗಳು ಬಲಿಷ್ಠವಾಗಿ ಬೆಳೆದುನಿಂತಿವೆ.

ವಿವಿಧ ನಮೂನೆಯ ಸಹಕಾರಿ ಸಂಘಗಳು ಜಿಲ್ಲೆಯ ಬೇರೆ ಬೇರೆ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅವುಗಳನ್ನು ಕೋಷ್ಟಕ 3.7ರಲ್ಲಿ ಗಮನಿಸಬಹುದು.

ಕೋಷ್ಟಕ 3.7 : ದ.ಕ.ಜಿಲ್ಲೆಯಲ್ಲಿ ಸಹಕಾರಿ ಬ್ಯಾಂಕುಗಳ ಅಂಕಿ ಅಂಶಗಳ ನೋಟ(1990–91) ರಿಂದ (1999–2000)

ಸಹಕಾರಿ ಬ್ಯಾಂಕುಗಳ ವಿಧಗಳು	ಮಂಗಳೂರು	ಬಂಟ್ವಾಳ	ಪುತ್ತೂರು	ಸುಳ್ಯ	ಬೆಳ್ತಂಗಡಿ
ವಿವಿಧೊದ್ದೇಶ ರಾಜ್ಯ ಸಹಕಾರಿ ಬ್ಯಾಂಕುಗಳು	2	--	--	--	--
ರಾಜ್ಯಮಟ್ಟದ ಸಹಕಾರಿ ಬ್ಯಾಂಕುಗಳು	2	--	--	--	--
ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು	1	--	--	--	--
ಪ್ರಾಥಮಿಕ ಸಹಕಾರಿ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು	1	1	1	1	1
ಪ್ರಾಥಮಿಕ ಸಹಕಾರಿ ಬ್ಯಾಂಕುಗಳು	23	28	20	22	22
ಲ್ಯಾಂಪ್ ಸಹಕಾರಿ ಬ್ಯಾಂಕುಗಳು	1	1	1	1	1
ನಗರ ಸಹಕಾರಿ ಬ್ಯಾಂಕುಗಳು	7	--	1	--	--
ಇತರ ಪತ್ತಿನ ಸಹಕಾರಿ ಸಂಘಗಳು	20	4	4	1	2
ಉದ್ಯೋಗಿಗಳ ಪತ್ತಿನ ಸಹಕಾರಿ ಸಂಘಗಳು	25	2	1	--	--
ಕೃಷಿ ಮಾರುಕಟ್ಟೆ ಸಹಕಾರಿ ಸಂಘಗಳು	1	--	--	--	--
ಇತರ ಮಾರುಕಟ್ಟೆ ಸಹಕಾರಿ ಬ್ಯಾಂಕುಗಳು	3	1	1	1	1
ಪರಿಷ್ಕರಣಾ ಸಹಕಾರಿ ಬ್ಯಾಂಕುಗಳು	1	--	--	--	--
ಜಾನುವಾರು ಸಹಕಾರಿ ಬ್ಯಾಂಕುಗಳು	1	--	--	--	--
ಹಾಲು ಉತ್ಪಾದಕರ ಸಹಕಾರಿ ಬ್ಯಾಂಕುಗಳು	45	40	59	30	44
ಹಾಲು ಉತ್ಪಾದಕರ ಸಹಕಾರಿ ಬ್ಯಾಂಕುಗಳು ಒಕ್ಕೂಟ	2	--	1	--	--
ನೀರಾವರಿ ಸಹಕಾರಿ ಬ್ಯಾಂಕುಗಳು	2	--	1	--	--
ನೀರಾವರಿ ಗ್ರಾಹಕರ ಸಹಕಾರಿ ಬ್ಯಾಂಕುಗಳು	1	--	--	--	--
ಮೀನುಗಾರಿಕಾ ಸಹಕಾರಿ ಬ್ಯಾಂಕುಗಳು	22	--	--	--	--
ನೇಯ್ಗೆ ಸಹಕಾರಿ ಬ್ಯಾಂಕುಗಳು	6	--	--	--	--
ಕೈಗಾರಿಕಾ ಸಹಕಾರಿ ಬ್ಯಾಂಕುಗಳು	24	7	10	2	4
ಗ್ರಾಹಕರ ಸಹಕಾರಿ ಬ್ಯಾಂಕುಗಳು	25	2	3	1	3
ವಸತಿ ಸಹಕಾರಿ ಬ್ಯಾಂಕುಗಳು	31	2	3	2	2
ಕಾರ್ಮಿಕ ಸಹಕಾರಿ ಬ್ಯಾಂಕುಗಳು	2	---	---	1	--
ಜಿಲ್ಲಾ ಸಹಕಾರಿ ಒಕ್ಕೂಟ	2	--	---	---	---
ವಿವಿಧೋದ್ದೇಶ ಸಹಕಾರಿ ಬ್ಯಾಂಕುಗಳು	20	4	1	3	1
ವಿದ್ಯಾರ್ಥಿ ಗ್ರಾಹಕರ ಬ್ಯಾಂಕುಗಳು	12	---	1	1	1
ಮಹಿಳಾ ಸಹಕಾರಿ ಬ್ಯಾಂಕುಗಳು	3	---	---	---	--
ಮಹಿಳಾ ವಿವಿಧೋದ್ದೇಶ ಸಹಕಾರಿ ಬ್ಯಾಂಕುಗಳು	9	5	4	1	2
ರೇಷ್ಮೆ ಕೃಷಿಕರ ಸಹಕಾರಿ ಬ್ಯಾಂಕುಗಳು	--	1	--	--	--
ವಿದ್ಯುತ್ ಸಹಕಾರಿ ಬ್ಯಾಂಕುಗಳು	---	1	---	---	1
ಇತರ ಸಹಕಾರಿ ಬ್ಯಾಂಕುಗಳು	29	16	9	5	8
ಒಟ್ಟು	323	115	122	73	94

Source: Dakshina Kannada District at a glance 1990-91, 1999-2000

ವ್ಯಾಪಕವಾದ ಚಟುವಟಿಕೆಗಳಲ್ಲಿ ಸಹಕಾರಿ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ ಎಂಬುವುದನ್ನು ಮೇಲಿನ ಕೋಷ್ಟಕದಲ್ಲಿ ಗಮನಿಸಬಹುದು.

ಜಿಲ್ಲೆಯಲ್ಲಿ ಕೃಷಿಕರಿಗೆ ಹಣಕಾಸು ಒದಗಿಸುವಲ್ಲಿ ಸುಮಾರು 115 ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ 23 ಬ್ಯಾಂಕುಗಳು ಮಂಗಳೂರು, 28 ಬ್ಯಾಂಕುಗಳು ಬಂಟ್ವಾಳ, 22 ಬ್ಯಾಂಕುಗಳು ಸುಳ್ಯ, 20 ಬ್ಯಾಂಕುಗಳು ಪುತ್ತೂರು, ಹಾಗೂ 22 ಬ್ಯಾಂಕುಗಳು ಬೆಳ್ತಂಗಡಿ ತಾಲೂಕಿನಲ್ಲಿವೆ.

ಬೆಳ್ತಂಗಡಿ ತಾಲೂಕಿನಲ್ಲಿ ಒಟ್ಟು 22 ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳು, ಇವುಗಳಲ್ಲಿ ಕೆಲವು ಶಾಖೆಗಳನ್ನು ಹೊಂದಿಕೊಂಡು ತಾಲೂಕಿನ ರೈತರಿಗೆ ಹಣಕಾಸು ಒದಗಿಸುವಲ್ಲಿ ಕಾರ್ಯ ನಿರ್ವಹಿಸುತ್ತವೆ.

#####

ಟಿಪ್ಪಣಿ:

1. ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2003–2004
2. A Handbook of Karnataka Chief Editor: H.Chittaranjan

ಅಧ್ಯಾಯ 4

ಅಧ್ಯಯನ ಫಲಿತಾಂಶಗಳ ವಿಶ್ಲೇಷಣೆ

ಅಧ್ಯಾಯ 4
ಅಧ್ಯಯನ ಫಲಿತಾಂಶಗಳ ವಿಶ್ಲೇಷಣೆ

ವ್ಯಾಪಕವಾಗಿ ಹರಡಿಕೊಂಡಿರುವ ಸಹಕಾರಿ ಸಂಸ್ಥೆಗಳ ಜಾಲದಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು ಹೆಚ್ಚು ಮಹತ್ವವನ್ನು ಪಡೆದಿವೆ. ಯಾಕೆಂದರೆ ಇದು ಕೃಷಿಕರಿಗೆ ಗ್ರಾಮಮಟ್ಟದಲ್ಲಿ ಹಣಕಾಸು ಒದಗಿಸುವ ಒಂದು ಸಾಂಸ್ಥಿಕ ವ್ಯವಸ್ಥೆ. ಈ ಸಂಘಗಳು ಗ್ರಾಮೀಣ ಪ್ರದೇಶದಲ್ಲಿ ರೈತಾಪಿ ಜನರನ್ನು ಸದಸ್ಯರನ್ನಾಗಿಸಿಕೊಂಡು, ಬ್ಯಾಂಕುಗಳ ಚಟುವಟಿಕೆಗಳಾದ ಠೇವಣಿ ಸಂಗ್ರಹಣೆ ಮತ್ತು ಸಾಲ ಒದಗಿಸುವುದರ ಮೂಲಕ ರೈತರಿಗೆ ಸೇವೆಯನ್ನು ಸಲ್ಲಿಸುತ್ತದೆ. ಈ ಸಂಘಗಳ ಕಾರ್ಯನಿರ್ವಹಣೆಯ ವಿಶ್ಲೇಷಣೆಯನ್ನು ಸಾಂಸ್ಥಿಕ ಅಂಶಗಳ ಆಧಾರದಲ್ಲಿ ಹಾಗೂ ಕೃಷಿಕರ ದೃಷ್ಟಿಕೋನದ ಆಧಾರದಲ್ಲಿ ನಡೆಸಬಹುದು. ಈ ರೀತಿ, ಈ ಅಧ್ಯಯನದಲ್ಲಿ, ಬೆಳ್ತಂಗಡಿ ತಾಲೂಕಿನ ಕೃಷಿ ಸಹಕಾರಿ ಬ್ಯಾಂಕುಗಳ ಕಾರ್ಯ ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ. ಬೆಳ್ತಂಗಡಿ ತಾಲೂಕಿನಲ್ಲಿರುವ ಒಟ್ಟು 22 ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ 14 ಸಂಘಗಳನ್ನು ಅಧ್ಯಯನಕ್ಕೆ ಆಯ್ಕೆಮಾಡಲಾಗಿದೆ. ಈ ಸಂಘಗಳ ಆಂತರಿಕ ಅಂಶಗಳಲ್ಲಿ ಮುಖ್ಯವಾಗಿ ಸಾಂಸ್ಥಿಕಸಾಮರ್ಥ್ಯ ಮತ್ತು ಕಾರ್ಯನಿರ್ವಹಣಾ ಸಾಮರ್ಥ್ಯವನ್ನು ವಿಶ್ಲೇಷಣೆ ಮಾಡಲಾಗಿದೆ. ಸಂಘದ ಸದಸ್ಯರ ಸಂಖ್ಯೆ, ಪಾಲು ಬಂಡವಾಳ, ಸಾಂಸ್ಥಿಕ ಸಾಮರ್ಥ್ಯದ ಪ್ರಮುಖ ಅಂಶಗಳಾದರೆ, ಠೇವಣಿ ಸಂಗ್ರಹ, ಸಾಲ, ಸಾಲದ ಮರುಪಾವತಿ ಮತ್ತು ಲಾಭ, ವೆಚ್ಚಗಳು, ಕಾರ್ಯ ನಿರ್ವಹಣಾ ಸಾಮರ್ಥ್ಯದ ಸೂಚಕಗಳಾಗಿವೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಬೆಳ್ತಂಗಡಿ ತಾಲೂಕಿನಲ್ಲಿರುವ 14 ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳ ಕಾರ್ಯ ನಿರ್ವಹಣೆಯನ್ನು ವಿಶ್ಲೇಷಿಸಿಲಾಗಿದೆ.

ಸಾಂಸ್ಥಿಕ ಸಾಮರ್ಥ್ಯ

ಯಾವುದೇ ಸಂಸ್ಥೆ ಕಾರ್ಯನಿರ್ವಹಿಸಲು ಅದರ 'ಸಾಂಸ್ಥಿಕ ಸಾಮರ್ಥ್ಯ' ಬಲಿಷ್ಠವಾಗಿರಬೇಕು. ಸಂಸ್ಥೆಯ ಆಂತರಿಕಬಲವನ್ನು ನಿರ್ಧಾರಿಸುವಲ್ಲಿ ಸದಸ್ಯರ ಸಂಖ್ಯೆ, ಉದ್ಯೋಗಿಗಳ ಸಂಖ್ಯೆ ಮತ್ತು ಬಂಡವಾಳ ಪ್ರಮುಖ ಪಾತ್ರವಹಿಸುತ್ತದೆ. ಸಹಕಾರಿ

ಸಂಸ್ಥೆಗಳಲ್ಲಂತೂ ಸದಸ್ಯರ ಸಂಖ್ಯೆ ಮತ್ತು ಪಾಲುಬಂಡವಾಳವು ಅದರ ಕಾರ್ಯ ನಿರ್ವಹಣೆಗೆ ಪ್ರಮುಖವಾದ ಅಂಶಗಳು.

ಬೆಳ್ತಂಗಡಿ ತಾಲೂಕಿನಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿರುವ ಸಹಕಾರಿ ಸಂಘಗಳ ಸದಸ್ಯರ ಸಂಖ್ಯೆಯನ್ನು ಕೋಷ್ಟಕ 4.1 ರಲ್ಲಿ ಗಮನಿಸಬಹುದು.

ಕೋಷ್ಟಕ 4.1 : ಮಾದರಿ ಪ್ರಾಥಮಿಕ ಸಹಕಾರಿ ಸಂಘಗಳ ಸದಸ್ಯರ ಸಂಖ್ಯೆ (2005–06)

ಪ್ರಾಥಮಿಕ ಸಹಕಾರಿ ಬ್ಯಾಂಕುಗಳು	ಎ ಗುಂಪು	ಬಿ ಗುಂಪು	ಸಿ ಗುಂಪು	ಡಿ ಗುಂಪು	ಒಟ್ಟು
ಉಜಿರೆ	1540	1	14706	---	16247
ಮುಂಡಾಜೆ	2392	1	4495	156	7044
ಧರ್ಮಸ್ಥಳ	1843	1	88	--	1932
ಬಾರ್ಯ	1214	1	---	---	1215
ಬೆಳ್ತಂಗಡಿ	2305	1	--	--	2306
ಪೆರಾಡಿ	1081	1	--	79	1161
ಕೊಯ್ಯೂರು	863	1	707	--	1571
ಹತ್ಯಡ್ಕ	2032	1	--	--	2033
ಗುರುವಾಯನ ಕೆರೆ	--	--	----	--	--
ಮೆಚ್ಚಿನ	945	1	354	42	1342
ನಾರವಿ	---	---	---	---	
ತಣ್ಣೀರುಪಂತ	10472	1	---	125	10598
ನಿಡ್ಲೆ	2306	1	--	--	2307
ವೇಣೂರು	--	20231	--	--	2024

ಮಾದರಿ ಸಹಕಾರಿ ಸಂಘಗಳಲ್ಲಿ, ಉಜಿರೆ ಪ್ರಾಥಮಿಕ ಸಹಕಾರಿ ಸಂಘ ಅತ್ಯಂತ ಹೆಚ್ಚು ಸದಸ್ಯರನ್ನು (16,247) ಹೊಂದಿದೆ. ಪೆರಾಡಿ ಪ್ರಾಥಮಿಕ ಸಹಕಾರಿ ಸಂಘವು ಅತ್ಯಂತ ಕಡಿಮೆ ಸದಸ್ಯರನ್ನು (1,161) ಹೊಂದಿದೆ. ಉಜಿರೆ ಮತ್ತು ತಣ್ಣೀರುಪಂತ ಸಹಕಾರಿ ಸಂಘಗಳು 10,000ಕ್ಕಿಂತಲೂ ಹೆಚ್ಚು ಸದಸ್ಯರನ್ನು ಹೊಂದಿದ ಸಹಕಾರಿ ಸಂಘಗಳು. ಮಿಕ್ಕುಳಿದ ಹೆಚ್ಚಿನ ಎಲ್ಲಾ ಸಹಕಾರಿ ಸಂಘಗಳು ಸುಮಾರಾಗಿ 1,500–2000 ದಷ್ಟು ಸದಸ್ಯರನ್ನು ಹೊಂದಿರುತ್ತವೆ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಸಂಘದ ಸದಸ್ಯರ ಸಂಖ್ಯೆಯಲ್ಲಿ ಆದ ಹೆಚ್ಚಳವನ್ನು 4.2 ರಲ್ಲಿ ಗಮನಿಸಬಹುದು.

ಕೋಷ್ಟಕ 4.2: ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸದಸ್ಯತ್ವದ ಬೆಳವಣಿಗೆ

(2005 – 06)

(ರೂ. ಲಕ್ಷಗಳಲ್ಲಿ)


ವರ್ಷ	ಉಜಿರೆ		ಮುಂಡಾಜೆ		ಧರ್ಮಸ್ಥಳ		ಬಾರ್ಯ		ಬೆಳ್ತಂಗಡಿ	
	ಸದಸ್ಯರ ಸಂಖ್ಯೆ	ಹೆಚ್ಚಳ ದರ	ಸದಸ್ಯರ ಸಂಖ್ಯೆ	ಹೆಚ್ಚಳ ದರ	ಸದಸ್ಯರ ಸಂಖ್ಯೆ	ಹೆಚ್ಚಳ ದರ	ಸದಸ್ಯರ ಸಂಖ್ಯೆ	ಹೆಚ್ಚಳ ದರ	ಸದಸ್ಯರ ಸಂಖ್ಯೆ	ಹೆಚ್ಚಳ ದರ
2002-03	12957	---	6037	---	1751	---	2200	--	2075	---
2003-04	15510	19.70	6191	2.55	1932	10.33	1028	53.27	2103	1.34
2004-05	16188	4.37	7195	16.21	2091	7.81	1094	6.42	2103	–
2005-06	16247	0.36	70.44	-2.09	1932	-7.60	1210	11.06	2306	9.65

ವರ್ಷ	ಪೆರಾಡಿ		ಕೊಯ್ಯೂರು		ಹತ್ಯಡ್ಕ		ವೇಣೂರು	
	ಸದಸ್ಯರ ಸಂಖ್ಯೆ	ಹೆಚ್ಚಳ ದರ	ಸದಸ್ಯರ ಸಂಖ್ಯೆ	ಹೆಚ್ಚಳ ದರ	ಸದಸ್ಯರ ಸಂಖ್ಯೆ	ಹೆಚ್ಚಳ ದರ	ಸದಸ್ಯರ ಸಂಖ್ಯೆ	ಹೆಚ್ಚಳ ದರ
2002- 03	992	–	–	–	1984	–	1803	–
2003- 04	1045	5.34	1178	–	2033	2.47	18.28	1.38
2004- 05	1126	7.19	1389	17.91	2105	3.54	1869	2.24
2005- 06	1161	3.10	1571	13.10	2033	-3.42	2024	8.29

ಸದಸ್ಯರ ಸಂಖ್ಯೆಯ ಹೆಚ್ಚಳದ ದರವು ವಿವಿಧ ಸಂಘಗಳಲ್ಲಿ ಹಾಗೂ ಬೇರೆ ಬೇರೆ ಅವಧಿಗಳಲ್ಲಿ ವಿಭಿನ್ನವಾಗಿರುವುದನ್ನು ಗಮನಿಸಬಹುದು. ಹತ್ಯಡ್ಕ ಮತ್ತು ಮುಂಡಾಜೆ ಪ್ರಾಥಮಿಕ ಸಹಕಾರಿ ಸಂಘಗಳು 2005-2006ರ ಸಾಲಿನಲ್ಲಿ ಸದಸ್ಯರ ಹೆಚ್ಚಳದಲ್ಲಿ ನೇತ್ಯರ್ಥಕದರವನ್ನು ಸೂಚಿಸುತ್ತವೆ. ಅಂದರೆ, ಆ ಅವಧಿಯಲ್ಲಿ ಕೆಲವು ಸದಸ್ಯರು ಸಂಘವನ್ನು ತ್ಯಜಿಸಿರುತ್ತಾರೆ ಎಂದು ತಿಳಿಯಬಹುದು. ಮಿಕ್ಕುಳಿದ ಹೆಚ್ಚಿನ ಸಹಕಾರಿ ಸಂಘಗಳಲ್ಲಿ ಸದಸ್ಯತನ ಹೆಚ್ಚಳದ ದರವು ಗಮನಾರ್ಹವಾಗಿದೆ.

2005-06ರ ಸಾಲಿನ ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಬೆಳವಣಿಗೆಯನ್ನು ಈ ಕೆಳಗಿನ ರೇಖಾಚಿತ್ರದ ಮೂಲಕ ತೋರಿಸಬಹುದು

ರೇಖಾ ಚಿತ್ರ 4.2(ಎ): ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸದಸ್ಯತ್ವದ ಬೆಳವಣಿಗೆ (2005-06)



ಪಾಲು ಬಂಡವಾಳ

ಸಹಕಾರಿ ಸಂಘದ ಸಾಂಸ್ಥಿಕ ಸಾಮರ್ಥ್ಯವನ್ನು ನಿರೂಪಿಸುವ ಪ್ರಮುಖ ಸೂಚಕ ಪಾಲುಬಂಡವಾಳ. ಪಾಲುಬಂಡವಾಳವು ಸಂಘದ ಆರ್ಥಿಕ ದೃಢತೆಯನ್ನು ಸೂಚಿಸುತ್ತದೆ. ಮಾತ್ರವಲ್ಲದೆ ಸಂಘದ ಸದಸ್ಯರ ಕೊಡುಗೆ ಮತ್ತು ಪಾಲ್ಗೊಳ್ಳುವ ರೀತಿಯನ್ನು ಪ್ರತಿಬಿಂಬಿಸುತ್ತವೆ. ಬೆಳ್ತಂಗಡಿ ತಾಲೂಕಿನ ಹದಿನಾಲ್ಕು ಪ್ರಾಥಮಿಕ ಸಹಕಾರಿ ಸಂಘದ ಪಾಲುಬಂಡವಾಳದ ವಿವರ ಕೋಷ್ಟಕ 4.3ರಲ್ಲಿ ಗುರುತಿಸಬಹುದು.

ಕೋಷ್ಟಕ 4.3: ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಪಾಲು ಬಂಡವಾಳ (2005–2006)

(ರೂ.ಲಕ್ಷಗಳಲ್ಲಿ)

ಪ್ರಾಥಮಿಕ ಸಹಕಾರಿ ಬ್ಯಾಂಕುಗಳು	ಎ ಗುಂಪು	ಬಿ ಗುಂಪು	ಸಿ ಗುಂಪು	ಡಿ ಗುಂಪು	ಒಟ್ಟು
ಉಜಿರೆ	47.39	1.78	0.77	---	49.94
ಮುಂಡಾಜೆ	41.75	3.28	0.58	0.09	45.69
ಧರ್ಮಸ್ಥಳ	50.83	3.35	0.18	---	54.36
ಬಾರ್ಯ	41.05	2.65	---	---	43.70
ಬೆಳ್ತಂಗಡಿ	26.20	1.57	0.34	---	28.12
ಪೆರಾಡಿ	26.07	1.68	0.59	0.11	27.92
ಕೊಯ್ಯೂರು	30.98	0.40	0.07	---	31.45
ಹತ್ಯಡ್ಕ	39.36	1.89	---	0.04	41.25
ಗುರುವಾಯನಕೆರೆ	9.16	1.70	0.04	---	10.90
ಮೆಚ್ಚಿನ	13.60	1.05	----	---	14.66
ನಾರವಿ	31.56	1.48	----	0.13	33.16
ತಣ್ಣೀರುಪಂತ	29.22	0.89	0.02	0.08	30.21
ನಿಡ್ಲೆ	29.66	1.78	0.90	----	32.34
ವೇಣೂರು	36.36	0.25	0.05	0.15	36.77

ಹದಿನಾಲ್ಕು ಸಹಕಾರಿ ಸಂಘಗಳಲ್ಲಿ ಐದು ಸಹಕಾರಿ ಸಂಘಗಳು 40 ಲಕ್ಷಕ್ಕಿಂತಲೂ ಹೆಚ್ಚು ಪಾಲು ಬಂಡವಾಳವನ್ನು ಹೊಂದಿದ್ದು, ಐದು ಸಂಘಗಳು 30 ಲಕ್ಷಕ್ಕಿಂತಲೂ ಹೆಚ್ಚು ಹಾಗೂ ಇನ್ನುಳಿದ ನಾಲ್ಕು ಸಂಘಗಳು 10ಲಕ್ಷಕ್ಕಿಂತಲೂ ಹೆಚ್ಚು ಪಾಲು ಬಂಡವಾಳ ಹೊಂದಿದೆ.

ಅಧ್ಯಯನಕ್ಕೆ ಆಯ್ಕೆ ಮಾಡಿರುವ ಹದಿನಾಲ್ಕು ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ 9 ಸಹಕಾರಿ ಸಂಘಗಳು ಕಳೆದ ನಾಲ್ಕು ವರ್ಷಗಳ ಪಾಲು ಬಂಡವಾಳದ ವಿವರಗಳನ್ನು ಕೊಟ್ಟಿದ್ದು ಇದನ್ನು ಕೋಷ್ಟಕ 4.4 ರಲ್ಲಿ ಗಮನಿಸಬಹುದು. ಮಿಕ್ಕುಳಿದ ಐದು ಸಹಕಾರಿ ಸಂಘಗಳಲ್ಲಿ 2005–2006ರ ಸಾಲಿನ ಪಾಲು ಬಂಡವಾಳವು ಲಭ್ಯವಿರದಿರುವುದರಿಂದ, ವಾರ್ಷಿಕ ಹೆಚ್ಚಳದ ದರವನ್ನು ಕಂಡು ಹಿಡಿಯಲು ಆಗಲಿಲ್ಲ.

ಕೋಷ್ಟಕ 4.4: ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಪಾಲು ಬಂಡವಾಳದ ಬೆಳವಣಿಗೆ (2005–06)

(ರೂ. ಲಕ್ಷಗಳಲ್ಲಿ)


ವರ್ಷ	ಉಜಿರೆ		ಮುಂಡಾಜೆ		ಧರ್ಮಸ್ಥಳ		ಭಾರ್ಯ	
	ಪಾಲು ಬಂಡವಾಳ	ಹೆಚ್ಚಳ ದರ	ಪಾಲು ಬಂಡವಾಳ	ಹೆಚ್ಚಳ ದರ	ಪಾಲು ಬಂಡವಾಳ	ಹೆಚ್ಚಳ ದರ	ಪಾಲು ಬಂಡವಾಳ	ಹೆಚ್ಚಳ ದರ
2002– 03	30.39	–	30.62	–	15.32	–	22.33	–
2003– 04	34.34	12.99	32.91	7.47	37.12	142.29	26.69	19.52
2004– 05	40.53	18.02	32.91	0	41.69	12.31	31.10	16.52
2005– 06	49.93	23.19	45.69	38.83	54.35	30.36	43.70	40.51

ವರ್ಷ	ಬೆಳ್ತಂಗಡಿ		ಪೆರಾಡಿ		ಕೊಯ್ಯೂರು		ಹತ್ಯಡ್ಕ		ವೇಣೂರು	
	ಪಾಲು ಬಂಡವಾಳ	ಹೆಚ್ಚಳ ದರ	ಪಾಲು ಬಂಡವಾಳ	ಹೆಚ್ಚಳ ದರ	ಪಾಲು ಬಂಡವಾಳ	ಹೆಚ್ಚಳ ದರ	ಪಾಲು ಬಂಡವಾಳ	ಹೆಚ್ಚಳ ದರ	ಪಾಲು ಬಂಡವಾಳ	ಹೆಚ್ಚಳ ದರ
2002–03	14.75	–	13.53	–	–	–	32.45	–	17.43	–
2003–04	29.77	101.83	15.64	15.59	17.05	–	33.68	3.79	18.72	7.40
2004–05	17.33	–41.78	16.79	7.99	21.23	24.51	34.41	2.16	20.86	10.25
2005–06	28.11	62.20	27.91	66.22	31.45	48.13	41.25	19.87	32.34	55.03

ಬೆಳ್ತಂಗಡಿ ಪ್ರಾಥಮಿಕ ಸಹಕಾರಿ ಸಂಘ ಹೊರತಾಗಿ ಮಿಕ್ಕುಳಿದ ಎಲ್ಲಾ ಸಂಘಗಳ ಪಾಲುಬಂಡವಾಳದ ಹೆಚ್ಚಳದ ದರವು ಋಣಾತ್ಮಕವಾಗಿದೆ. ಕೆಲವು ಸಂಘಗಳ ಪಾಲು ಬಂಡವಾಳದ ವಾರ್ಷಿಕ ಹೆಚ್ಚಳದ ದರವು ಅತ್ಯಂತ ಗಮನಾರ್ಹವಾಗಿರುವುದನ್ನು ಗುರುತಿಸಬಹುದು.

2005–06ರ ಸಾಲಿನ ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಪಾಲು ಬಂಡವಾಳದ ಬೆಳವಣಿಗೆಯನ್ನು ಈ ಕೆಳಗಿನ ರೇಖಾಚಿತ್ರ 4.4(ಎ)ಯ ಮೂಲಕ ತೋರಿಸಬಹುದು

ರೇಖಾಚಿತ್ರ 4.4(ಎ): ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಪಾಲು ಬಂಡವಾಳದ ಬೆಳವಣಿಗೆ (2005–06)



ಠೇವಣಿ ಸಂಗ್ರಹಣೆ

ಸಹಕಾರಿ ಬ್ಯಾಂಕುಗಳ ಹಣಕಾಸುವ್ಯವಹಾರದ ಸಾಮರ್ಥ್ಯವು ಅವುಗಳು ಸಂಗ್ರಹಿಸುವ ಠೇವಣಿಗಳನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಪತ್ತಿನ ಸಹಕಾರಿ ಬ್ಯಾಂಕುಗಳ ನಿಯಮದಂತೆ ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳು ಉಳಿತಾಯ ಠೇವಣಿ, ನಿರಖು ಠೇವಣಿ, ಸಂಚಯ ಠೇವಣಿ, ಕಡ್ಡಾಯ ಠೇವಣಿ, ಮಾಸಿಕ ಠೇವಣಿ, ಸಿಬ್ಬಂಧಿ ಭವಿಷ್ಯನಿಧಿ ಠೇವಣಿ, ಹೀಗೆ ವಿವಿಧ ನಮೂನೆಗಳಲ್ಲೂ ಠೇವಣಿಗಳನ್ನು ಸಂಗ್ರಹಿಸುತ್ತಾರೆ. ಇವುಗಳಲ್ಲಿ ಕೆಲವು ಠೇವಣಿಗಳು ಮುಖ್ಯವಾಗಿ ನಿರಖು ಠೇವಣಿ ಬ್ಯಾಂಕಿನ ವ್ಯವಹಾರಕ್ಕೆ ಅಲ್ಪಾವಧಿಯಲ್ಲಿ ಲಭ್ಯವಿರುತ್ತದೆ. ಅಧ್ಯಯನಕ್ಕೆ ಆಯ್ಕೆಮಾಡಿರುವ ಬೆಳ್ತಂಗಡಿ ತಾಲೂಕಿನ ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ಠೇವಣಿ ವ್ಯವಹಾರದ ವಿವರ ಕೋಷ್ಟಕ 4.5ರಲ್ಲಿ ಗಮನಿಸಬಹುದು.

ಕೋಷ್ಟಕ 4.5: ಮಾದರಿ ಪ್ರಾಥಮಿಕ ಸಹಕಾರಿ ಸಂಘಗಳ ಠೇವಣಿ ಸಂಗ್ರಹಣೆ (2005–06)

(ರೂ. ಲಕ್ಷಗಳಲ್ಲಿ)

ಪ್ರಾಥಮಿಕ ಸಹಕಾರಿ ಬ್ಯಾಂಕುಗಳು	ಉಳಿತಾಯ ಠೇವಣಿ	ನಿರಖು ಠೇವಣಿ	ಮಾಸಿಕ ಠೇವಣಿ	ಒಟ್ಟು ಠೇವಣಿಗಳು
ಉಜಿರೆ	32.09	49.33	0.2	168.85
ಮುಂಡಾಜೆ	208.10	240.14	---	535.80
ಧರ್ಮಸ್ಥಳ	140.95	210.18	---	526.88
ಬಾರ್ಯ	224.99	211,41	----	462.64
ಬೆಳ್ತಂಗಡಿ	----	134.09	160.86	381.13
ಪೆರಾಡಿ	92.44	141.12	---	243.15
ಕೊಯ್ಯೂರು	27.79	12.41	0.21	46.12
ಹತ್ಯಡ್ಕ	58.76	98.04	----	178.38
ಗುರುವಾಯನಕೆರೆ	56.29	141.93	---	250.62
ಮಚ್ಚಿನ	27.03	16.86	---	172.78
ನಾರವಿ	51.66	49.74	---	174.89
ತಣ್ಣೀರುಪಂತ	561.45	42.99	---	617.40
ನಿಡ್ಲೆ	268.52	16.05	-----	284.75
ವೇಣೂರು	150.01	126.53	--	360.07

ಮೇಲಿನ ಕೋಷ್ಟಕದಲ್ಲಿ ಪ್ರಾಥಮಿಕ ಸಹಕಾರಿ ಬ್ಯಾಂಕುಗಳು ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಠೇವಣಿಗಳನ್ನು ಸಂಗ್ರಹಿಸುತ್ತವೆ ಎಂಬುದನ್ನು ಗುರುತಿಸಬಹುದು. ಆದರೆ ಠೇವಣಿಗಳ ಪ್ರಮಾಣ ಮತ್ತು ಆಕೃತಿ ಬ್ಯಾಂಕಿನಿಂದ ಬ್ಯಾಂಕಿಗೆ ವ್ಯತ್ಯಾಸವಿರುವುದನ್ನು ಗಮನಿಸಬಹುದು. ಕೆಲವು ಬ್ಯಾಂಕುಗಳಲ್ಲಿ ನಿರಖು ಠೇವಣಿಗಳ ಪಾಲು ಹೆಚ್ಚಾಗಿದ್ದರೆ, ಇನ್ನು ಕೆಲವು ಬ್ಯಾಂಕುಗಳಲ್ಲಿ ಉಳಿತಾಯ ಠೇವಣಿಗಳ ಪಾಲು ಹೆಚ್ಚಾಗಿದೆ. ಆದರೆ, ಗ್ರಾಮೀಣ ಪ್ರದೇಶದ ಪ್ರಾಥಮಿಕ ಸಹಕಾರಿ ಸಂಘಗಳು ತಮ್ಮ ಹಣಕಾಸು ವ್ಯವಹಾರಕ್ಕೆ ಬೇಕಾಗುವಷ್ಟು ಠೇವಣಿಗಳನ್ನು

ಸಂಗ್ರಹಿಸುವುದು ಮೆಚ್ಚಬೇಕಾದ ವಿಚಾರ. ಈ ಬ್ಯಾಂಕುಗಳ ವಾರ್ಷಿಕ ವರದಿಯನ್ನು ಗಮನಿಸಿದಾಗ, ಮಾಸಿಕ ಠೇವಣಿ, ಸಂಚಯ ಖಾತೆ ಠೇವಣಿ ಹಾಗೂ ಪಿಗ್ಮಿ ಠೇವಣಿ ಖಾತೆಗಳಲ್ಲಿ ವ್ಯವಹಾರ ನಡೆಸದೆ ಹಾಗೆಯೇ ಹಲವಾರು ವರ್ಷಗಳಿಂದ ಮುಂದುವರೆಯುತ್ತಾ ಬಂದಿರುವ ಹಲವು ಖಾತೆಗಳು ಇವೆ ಎಂದು ತಿಳಿದುಬರುತ್ತದೆ. ಆದರೆ, ಸೂಕ್ತ ಮಾಹಿತಿಯ ಕೊರೆಯಿರುವುದರಿಂದ ಈ ಅಂಶವನ್ನು ಕೂಲಂಕಷವಾಗಿ ವಿಶ್ಲೇಷಿಸಲು ಪ್ರಯತ್ನಿಸಿಲ್ಲ. ಆದರೆ, ಈ ರೀತಿಯ, ಸಮಯಕ್ಕೆ ಸರಿಯಾಗಿ ವಿಲೇವಾರಿ ಮಾಡದೆ ಇರುವ ಖಾತೆಗಳು ಕಾರ್ಯನಿರ್ವಹಣೆಯ ನ್ಯೂನತೆಯನ್ನು ಸೂಚಿಸುತ್ತದೆ.

ಸಾಲಗಳು ಮತ್ತು ಮುಂಗಡಗಳು

ಸದಸ್ಯರಿಗೆ ಅಗತ್ಯಕ್ಕನುಗುಣವಾಗಿ ಮುಂಗಡ ಸಾಲಗಳನ್ನು ಒದಗಿಸುವುದೇ ಪ್ರಾಥಮಿಕ ಸಹಕಾರಿ ಬ್ಯಾಂಕಿನ ಮುಖ್ಯ ಉದ್ದೇಶ. ರೈತ ಜನರಿಗೆ ಕೃಷಿ ಅಭಿವೃದ್ಧಿಯ ಕಾರ್ಯಚಟುವಟಿಕೆಯನ್ನು ಕೈಗೊಳ್ಳಲು ಹಣಕಾಸನ್ನು ಒದಗಿಸುವುದು, ಈ ಬ್ಯಾಂಕುಗಳ ಆದ್ಯ ಕರ್ತ್ಯವ್ಯ. ಸಹಕಾರಿ ಬ್ಯಾಂಕುಗಳ ನಿಯಮದಂತೆ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ, ಸಾಲಗಳು, ಪಂಪ್‌ಸೆಟ್ ಸಾಲಗಳು, ಉತ್ಪತ್ತಿ ಈಡಿನ ಸಾಲಗಳು, ಚಿನ್ನಾಭರಣ ಸಾಲಗಳು.. . . . . ಹೀಗೆ, ಅನೇಕ ರೀತಿಗಳಲ್ಲಿ ಸದಸ್ಯರುಗಳಿಗೆ ಈ ಬ್ಯಾಂಕುಗಳು ಅಧ್ಯಯನಕ್ಕೆ ಆಯ್ಕೆಮಾಡಿರುವ ಬೆಳ್ತಂಗಡಿ ತಾಲೂಕಿನ ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳು ಸದಸ್ಯರಿಗೆ ನೀಡಿರುವ ಸಾಲಗಳ ವಿವರ ಕೋಷ್ಟಕ 4.6ರಲ್ಲಿ ಕೊಡಲಾಗಿದೆ.

ಕೋಷ್ಟಕ 4.6: ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಮುಂಗಡ ಪಾವತಿ (2005–06)

(ರೂ. ಲಕ್ಷಗಳಲ್ಲಿ)

ಪ್ರಾಥಮಿಕ ಸಹಕಾರಿ ಬ್ಯಾಂಕುಗಳು	ಕೃಷಿ	ಚಿನ್ನಾಭರಣಗಳು	ಸ್ವಸಹಾಯ ಗುಂಪು	ಇತರ	ಒಟ್ಟು
ಉಜಿರೆ	110.64	45.29	2.48	204.30	411.35
ಮುಂಡಾಜೆ	350.07	83.21	65.72	178.44	677.45
ಧರ್ಮಸ್ಥಳ	168.22	35.63	43.04	264.38	511.27
ಬಾರ್ಯ	268.38	12.13	7.59	143.11	431.21
ಬೆಳ್ತಂಗಡಿ	39.02	94.34	--	197.31	339.22
ಪೆರಾಡಿ	263.36	19.24	25.88	31.85	340.33
ಕೊಯ್ಯೂರು	245.81	8.73	22.25	31.42	305.12
ಹತ್ಯಡ್ಕ	334.68	----	----	4.68	339.36
ಗುರುವಾಯನ ಕೆರೆ	67.61	33.92	6.25	204.77	278.63
ಮಚ್ಚಿನ	33.07	6.62	---	32.62	72.31
ನಾರವಿ	103.92	33.76	20.06	46.03	189.42
ತಣ್ಣೀರುಪಂತ	170.13	6.90	16.29	139.73	333.06
ನಿಡ್ಲೆ	143.12	0.22	9.27	48.64	210.35
ವೇಣೂರು	119.66	61.06	5.13	74.23	260.68

ಈ ಬ್ಯಾಂಕುಗಳ ಉದ್ದೇಶದಂತೆ ಪ್ರಾಥಮಿಕ ಸಹಕಾರಿ ಬ್ಯಾಂಕುಗಳು ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಿಗೆ ಹೆಚ್ಚು ಸಾಲವನ್ನು ಕೊಟ್ಟಿರುತ್ತವೆ. ಇತ್ತೀಚಿಗಿನ ವರ್ಷಗಳಲ್ಲಿ ಸ್ವಸಹಾಯ ಗುಂಪುಗಳಿಗೆ ಸಾಲವನ್ನು ನೀಡಿ ಗ್ರಾಮೀಣ ಜನರು ಆರ್ಥಿಕವಾಗಿ ತಮ್ಮನ್ನು ತಾವು ತೊಡಗಿಸುಕೊಳ್ಳುವಂತೆ, ಪ್ರೋತ್ಸಾಹಿಸುವುದು ಅತ್ಯಂತ ಸ್ವಾಗತಾರ್ಹ ಚಟುವಟಿಕೆಯಾಗಿದೆ.

2005–06ರ ಸಾಲಿನಲ್ಲಿ ಈ ಬ್ಯಾಂಕುಗಳ ಸದಸ್ಯರ ಹೊರಬಾಕಿ ಸಾಲದ ವಿವರ ಕೋಷ್ಟಕ 4.7(ಎ)ಯಲ್ಲಿ ಗಮನಿಸಬಹುದು.

ಕೋಷ್ಟಕ : 4.7(ಎ) : ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸದಸ್ಯರ ಹೊರ ಬಾಕಿ ಇರುವ ಸಾಲಗಳು (2005 – 06)

(ರೂ. ಲಕ್ಷಗಳಲ್ಲಿ)

ಸಂಘಗಳು	ಮಧ್ಯಮಾವಧಿ ಸಾಲ	ದೀರ್ಘಾವಧಿ ಸಾಲ	ಬೆಳೆ ಸಾಲ	ಒಟ್ಟು
ಉಜಿರೆ	1.43	–	6.4	317.4
ಮುಂಡಾಜೆ	5.9	64.78	60.92	677.45
ಧರ್ಮಸ್ಥಳ	19.87	58.75	1.06	511.27
ಬಾರ್ಯ	25.88	81.93	1.36	431.21
ಬೆಳ್ತಂಗಡಿ	5.33	–	15.95	339.22
ಪೆರಾಡಿ	85.61	19.08	1.22	340.33
ಕೊಯ್ಯೂರು	0.27	–	0.34	305.12
ಹತ್ಯಡ್ಕ	29.46	45.96	–	339.36
ವೇಣೂರು	25.64	20.24	8.50	260.68

ಸದಸ್ಯರಿಗೆ ಅಗತ್ಯಕ್ಕನುಗುಣವಾಗಿ ಸಾಲವನ್ನು ವಿತರಿಸುವುದು ಬಹಳ ಕಷ್ಟವಲ್ಲದಿದ್ದರೂ, ಕೃಷಿ ಸಾಲವನ್ನು ವಸೂಲಿಮಾಡುವುದು ಬಹಳ ಕಷ್ಟಕರವಾದ ಸಂಗತಿ. ಇದಕ್ಕೆ ನಾನಾಕಾರಣಗಳಿವೆ. ಕೃಷಿ ನೈಸರ್ಗಿಕ ಗುಣಲಕ್ಷಣಗಳನ್ನು ಅವಲಂಬಿಸಿಕೊಂಡಿರುವುದರಿಂದ ಬಹಳ ಅನಿಶ್ಚಿತತೆಯಲ್ಲಿರುತ್ತದೆ. ಇದರಿಂದಾಗಿ ಬೆಳೆ ವಿಫಲವಾದಾಗ ಕೃಷಿಕರು ಸಾಲಮರುಪಾವತಿ ಮಾಡಲು ಅಶಕ್ತರಾಗುತ್ತಾರೆ. ಆದರೆ, ಸಹಕಾರಿ ಬ್ಯಾಂಕುಗಳು ಮುತುವರ್ಜಿಯಿಂದ ಸಾಲವಸೂಲಿ ಕ್ರಮಗಳನ್ನು ಕೈಗೊಂಡರೆ ಸಾಲವಸೂಲಿಯಲ್ಲಿ ಯಶಸ್ಸು ಸಾಧಿಸಬಹುದು.

ಬೆಳ್ತಂಗಡಿ ತಾಲೂಕಿನ ಅಧ್ಯಯನಕ್ಕೆ ಆಯ್ಕೆಮಾಡಿರುವ ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ವಾಯಿದೆದಾಟಿದ ಸಾಲಗಳ ವಿವರ ಕೋಷ್ಟಕ 4.7 (ಬಿ)ಯಲ್ಲಿ ಗಮನಿಸಬಹುದು.

ಕೋಷ್ಟಕ 4.7 (ಬಿ): ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ವಾಯಿದೆ ದಾಟಿದ ಸಾಲಗಳ ವಿವರ (2005–06)

ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು	ವಾಯಿದೆ ದಾಟಿದ ಸಾಲಗಳಲ್ಲಿ ಹೊರಬಾಕಿ ಇರುವ ಸಾಲಗಳು (ಶೇಕಡಾದಲ್ಲಿ)	
	ಸಾಲಗಳು	ಒಟ್ಟು
ಉಜಿರೆ	–	04.0
ಮುಂಡಾಜೆ	8.28	1.81
ಧರ್ಮಸ್ಥಳ	–	3.54
ಬಾರ್ಯ	11.68	7.09
ಬೆಳ್ತಂಗಡಿ	21.17	4.18
ಪೆರಾಡಿ	19.66	2.21
ಕೊಯ್ಯೂರು	18.50	9.26
ಹತ್ಯಡ್ಕ	16.80	4.70
ವೇಣೂರು	19.32	4.86

ಹೊರಬಾಕಿಉಳಿದಿರುವ ಸಾಲಗಳಲ್ಲಿ ವಾಯಿದೆದಾಟಿದ ಸಾಲಗಳ ಪ್ರಮಾಣವನ್ನು ಗಮನಿಸಿದಾಗ 2004-05ರ ಸಾಲಿಗಿಂತ 2005-06ರ ಸಾಲಿನಲ್ಲಿ ಕಡಿಮೆ ಆಗಿರುವುದನ್ನು ಗಮನಿಸಬಹುದು. ಇದು ಪ್ರಾಥಮಿಕ ಸಹಕಾರಿ ಸಂಘಗಳ ಸಾಲ ವಸೂಲಿ ಸಾಮರ್ಥ್ಯವನ್ನು ಸೂಚಿಸುತ್ತದೆ.

ಈ ಬ್ಯಾಂಕುಗಳ ಸಾಲವಸೂಲಾತಿ ಪ್ರಗತಿಯನ್ನು ಕೋಷ್ಟಕ 4.7 (ಸಿ) ಯಲ್ಲಿ ಗಮನಿಸಬಹುದು.


ಕೋಷ್ಟಕ 4.7 (ಸಿ) ಮಾದರಿ ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ಸಾಲ ವಸೂಲಾತಿ (2005-06)

(ಶೇಕಡಾದಲ್ಲಿ)

ಪ್ರಾಥಮಿಕ ಸಹಕಾರಿ ಬ್ಯಾಂಕುಗಳು	2004-05	2005-06
ಉಜಿರೆ	---	---
ಮುಂಡಾಜೆ	95.30	91.72
ಧರ್ಮಸ್ಥಳ	----	---
ಬಾರ್ಯ	88.32	92.91
ಬೆಳ್ತಂಗಡಿ	---	---
ಪೆರಾಡಿ	75.64	97.32
ಕೊಯ್ಯೂರು	79.38	---
ಹತ್ಯಡ್ಕ	83.2	97.30
ಗುರುವಾಯನಕೆರೆ	----	---
ಮಚ್ಚಿನ	----	---
ನಾರವಿ	---	---
ತಣ್ಣೀರುಪಂತ	----	----
ನಿಡ್ಲೆ	-----	----
ವೇಣೂರು	80.68	95.14

2005–2006ರ ಸಾಲಿನ ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸಾಲ ವಸೂಲಾತಿ ದರವನ್ನು ಈ ಕೆಳಗಿನ ರೇಖಾಚಿತ್ರ 4.7 (ಡಿ) ಯ ಮೂಲಕ ತೋರಿಸಬಹುದು.

ಕೋಷ್ಟಕ 4.7 (ಡಿ) ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸಾಲ ವಸೂಲಾತಿ ದರ (2005–2006)



ವೆಚ್ಚಗಳು

ಸಹಕಾರಿ ಸಂಘಗಳ ಕಾರ್ಯ ನಿರ್ವಹಣೆಯ ಸಾಮರ್ಥ್ಯದಲ್ಲಿ ವೆಚ್ಚ ನಿರ್ವಹಣೆಯು ಪ್ರಮುಖವಾದ ಅಂಶ. ಎಲ್ಲಾ ಸಂಘಸಂಸ್ಥೆಗಳು ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಫಲಿತಾಂಶವನ್ನು ಕಂಡುಕೊಂಡಲ್ಲಿ, ಆರ್ಥಿಕವಾಗಿ ಅದು ಸಮರ್ಥ ಎಂದು ಹೇಳಬಹುದು. ಬ್ಯಾಂಕುಗಳ ನಿರ್ವಹಣೆಯಲ್ಲಿ ಮುಖ್ಯವಾಗಿ ಕಂಡುಬರುವ ವೆಚ್ಚಗಳೆಂದರೆ ಸಿಬ್ಬಂದಿ ವೇತನ, ದೂರವಾಣಿ ವೆಚ್ಚ, ಅಂಚೆ ವೆಚ್ಚ ಮತ್ತು ವಿದ್ಯುತ್ ಬಳಕೆ ಇವುಗಳನ್ನು ಆಡಳಿತಾತ್ಮಕ ವೆಚ್ಚ ಎಂದು ಗುರುತಿಸಬಹುದು. ಠೇವಣಿಗಳಿಗೆ ಬಡ್ಡಿ ಕೊಡುವುದು, ಇನ್ನೊಂದು ವೆಚ್ಚದ ಪ್ರಮುಖವಾದ ಅಂಗ. ಅಧ್ಯಯನದ ಮಾದರಿ ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ಈ ವೆಚ್ಚಗಳ ವಿವರವನ್ನು ಕೋಷ್ಟಕ 4.8(ಎ) ಯಲ್ಲಿ ಗಮನಿಸಬಹುದು.



ಕೋಷ್ಟಕ 4.8 (ಎ): ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ವೆಚ್ಚಗಳು(2005–06)

(ರೂ. ಲಕ್ಷಗಳಲ್ಲಿ)

ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು	ಉದ್ಯೋಗಿಗಳ ಸಂಬಳ	ಬಡ್ಡಿ ಪಾವತಿ	ದೂರವಾಣಿ ವೆಚ್ಚ	ವಿದ್ಯುತ್ತೀಕರಣದ ವೆಚ್ಚ	ಅಂಚೆ ವೆಚ್ಚ
ಉಜಿರೆ	6.89	24.60	5.36	14.31	–
ಮುಂಡಾಜೆ	17.81	37.54	–	–	–
ಧರ್ಮಸ್ಥಳ	11.97	34.07	3.31	69.29	6.00
ಬಾರ್ಯ	3.84	37.58	12.80	–	11.02
ಬೆಳ್ತಂಗಡಿ	8.23	69.73	–	–	–
ಪೆರಾಡಿ	5.36	16.35	18.31	6.75	9.82
ಕೊಯ್ಯೂರು	3.29	29.72	4.26	4.45	9.0
ಹತ್ಯಡ್ಕ	6.49	36.93	3.43	21.86	4.4
ಗುರುವಾಯನಕೆರೆ	4.59	–	2.09	16.68	–
ಮಚ್ಚಿನ	1.17	53.75	3.01	5.53	4.47
ನಾರಾವಿ	4.16	11.35	3.45	14.42	3.45
ತಣ್ಣೀರು ಪಂತ	4.62	–	6.46	–	6.46
ನಿಡ್ಲೆ	6.23	16.88	6.21	9.92	–
ವೇಣೂರು	9.17	27.28	3.43	11.32	4.00

ಕೋಷ್ಟಕ 4.8 (ಬಿ): ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸಿಬ್ಬಂದಿ ವೆಚ್ಚಗಳು(2005-06)

ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು	ಸಿಬ್ಬಂದಿ ವೆಚ್ಚ (ಲಕ್ಷ ರೂಗಳಲ್ಲಿ)	ದುಡಿಯುವ ಬಂಡವಾಳದ ಶೇಕಡಾ	
		2004-05	2005-06
ಉಜಿರೆ	6.89	1.99	1.90
ಮುಂಡಾಜೆ	17.81	1.55	1.96
ಧರ್ಮಸ್ಥಳ	17.97	1.99	1.55
ಬಾರ್ಯ	3.85	1.08	0.80
ಬೆಳ್ತಂಗಡಿ	8.23	1.69	1.73
ಪೆರಾಡಿ	5.36	1.44	1.25
ಕೊಯ್ಯೂರು	3.35	0.91	0.93
ಹತ್ಯಡ್ಕ	6.49	1.75	1.75
ವೇಣೂರು	9.17	1.90	1.95

ಬ್ಯಾಂಕುಗಳ ಆಡಳಿತ ವೆಚ್ಚದಲ್ಲಿ ಸಿಬ್ಬಂದಿ ವೇತನ ಹಾಗೂ ಇತರ ಭತ್ಯೆಗಳು ಪ್ರಮುಖ ಅಂಗ. ಅಧ್ಯಯನದ ಮಾದರಿ ಬ್ಯಾಂಕುಗಳ ಸಿಬ್ಬಂದಿ ವೇತನ ಹಾಗೂ ಇತರ ಭತ್ಯೆಗಳ ವೆಚ್ಚ ಮತ್ತು ದುಡಿಯುವ ಬಂಡವಾಳದ ಶೇಕಡಾವಾರನ್ನು ಕೋಷ್ಟಕ 4.8 (ಬಿ) ಯಲ್ಲಿ ಗಮನಿಸಬಹುದು. ಸಿಬ್ಬಂದಿ ವೇತನ ವೆಚ್ಚವು ದುಡಿಯುವ ಬಂಡವಾಳದ ಶೇಕಡಾ ಪ್ರಮಾಣವನ್ನು ಗಮನಿಸಿದಾಗ ಪೆರಾಡಿ, ಉಜಿರೆ, ಧರ್ಮಸ್ಥಳ, ಪ್ರಾಥಮಿಕ ಸಹಕಾರಿ ಬ್ಯಾಂಕುಗಳಲ್ಲಿ 2004-2005ಕ್ಕಿಂತ 2005-06ರಲ್ಲಿ ಕಡಿಮೆಯಾಗಿದೆ. ಈ ಬ್ಯಾಂಕುಗಳಲ್ಲಿ ಉದ್ಯೋಗಿಗಳ ಉತ್ಪಾದಕತೆಯು ಹೆಚ್ಚಿದೆ ಎಂಬುದನ್ನು ಇದು ಸೂಚಿಸುತ್ತದೆ. ಇನ್ನುಳಿದ ಸಹಕಾರಿ ಸಂಘಗಳಲ್ಲಿ ದುಡಿಯುವ ಬಂಡವಾಳದಲ್ಲಿ ಸಿಬ್ಬಂದಿ ವೇತನದ ಪಾಲು ಸ್ವಲ್ಪ ಪ್ರಮಾಣದ ಹೆಚ್ಚಳ ಕಂಡುಬರುತ್ತದೆ.

ಲಾಭಗಳಿಕೆ

ಬೆಳ್ತಂಗಡಿ ತಾಲೂಕಿನ ಅಧ್ಯಯನಕ್ಕೆ ಆಯ್ಕೆಮಾಡಿರುವ ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ವಾರ್ಷಿಕ ಲಾಭಾಂಶದ ವಿವರ ಕೋಷ್ಟಕ 4.9 ರಿಂದ ತಿಳಿಯಬಹುದು.

ಕೋಷ್ಟಕ 4.9: ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಲಾಭಾಂಶದ ವಿವರ (2005–06)

(ರೂ. ಲಕ್ಷಗಳಲ್ಲಿ)

ಪ್ರಾಥಮಿಕ ಸಹಕಾರಿ ಬ್ಯಾಂಕುಗಳು	ಬಡ್ಡಿಗಳಿಕೆ	ಒಟ್ಟು ಮೊತ್ತ	ಒಟ್ಟು ಆದಾಯಕ್ಕೆ ಬಡ್ಡಿ ಗಳಿಕೆಯ ಅನುಪಾತ
ಉಜಿರೆ	48.84	52.11	0.94
ಮುಂಡಾಜೆ	99.97	10.24	9.76
ಧರ್ಮಸ್ಥಳ	66.30	10.10	6.56
ಬಾರ್ಯ	52.15	57.52	0.90
ಬೆಳ್ತಂಗಡಿ	64.87	6.08	10.67
ಪೆರಾಡಿ	52.08	77.48	0.67
ಕೊಯ್ಯೂರು	55.17	49.70	1.11
ಹತ್ಯಡ್ಕ	56.33	5.57	5.74
ಗುರುವಾಯನಕೆರೆ	44.75	47.14	0.95
ಮಚ್ಚಿನ	12.35	13.95	0.88
ನಾರವಿ	21.57	24.56	0.88
ತಣ್ಣೀರುಪಂತ	49.75	54.78	0.90
ನಿಡ್ಲೆ	23.65	25.14	0.94
ವೇಣೂರು	53.90	13.44	4.01

ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ಆಂತರಿಕ, ಸಾಂಸ್ಥಿಕ ಅಂಶಗಳನ್ನು ವಿಶ್ಲೇಷಿಸಿದಾಗ, ಸದಸ್ಯರ ಸಂಖ್ಯೆ ಮತ್ತು ಪಾಲು ಬಂಡವಾಳದ ದೃಷ್ಟಿಯಿಂದ ಈ ಬ್ಯಾಂಕುಗಳು ಬಲಿಷ್ಟವೆಂದು ಕಂಡುಬರುತ್ತವೆ. ಸಾಲ ಮರುಪಾವತಿಯಲ್ಲಿ ಠೇವಣಿ ಸಂಗ್ರಹಣೆಯಲ್ಲಿ ಪ್ರಗತಿಯನ್ನು

ಸೂಚಿಸುವುದರಿಂದ ಈ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಎಂದು ಹೇಳಬಹುದು.

ಸದಸ್ಯ ಕೃಷಿಕರ ಸಮೀಕ್ಷೆ

ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ವಿಶ್ಲೇಷಣೆ ಕೇವಲ ಸಾಂಸ್ಥಿಕ ಅಂಶಗಳನ್ನು ಗಮನಿಸಿದರೆ ಅದು ಅಪೂರ್ಣ ಆಗುತ್ತದೆ. ಇದು ಅದರ ಆಂತರಿಕ ಅಂಶಗಳ ನೋಟವನ್ನು ಮಾತ್ರ ಚಿತ್ರಿಸಿದಂತಾಗುತ್ತದೆ. ಆದರೆ ಅದರ ಯಶಸ್ಸು ಕೃಷಿಕರ ದೃಷ್ಟಿಯಿಂದಲೂ ಗಮನಿಸಬೇಕು. ಈ ನೆಲೆಯಲ್ಲಿ ಸಂಘದ ಸದಸ್ಯರ ರೈತರನ್ನು ಸಮೀಕ್ಷೆ ನಡೆಸಲಾಯಿತು. ಇದಕ್ಕಾಗಿ ಅಧ್ಯಯನದ ಪ್ರದೇಶ, ಅಂದರೆ ಬೆಳ್ತಂಗಡಿ ತಾಲೂಕಿನ 50 ಮಾದರಿ ಕೃಷಿಕ ಸದಸ್ಯರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಯಿತು. ಪ್ರಾಥಮಿಕ ಸಹಕಾರಿ ಬ್ಯಾಂಕಿನ 50 ಚಟುವಟಿಕೆಯುತ ಸದಸ್ಯರನ್ನು ಮಾದರಿಯಾಗಿ ಆಯ್ಕೆಮಾಡಿ, ಸಹಕಾರಿ ಬ್ಯಾಂಕಿನ ಚಟುವಟಿಕೆಯ ಕುರಿತು ಮಾಹಿತಿ ಸಂಗ್ರಹಿಸಲಾಯಿತು.

ಸಂದರ್ಶಿಸಿದ 50 ಕೃಷಿಕರನ್ನು ದೊಡ್ಡ ರೈತರು, (5 ಎಕ್ರೆಗಿಂತ ಹೆಚ್ಚು ಜಮೀನು ಇರುವವರು) ಮಧ್ಯಮ ರೈತರು (2.5–5 ಎಕ್ರೆ ಜಮೀನು ಇರುವವರು), ಸಣ್ಣ ರೈತರು (2.5 ಎಕ್ರೆಗಿಂತ ಕಡಿಮೆ ಜಮೀನು ಇರುವವರು), ಎಂದು ವರ್ಗೀಕರಿಸಲಾಯಿತು. ಇದರಂತೆ, ಅಧ್ಯಯನಕ್ಕಾಗಿ ಆಯ್ಕೆ ಮಾಡಿದ ಕೃಷಿಕರಲ್ಲಿ ದೊಡ್ಡ ರೈತರು 15, ಮಧ್ಯಮ ರೈತರು 15, ಹಾಗೂ ಸಣ್ಣ ರೈತರ ಸಂಖ್ಯೆ 20.

ಮಾದರಿ ರೈತರಲ್ಲಿ ಶೇಕಡಾ 13.33ರಷ್ಟು ರೈತರು ಪದವೀಧರರಾಗಿದ್ದಾರೆ. ಶೇಕಡಾ 53.33 ಪ್ರೌಢ ಶಿಕ್ಷಣ ಹಾಗೂ ಶೇಕಡಾ 33.33 ಪ್ರಾಥಮಿಕ ಶಿಕ್ಷಣವನ್ನು ಹೊಂದಿದವರಾಗಿರುತ್ತಾರೆ. ದೊಡ್ಡ ರೈತರ ಸರಾಸರಿ ಕುಟುಂಬದ ಗಾತ್ರ 7.15, ಮಧ್ಯಮ ರೈತರ ಕುಟುಂಬದ ಗಾತ್ರ 6.10 ಹಾಗೂ ಸಣ್ಣ ರೈತರ ಕುಟುಂಬದ ಗಾತ್ರ 8.00 ಎಂಬುದನ್ನು ಗಮನಿಸಬಹುದು.

ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕಿನ ಸದಸ್ಯ ಕೃಷಿಕರ ಸಾಮಾನ್ಯ ಮಾಹಿತಿಯನ್ನು ಕೋಷ್ಟಕ:4.10ರಲ್ಲಿ ನೀಡಲಾಗಿದೆ.

ಕೋಷ್ಟಕ 4.10 – ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸದಸ್ಯ ರೈತರ ಸಾಮಾನ್ಯ ಮಾಹಿತಿಗಳು (2005–06)

ವರ್ಗ	ಮಾದರಿ ರೈತರ ಸಂಖ್ಯೆ	ಸರಾಸರಿ ವಯಸ್ಸು (ವರ್ಷ)	ವಿದ್ಯಾಭ್ಯಾಸ			ಕುಟುಂಬದ ಗಾತ್ರ
			ಪದವೀಧರರು	ಪ್ರೌಢ ಶಿಕ್ಷಣ	ಪ್ರಾಥಮಿಕ ಶಿಕ್ಷಣ	
ದೊಡ್ಡ ರೈತರು	15	54.22	2 (13.33)	8 (53.33)	5 (33.33)	7.15
ಮಧ್ಯಮ ರೈತರು	15	58.4	–	8 (53.33)	7 (46.67)	6.10
ಸಣ್ಣ ರೈತರು	20	49.56	–	5 (25.0)	15 (35.0)	8.00
ಒಟ್ಟು	50	53.61	2 (4.0)	21 (42.0)	27 (54.0)	21.25 (42.5)

ಕೋಷ್ಟಕ 4.11: – ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸದಸ್ಯ ರೈತರ ಜಮೀನಿನ ವಿವರ (2005–06)

ವರ್ಗ	ಮಾದರಿ ರೈತರ ಸಂಖ್ಯೆ	ಸರಾಸರಿ ಜಮೀನಿನ ಗಾತ್ರ	ವ್ಯವಸಾಯ ಮಾಡುವ ಜಮೀನಿನ ವಿಸ್ತೀರ್ಣ ಸರಾಸರಿ
ದೊಡ್ಡ ರೈತರು	15	8.04	6.05
ಮಧ್ಯಮ ರೈತರು	15	7.06	5.04
ಸಣ್ಣ ರೈತರು	20	4.04	1.03
ಒಟ್ಟು	50	29.14	12.12

ಮಾದರಿ ಕೃಷಿ ಸದಸ್ಯರ ಸರಾಸರಿ ಜಮೀನಿನ ವಿವರ ಹಾಗೂ ಕೃಷಿ ಭೂಮಿಯ ವಿವರ ಕೋಷ್ಟಕ 4.11ರಲ್ಲಿ ಕೊಡಲಾಗಿದೆ. ದೊಡ್ಡ ರೈತರ ಭೂ ಹಿಡುವಳಿ 8.04 ಎಕ್ರೆ, ಮಧ್ಯಮ ರೈತರ ಭೂಹಿಡುವಳಿ ಗಾತ್ರ 7.06 ಎಕ್ರೆ ಹಾಗೂ ಸಣ್ಣ ರೈತರ ಭೂ ಹಿಡುವಳಿ ಗಾತ್ರ 4.04 ಎಕ್ರೆ ಆಗಿರುತ್ತದೆ. ದೊಡ್ಡ ರೈತರ ಒಟ್ಟು ಭೂ ಹಿಡುವಳಿಯಲ್ಲಿ ಸರಾಸರಿ 6.05 ಎಕ್ರೆಯಲ್ಲಿ ಕೃಷಿ ಮಾಡುತ್ತಾರೆ. ಅದರಂತೆ, ಮಧ್ಯಮ ರೈತರ ಸರಾಸರಿ ಬೇಸಾಯದ ಭೂಮಿ 5.04 ಎಕ್ರೆ, ಹಾಗೂ ಸಣ್ಣ ರೈತರ ಸರಾಸರಿ ಕೃಷಿ ಭೂಮಿಯು 1.03 ಎಕ್ರೆ ಆಗಿರುತ್ತದೆ.

ಮಾದರೀ ಕೃಷಿ ಸದಸ್ಯರ ಸರಾಸರಿ ಜಮೀನಿನ ವಿವರ ಹಾಗೂ ಕೃಷಿ ಭೂಮಿಯ ವಿವರ ಕೋಷ್ಟಕ 4.12ರಲ್ಲಿ ಕೊಡಲಾಗಿದೆ. ದೊಡ್ಡ ರೈತರ ಭೂ ಹಿಡುವಳಿ 8.04 ಎಕ್ರೆ, ಮಧ್ಯಮ ರೈತರ ಭೂಹಿಡುವಳಿ ಗಾತ್ರ 7.06 ಎಕ್ರೆ ಹಾಗೂ ಸಣ್ಣ ರೈತರ ಭೂಹಿಡುವಳಿ ಗಾತ್ರ 4.04 ಎಕ್ರೆ ಆಗಿರುತ್ತದೆ. ದೊಡ್ಡ ರೈತರ ಒಟ್ಟು ಭೂ ಹಿಡುವಳಿಯಲ್ಲಿ ಸರಾಸರಿ 6.05 ಎಕ್ರೆಯಲ್ಲಿ ಕೃಷಿ ಮಾಡುತ್ತಾರೆ. ಅದರಂತೆ, ಮಧ್ಯಮ ರೈತರ ಸರಾಸರಿ ಬೇಸಾಯದ ಭೂಮಿ 5.04 ಎಕ್ರೆ, ಹಾಗೂ ಸಣ್ಣ ರೈತರ ಸರಾಸರಿ ಕೃಷಿ ಭೂಮಿಯು 1.03 ಎಕ್ರೆ ಆಗಿರುತ್ತದೆ.

ಮಾದರಿ ಕೃಷಿಕ ಸದಸ್ಯರು ಬೆಳೆಯುವ ಪ್ರಮುಖ ಬೆಳೆಗಳ ವಿವರವನ್ನು ಕೋಷ್ಟಕ 4.12ರಲ್ಲಿ ಕೊಡಲಾಗಿದೆ.

ಕೋಷ್ಟಕ 4.12 – ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸದಸ್ಯರು ಬೆಳೆಯುವ ಪ್ರಮುಖ ಬೆಳೆಗಳು (2005–06)

ವರ್ಗ	ಪ್ರಮುಖ ಬೆಳೆಗಳು
ದೊಡ್ಡ ರೈತರು	ಅಡಿಕೆ, ತೆಂಗು, ಕೊಕ್ಕೋ, ವೆನಿಲ್ಲಾ, ರಬ್ಬರ್, ಗೇರು ಬೀಜ
ಮಧ್ಯಮ ರೈತರು	ತೆಂಗು, ಅಡಿಕೆ, ಭತ್ತ, ರಬ್ಬರ್
ಸಣ್ಣ ರೈತರು	ಭತ್ತ, ಅಡಿಕೆ, ತೆಂಗು

ಭೂ ಅಭಿವೃದ್ಧಿ ಹಾಗೂ ಕೃಷಿ ಅಭಿವೃದ್ಧಿ ಕಾರ್ಯಗಳನ್ನು ಸದಸ್ಯರು ಪಡೆದ ಸಾಲದ ವಿವರವನ್ನು ಕೋಷ್ಟಕ 4.13ರಲ್ಲಿ ಕೊಡಲಾಗಿದೆ.

ಕೋಷ್ಟಕ 4.13 : ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸದಸ್ಯರ ಸಾಲಗಳು

(2005–06)

ವರ್ಗ	ಮಾದರಿ ರೈತರ ಸಂಖ್ಯೆ	ಸಹಕಾರಿ ಸಂಘಗಳ		ಇತರ ಮೂಲಗಳಿಂದ ಸಾಲ (ರೂ.)		ಒಟ್ಟು ಸಾಲ (ರೂ.)
		ಒಟ್ಟುಸಾಲ	ಸರಾಸರಿ	ಒಟ್ಟು ಸಾಲ	ಸರಾಸರಿ	
ದೊಡ್ಡ ರೈತರು	15	65,340	22,450	–	–	65,340
ಮಧ್ಯಮ ರೈತರು	15	26,300	8,450	4,260	2,110	2,67,260
ಸಣ್ಣ ರೈತರು	20	8,900	1,690	6,740	1,800	15,640
ಒಟ್ಟು	50	1,00,540	33,590	11,000	3,910	3,48,240

ದೊಡ್ಡ ರೈತರು ಪಡೆದ ಸರಾಸರಿ ಸಾಲ 22,450 ಆಗಿದ್ದರೆ, ಈ ಪ್ರಮಾಣ ಮಧ್ಯಮ ರೈತರಲ್ಲಿ ಹಾಗೂ ಸಣ್ಣ ರೈತರಲ್ಲಿ ಕ್ರಮವಾಗಿ ರೂ. 8,450, ಮತ್ತು ರೂ. 2,690 ಆಗಿರುತ್ತದೆ. ಈ ಸಾಲವನ್ನು ದೊಡ್ಡ ರೈತರು ಪ್ರಾಥಮಿಕ ಕೃಷಿ ಸಾಲ ಸಹಕಾರಿ ಬ್ಯಾಂಕಿನಿಂದಲೇ ಪಡೆದಿರುತ್ತಾರೆ. ಮಧ್ಯಮ ರೈತರು ಸರಾಸರಿ 8,450 ಸಹಕಾರಿ ಬ್ಯಾಂಕಿನಿಂದಲೂ, ಸರಾಸರಿ 4,260 ಇತರ ಮೂಲಗಳಿಂದಲೂ ಪಡೆದಿರುತ್ತಾರೆ. ಸಣ್ಣ ರೈತರು ಸರಾಸರಿ ಸಾಲ, ರೂ. 8,900 ಸಹಕಾರಿ ಬ್ಯಾಂಕಿನಿಂದಲೂ ರೂ. 6,740ನ್ನು ಇತರ ಮೂಲಗಳಿಂದಲೂ ಪಡೆದಿರುತ್ತಾರೆ.

ಸಹಕಾರಿ ಸಂಘದ ಸಾಲವು ಶೇಕಡಾ 4ರಿಂದ 6ರರವರೆಗೆ ಬಡ್ಡಿದರ ಲಭ್ಯವಿರುವುದು ರೈತರ ಸಂತೋಷಕ್ಕೆ ಕಾರಣವಾಗಿದೆ.

ಸಹಕಾರಿ ಬ್ಯಾಂಕಿನ ಸಾಲ ವ್ಯವಸ್ಥೆಯ ಗುಣಮಟ್ಟವನ್ನು ವಿಶ್ಲೇಷಿಸಿದಾಗ ಈ ಕೆಳಗಿನ ಅಂಶಗಳು ಕಂಡಬರುತ್ತವೆ. ಮುಖ್ಯವಾಗಿ ರೈತರು ಸಹಕಾರಿ ಬ್ಯಾಂಕಿನ ಸಾಲ ನೀಡುವ ಕಾರ್ಯಕ್ರಮವನ್ನು ತೃಪ್ತಿದಾಯಕ ಎಂದು ನಿರೂಪಿಸಿರುವುದು ಕೋಷ್ಟಕ 4.14ರಲ್ಲಿ ಕಂಡುಬರುತ್ತದೆ.

ಕೋಷ್ಟಕ 4.14: ಮಾದರಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸಾಲ ನೀಡುವ ಕಾರ್ಯಕ್ರಮದ ಬಗ್ಗೆ ಕೃಷಿಕ ಸದಸ್ಯರ ಅಭಿಪ್ರಾಯ (2005-06)

ವರ್ಗ	ಸಂಖ್ಯೆ	ಅತ್ಯುತ್ತಮ	ಉತ್ತಮ	ಸಾಧಾರಣ	ಸಮರ್ಪಕವಾಗಿಲ್ಲ
ದೊಡ್ಡ ರೈತರು	15	11	4	–	–
ಮಧ್ಯಮ ರೈತರು	15	6	8	1	–
ಸಣ್ಣ ರೈತರು	20	6	10	4	–
ಒಟ್ಟು	50	23 (46.0)	22 (44.0)	5 (10.0)	–

ಮೇಲಿನ ಕೋಷ್ಟಕವನ್ನು ಗಮನಿಸಿದಾಗ 15 ಮಂದಿ ದೊಡ್ಡ ಪ್ರಮಾಣ ರೈತರಲ್ಲಿ 11 ಮಂದಿ ಸಹಕಾರಿ ಸಂಘವನ್ನು ಅತ್ಯುತ್ತಮವೆಂದೂ, ಮತ್ತು 4 ಮಂದಿ ಉತ್ತಮವೆಂದೂ ಅಭಿಪ್ರಾಯ ಪಟ್ಟಿದ್ದಾರೆ. 15 ಮಂದಿ ಮಧ್ಯಮ ವರ್ಗದ ರೈತರಲ್ಲಿ 6 ಮಂದಿ ಸಹಕಾರಿ ಸಂಘವನ್ನು ಅತ್ಯುತ್ತಮವೆಂದೂ, 8 ಮಂದಿ ಉತ್ತಮವೆಂಬ ಅಭಿಪ್ರಾಯಪಟ್ಟಿದ್ದಾರೆ ಮತ್ತು 20 ಮಂದಿ ಸಣ್ಣ ರೈತರಲ್ಲಿ 6 ಮಂದಿ ಸಹಕಾರಿ ಸಂಘವನ್ನು ಅತ್ಯುತ್ತಮವೆಂಬ ಅಭಿಪ್ರಾಯಪಟ್ಟರೆ 10 ಮಂದಿ ಉತ್ತಮವೆಂಬ ಅಭಿಪ್ರಾಯವನ್ನು ಹಾಗೂ 4 ಮಂದಿ ಸಾಧಾರಣವೆಂಬ ಅಭಿಪ್ರಾಯವನ್ನು ಪಟ್ಟಿದ್ದಾರೆ. ಹೀಗೆ ಒಟ್ಟು 50 ಮಂದಿ ರೈತರು ಶೇಕಡಾ 46ರಷ್ಟು ಮಂದಿ ಸಹಕಾರಿ ಸಂಘವನ್ನು ಅತ್ಯುತ್ತಮವೆಂಬ ಅಭಿಪ್ರಾಯಹೊಂದಿದವರಾಗಿದ್ದಾರೆ. ಶೇಕಡಾ 44ರಷ್ಟು ರೈತರು ಉತ್ತಮವೆಂಬ ಅಭಿಪ್ರಾಯವನ್ನು ಹೊಂದಿದವರಾದರೆ ಶೇಕಡಾ 10ರಷ್ಟು ಸಾಧಾರಣವೆಂಬ ಅಭಿಪ್ರಾಯವನ್ನು ಪಟ್ಟಿದ್ದಾರೆ.

ಅಧ್ಯಾಯ – 5

ಉಪಸಂಹಾರ ಮತ್ತು ಸಲಹೆಗಳು

ಅಧ್ಯಾಯ – 5

ಉಪಸಂಹಾರ ಮತ್ತು ಸಲಹೆಗಳು

ಕೃಷಿ ಅಭಿವೃದ್ಧಿಗೆ ಬಂಡವಾಳ ಹೂಡಿಕೆ ಅತ್ಯಗತ್ಯ. ಆದರೆ, ಕೃಷಿ ಆದಾಯ ಕಡಿಮೆ ಇರುವುದರಿಂದ ಬಂಡವಾಳ ಹೂಡಲು ಕೃಷಿಕರು ಉಳಿತಾಯವನ್ನು ಅವಲಂಬಿಸದೆ, ಇತರ ಮೂಲಗಳನ್ನು ಅವಲಂಬಿಸಬೇಕಾಗುತ್ತದೆ. ಆದರೆ, ಸ್ವಾತಂತ್ರ್ಯನಂತರದ ಪ್ರಯತ್ನದಲ್ಲಿ ಶೋಷಣೆಯೇ ಮೊದಲಾದ ದೋಷಪೂರಿತ ಸಾಂಸ್ಥಿಕವಲ್ಲದ ಕೃಷಿ ಸಾಲ ಮೂಲಗಳ ಪಾತ್ರ ಕಡಿಮೆಯಾಗಿ, ಸಾಂಸ್ಥಿಕ ಮೂಲಗಳ ಪಾತ್ರ ಗಮನಾರ್ಹವಾಗಿ ಹೆಚ್ಚಿದೆ. ಸಾಂಸ್ಥಿಕ ಕೃಷಿ ಸಾಲ ಮೂಲಗಳಲ್ಲಿ ವಾಣಿಜ್ಯ ಬ್ಯಾಂಕುಗಳು ಹಾಗೂ ಸಹಕಾರಿ ಬ್ಯಾಂಕುಗಳು ಪ್ರಮುಖ ಪಾತ್ರವಹಿಸುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ, ಸ್ಥಳೀಯವಾದ ಜನರು, ಸಮಾನ ಮನಸ್ಕರಾಗಿ, ಸ್ವಯಂ ಪ್ರೇರಣೆಯಿಂದ, ಒಂದೇ ಗುರಿಯನ್ನು ಒಟ್ಟಾಗಿ ಸಾಧಿಸಲು ಸಹಕಾರಿ ಸಂಘಗಳನ್ನು ರೂಪಿಸುತ್ತಾರೆ. ಈ ಗುರಿಯು ಸಾಲ ವ್ಯವಸ್ಥೆಯನ್ನು ಮಾಡಿಕೊಳ್ಳುವುದಾದಾಗ ಅದು ಸಾಲ ಸಹಕಾರಿ ಸಂಘವಾಗುತ್ತದೆ.

ಭಾರತದಲ್ಲಿ ಸಹಕಾರಿ ಸಂಘಗಳ ವ್ಯಾಪ್ತಿ ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಅಗಾಧವಾಗಿ ಬೆಳೆದಿದೆ. ಅದರದ್ದೇ ಆದ ಆಕೃತಿ, ಕಾರ್ಯ ಹಾಗೂ ಸಾಧನೆಗಳನ್ನು ಸಾಧಿಸಿವೆ. ಈ ನಿಟ್ಟಿನಲ್ಲಿ ಪ್ರಾಥಮಿಕ ಸಹಕಾರಿ ಬ್ಯಾಂಕು ಗ್ರಾಮೀಣ ರೈತರ ಪಾಲಿಗೆ ಉತ್ತಮ ಸೇವೆಯನ್ನು ಸಲ್ಲಿಸುತ್ತವೆ. ಆದರೆ, ಈ ಬ್ಯಾಂಕುಗಳು ಸ್ಥಳೀಯವಾಗಿ ಕಾರ್ಯನಿರ್ವಹಿಸುವಾಗ ಕುಂಡುಬರುವ ಮುಖ್ಯ ಸಮಸ್ಯೆಯೆಂದರೆ, ಸಾಲ ಮರುಪಾವತಿ.

ಸಾಲ ಮರುಪಾವತಿಗೆ ಆಂತರಿಕ ಸಾಂಸ್ಥಿಕ ಅಂಶಗಳು, ಬಾಹ್ಯ ಕೃಷಿ ಸಮುದಾಯದ ಅಂಶಗಳು ಕಾರಣವಾಗಿರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು, ಬೆಳ್ತಂಗಡಿ ತಾಲೂಕಿನಲ್ಲಿ ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ವಿಶ್ಲೇಷಣೆಯನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಬ್ಯಾಂಕುಗಳ ಆಂತರಿಕ ಅಂಶಗಳನ್ನು ವಿಶ್ಲೇಷಿಸಿದ ಬಳಿಕ ಸದಸ್ಯ ಕೃಷಿಕರ ಸಮೀಕ್ಷೆಯನ್ನು ಮಾಡಲಾಯಿತು.

ಈ ಅಧ್ಯಯನದ ಮುಖ್ಯ ಉದ್ದೇಶ:

1) ಕೃಷಿ ಸೇವಾ ಸಹಕಾರಿ ಸಂಘಗಳ ಸಾಂಘಿಕ ಸಾಮರ್ಥ್ಯವನ್ನು ವಿಶ್ಲೇಷಿಸುವುದು

2) ಕೃಷಿ ಸೇವಾ ಸಹಕಾರಿ ಸಂಘಗಳ ಕಾರ್ಯ ನಿರ್ವಹಣಾ ಸಾಮರ್ಥ್ಯವನ್ನು ವಿಶ್ಲೇಷಿಸುವುದು

3) ಗ್ರಾಮಮಟ್ಟದಲ್ಲಿ ವ್ಯವಸಾಯ ಸಹಕಾರಿ ಸಂಘಗಳ ಧನಾತ್ಮಕ ಹಾಗೂ ಋಣತ್ಮಾಕ ಅಂಶಗಳನ್ನು ಪರಿಶೀಲಿಸುವುದು

4) ಸದಸ್ಯರಿಗೆ ಕೃಷಿ ಸಹಕಾರಿ ಸಂಘಗಳಿಂದ ದೊರಕುತ್ತಿರುವ ಸೌಲಭ್ಯಗಳನ್ನು ವಿಶ್ಲೇಷಿಸುವುದು

5) ವ್ಯವಸಾಯ ಸಹಕಾರಿ ಸಂಘಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸುವುದು

ಬೆಳ್ತಂಗಡಿ ತಾಲೂಕಿನಲ್ಲಿ 22 ಪ್ರಾಥಮಿಕ ಸಹಕಾರಿ ಬ್ಯಾಂಕುಗಳಿದ್ದು, ಇದರಲ್ಲಿ 14 ಬ್ಯಾಂಕುಗಳು ಅಧ್ಯಯನಕ್ಕೆ ಮಾದರಿ ಬ್ಯಾಂಕುಗಳಾಗಿ ಆಯ್ಕೆಮಾಡಲಾಗಿದೆ. ಈ ಬ್ಯಾಂಕುಗಳ ಆಂತರಿಕ ಸಾಮರ್ಥ್ಯವನ್ನು ಸದಸ್ಯರ ಹೆಚ್ಚಳದರ, ಪಾಲು ಬಂಡವಾಳದ ಹೆಚ್ಚಳದ ದರ, ಠೇವಣಿ ಸಂಗ್ರಹಣೆ, ನೀಡಿರುವ ಸಾಲ, ಬಾಕಿಯಿರುವ ಸಾಲ, ಸಾಲ ವಸೂಲಾತಿ ಮೊದಲಾದ ಅಂಶಗಳ ಆಧಾರದಲ್ಲಿ ವಿಶ್ಲೇಷಿಸಲಾಗಿದೆ. ಬಾಹ್ಯ ಅಂಶಗಳ ವಿಶ್ಲೇಷಣೆಯನ್ನು 50 ಮಾದರಿ ಸದಸ್ಯ ಕೃಷಿಕರ ಸಮೀಕ್ಷೆಯ ಮೂಲಕ ಮಾಡಲಾಗಿದೆ.

ಅಧ್ಯಯನದ ಪ್ರಮುಖ ಅಂಶಗಳು

ಈ ಅಧ್ಯಯನದಲ್ಲಿ ಕಂಡುಬಂದಿರುವ ಪ್ರಮುಖ ಅಂಶಗಳೆಂದರೆ,

1) ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳು ಗ್ರಾಮೀಣ ಪ್ರದೇಶದಲ್ಲಿ ರೈತರ ಹಣಕಾಸು ವ್ಯವಹಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

2) ಸಹಕಾರಿ ಬ್ಯಾಂಕುಗಳ ಸದಸ್ಯರ ಹೆಚ್ಚಳ ಹಾಗೂ ಪಾಲು ಬಂಡವಾಳದ ಹೆಚ್ಚಳ ಗಮನಾರ್ಹವಾಗಿದ್ದು, ಈ ದೃಷ್ಟಿಯಲ್ಲಿ ಬ್ಯಾಂಕುಗಳು ಅಭಿವೃದ್ಧಿ ಹೊಂದುತ್ತಿವೆ.

3) ಸಹಕಾರಿ ಬ್ಯಾಂಕುಗಳು ನಾನಾರೀತಿಯಲ್ಲಿ ಠೇವಣಿ ಸಂಗ್ರಹ ಮಾಡಿ, ಅಗತ್ಯವಿರುವ ರೈತರಿಗೆ ಸಾಲವನ್ನು ಒದಗಿಸುತ್ತಿವೆ. ಠೇವಣಿಗಳಲ್ಲಿ ಮುಖ್ಯವಾಗಿ, ಉಳಿತಾಯ ಠೇವಣಿ, ನಿರಖು ಠೇವಣಿ, ಮಾಸಿಕ ಠೇವಣಿ, ಭದ್ರತಾ ಠೇವಣಿ, ಕಡ್ಡಾಯ ಠೇವಣಿ ಆಗಿರುತ್ತದೆ.

4) ರೈತರಿಗೆ ವ್ಯವಸಾಯಕ್ಕೆ ಅಗತ್ಯವಾದ ಹಣಕಾಸು ವ್ಯವಸ್ಥೆಯನ್ನು ಈ ಬ್ಯಾಂಕುಗಳು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುತ್ತವೆ.

5) ಕೃಷಿಕರಿಗೆ ಈ ಬ್ಯಾಂಕುಗಳು ಅಲ್ಪಾವಧಿ, ದೀರ್ಘಾವಧಿ ಹಾಗೂ ಮಧ್ಯಮಾವಧಿ ಸಾಲಗಳನ್ನು ಒದಗಿಸುತ್ತವೆ. ಮಾತ್ರವಲ್ಲದೆ, ಬೆಳೆಸಾಲ ಅಥವಾ ಉತ್ಪತ್ತಿ ಈಡಿನ ಸಾಲ, ಚಿನ್ನಾಭರಣ ಸಾಲ, ಗೃಹ ಸಾಲ, ವಾಹನ ಸಾಲಗಳನ್ನು ಒದಗಿಸುತ್ತವೆ.

6) ಬ್ಯಾಂಕುಗಳ ಸಾಲ ವಸೂಲಾತಿ ದರವು ಉತ್ತಮವಾಗಿದ್ದು ರೈತರು ಸಾಲವನ್ನು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ಸೂಚಿಸುತ್ತದೆ.

7) ಮಧ್ಯಮ ಹಾಗೂ ಸಣ್ಣರೈತರು ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕಿನ ಸಾಲವನ್ನು ಹೆಚ್ಚು ಪಡೆಯುತ್ತಿರುತ್ತಾರೆ. ಈ ರೈತರು ಇತರ ಮೂಲಗಳನ್ನೂ ಅವಲಂಬಿಸಿರುತ್ತಾರೆ.

8) ದುಡಿಯುವ ಬಂಡವಾಳ ಹಾಗೂ ಸಿಬ್ಬಂದಿ ವೇತನದ ಅನುಪಾತವನ್ನು ಗಮನಿಸಿದಾಗ ಸಿಬ್ಬಂದಿ ಉತ್ಪತ್ತಿಯು ಉತ್ತಮವಾಗಿದೆ.

9) ರೈತರು ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕಿನ ವ್ಯವಹಾರದ ಬಗ್ಗೆ ತೃಪ್ತಿಯನ್ನು ಹೊಂದಿರುತ್ತಾರೆ.

10) ಎಲ್ಲಾ ಸಹಕಾರಿ ಬ್ಯಾಂಕುಗಳು ಲಾಭಾಂಶವನ್ನು ಗಳಿಸುತ್ತಿದ್ದು ಸದಸ್ಯರಿಗೆ ಅದರ ಭಾಗವನ್ನು ನೀಡುತ್ತಿದೆ.

ಉಪಸಂಹಾರ

ಆಂತರಿಕ ಹಾಗೂ ಬಾಹ್ಯಾಂಶಗಳನ್ನು ಗಮನಿಸಿದಾಗ ಪ್ರಾಥಮಿಕ ಕೃಷಿ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಎಂದಾದರೂ, ಈ ಅಂಶಗಳನ್ನು ಸಾಮಾಜಿಕ ಹಾಗೂ ರಾಜಕೀಯ ಅಂಶಗಳ ಹಿನ್ನಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಸಾಮಾಜಿಕವಾಗಿ ಎಲ್ಲಾ ಜಾತಿ ವರ್ಗಗಳ ರೈತರು ಈ ಬ್ಯಾಂಕುಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದು ಮುಖ್ಯ. ಹಾಗೂ ರಾಜಕೀಯವಿಲ್ಲದೆ ಕಾರ್ಯನಿರ್ವಹಣೆ ಮಾಡುವುದು

ಮುಖ್ಯ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಹಕಾರಿ ಸಂಘಗಳು ಬಲಿಷ್ಠವಾಗಿ ಬೆಳೆದು ರೈತರ ಅಭಿವೃದ್ಧಿಗೆ ಸಹಕಾರಿ ತತ್ವದ ಆಧಾರದಲ್ಲಿ ಕಾರ್ಯನಿರ್ವಹಿಸಬೇಕಾಗಿದೆ. ಬದಲಾದ ಪರಿಸ್ಥಿತಿಯಲ್ಲಿ ವಾಣಿಜ್ಯ ಬ್ಯಾಂಕುಗಳ ಜೊತೆಗೆ ಸ್ಥಳೀಯವಾಗಿ ಈ ಸಹಕಾರಿ ಬ್ಯಾಂಕುಗಳು ರೈತರಿಗೆ ಸಾಂಸ್ಥಿಕ ಸಾಲ ವ್ಯವಸ್ಥೆಯನ್ನು ರೂಪಿಸುವುದು ಅಗತ್ಯವಾಗಿದೆ.

IIIIIII

<u>ಗ್ರಂಥಸೂಚಿ</u>

English Books:

1. Basavaraj S.Benni (1999) "Dairy Co-operative Societies in Karnataka" Ph.D thesis.
2. Bhuruuali Anil (2003) "Rural Co-operatives and Economic Development" Sarup and Son's New Delhi.
3. Chittaranjan H. – Chief Editor (2005) "A Hand Book Karnataka, Abhimaani Prakashana # 2/4, Dr. Rajakumar Road, Rajajinagar, Bangalore
4. Kulakarni P.B (1991) "Distartions in Co-operation Himalaya Publishing – New Delhi.
5. Mishra S.K. V.K.Puri (2006): 'Indian Economy'
6. Shameema M. (2005) "Evaluation of Credit Cooperatives" Ph.D thesis.
7. Srinivas H. Rao (2004) "Co-operative Banking in New Millennium J.L.Kumar for Anmoi Publications Pvt. Ltd., New Delhi
8. Sripathi Kalluraya, Shameena Mehtab, Jayavanth Nayak (2005) "Economic Development of India".
9. Sundaram KPM and Ruddar Datt (1989)'Indian Economy', S.Chand and Company Pvt.Ltd. New Delhi.

Journals: (ನಿಯತಕಾಲಿಕೆಗಳು)

1. Archana and Mathur, Surajit Das, Subhalakshmi Sircar (2006) Status of Agriculture in India Trends and Prospects, Economics and Political Weekly, December 30, pp.5327-5336.
2. Census of India (2001), Karnataka State PLCN:29 Directorate of Census Operations, Karnataka.
3. James Mathew (2006) Strengthening Cooperatives: An Analysis, Southern Economists, September 15, pp.18-20
4. Jery Josephine Thanarathnam (2006) Working of Primary Agriculture Co-operative Bank: A Case Study Southern Economist, September 1, pp.29-34.
5. Kausik Gupta, Chameli Pandit (2007) Importance of Fishermen's Cooperatives, Economics and Political weekly, March 10, pp.825-827.

6. Naidu V.B. and A.Siva Sankar (2007) Factors Influencing Agriculutral Credit: A Case Study Souther Economist, January 16, pp.28-30.
7. Rakesh Mohan (2006) Agricultural Credit in India: Status, Issues and Future Agenda, Financing Agricultural –A National Farm and Banking Digest of Agricultural Finance Corporation Ltd., Apri-May pp.3-16.
8. Shankar Ambhore (2007) Primary Agricultural Co-operative Credti Soceities; Micro Study, Southern Economist, March 1, pp.14-16
9. Vasudevulu C. Naid and Rukmini Reddy (2007 Agricultural Credit in India: An Analysis, Southern Economists, Feb., 15, pp. 11-14

ಕನ್ನಡ ಪುಸ್ತಕಗಳು:

1. ಒಡೆಯರ್ ಡಿ.ಹೆಗ್ಗಡೆ (1995) "ಆರ್ಥಿಕಚಿಂತನೆಯ ಹೊಂಬೆಳಕು" ಸುನಿಲ್ ಪ್ರಕಾಶನ, ಬೆಂಗಳೂರು

2. ಎಚ್ಚಾರ್ಕೆ (2006–07) " ಭಾರತದ ಆರ್ಥಿಕ ಅಭಿವೃದ್ಧಿ" ಸ್ವಪ್ನ ಬುಕ್ ಹೌಸ್, ಬೆಂಗಳೂರು

3. ಎಚ್ಚಾರ್ಕೆ (2006–07) "ಭಾರತದ ಆರ್ಥಿಕ ವ್ಯವಸ್ಥೆ" ಸ್ವಪ್ನ ಬುಕ್ ಹೌಸ್ ಬೆಂಗಳೂರು

4. ಪ್ರಕಾಶಂ ಜಿ. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಬೆಂಗಳೂರು– ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2003–04 ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ.ಮಂಗಳೂರು.

5. ಪ್ರಭಾಕರ ಶಿಶಿಲ, ಪ್ರೊ. ಕುಮಾರಸ್ವಾಮಿ(2005) : "ಭಾರತದ ಆರ್ಥಿಕ ಅಭಿವೃದ್ಧಿ" ಮಂಗಳಾ ಪ್ರಕಾಶನ, ಮಂಗಳೂರು

****

ಪ್ರಶ್ನಾವಳಿ

1. ಸಾಮಾನ್ಯ ಮಾಹಿತಿ

ಹೆಸರು :

ವಿಳಾಸ :

ಪ್ರಾಯ :

ವಿದ್ಯಾಭ್ಯಾಸ : ಪ್ರಾಥಮಿಕ/ಪ್ರೌಢ/ಕಾಲೇಜು/ಇತರ

ಮನಯಲ್ಲಿರುವ ಒಟ್ಟು ಜನಸಂಖ್ಯೆ

ಮಕ್ಕಳು	ಗಂಡಸರು	ಹೆಂಗಸರು	ಒಟ್ಟು

2. ಕೃಷಿ ಮಾಹಿತಿ

ಒಟ್ಟು ಭೂಮಿ :

ಕೃಷಿ ಭೂಮಿ :

ಭೂಮಿ : ಪಿತ್ರಾರ್ಜಿತ/ಸ್ವಯಾರ್ಜಿತ/ದರಖಾಸ್ತು/ಅಕ್ರಮಸಕ್ರಮ

ಮನೆ : ಪಿತ್ರಾರ್ಜಿತ/ಸ್ವಯಾರ್ಜಿತ/ದರಖಾಸ್ತು/ಅಕ್ರಮಸಕ್ರಮ

ಬೇಸಾಯ ಪದ್ಧತಿ : ಒಂದು ಬೆಳೆ/ ಎರಡು ಬೆಳೆ/ ಮಿಶ್ರ ಬೇಸಾಯ

ಬೆಳೆಗಳು	ವಿಸ್ತೀರ್ಣ	ಉತ್ಪಾದನೆ	ಆದಾಯ

3. ವೆಚ್ಚಗಳು

ನೀರಾವರಿ :

ಗೊಬ್ಬರ :

ಬೀಜಗಳು :

ಕಾರ್ಮಿಕರು :

ಇತರ :

ಒಟ್ಟು :

4. **ಕೃಷಿ ಅಭಿವೃದ್ಧಿ ಕಾರ್ಯಗಳೇನು ಮಾಡಿದ್ದೀರಿ?**

5. **ಹಣಕಾಸು ವ್ಯವಸ್ಥೆಯೇನು?**

6. **ಸಾಲದ ವಿವರ**

ಸಾಲಪಡೆದುಕೊಂಡ ಮೂಲ	ಮೊತ್ತ	ಬಡ್ಡಿ	ಮರುಪಾವತಿ ಆದ ಸಾಲ	ಬಾಕಿ

7. **ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸಾಲ ನೀಡುವ ಕಾರ್ಯಕ್ರಮದ ಬಗ್ಗೆ ಕೃಷಿಕ ಸದಸ್ಯರ ಅಭಿಪ್ರಾಯ.**

ವರ್ಗ	ಸಂಖ್ಯೆ	ಅತ್ಯುತ್ತಮ	ಉತ್ತಮ	ಸಾಧಾರಣ	ಸಮರ್ಪಕವಾಗಿಲ್ಲ
ದೊಡ್ಡರೈತರು					
ಮಧ್ಯಮ ರೈತರು					
ಸಣ್ಣ ರೈತರು					

8. **ಸಂಘಟನೆ**

ಅಧ್ಯಕ್ಷರ ಆಯ್ಕೆ : ಮತದಾನ/ಅವಿರೋಧ

ಯಾರಾದರು ಸದಸ್ಯತನ ರದ್ದು ಪಡಿಸಿದ್ದಾರೆಯೆ? ಹೌದು/ಇಲ್ಲ

ಸಹಕಾರಿ ಸಂಘಗಳ ಕಾರ್ಯನಿರ್ವಹಣೆಯಲ್ಲಿ ನಿಮ್ಮ ಪಾತ್ರ:

ಸಭೆಗಳಲ್ಲಿ ಪಾಲ್ಗೊಳ್ಳುವಿಕೆ/ಸಲಹೆಗಳನ್ನು ನೀಡುವುದು

ಸಭೆಗಳು : ಸಾಪ್ತಾಹಿಕ/ಮಾಸಿಕ/ವಾರ್ಷಿಕ

9. **ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಮಾಹಿತಿಗಳು**

1. ಯಾವಾಗಿನಿಂದ ಕೃಷಿ ಸಹಕಾರಿ ಸಂಘದ ಸದಸ್ಯರು?
2. ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿಂದ ಪ್ರಯೋಜನವಾಗಿದೆಯೇ?
3. ಸಾಲ ಮರುಪಾವತಿ ವಿಧಾನ ಯಾವ ರೀತಿ?
4. ಪ್ರಾಥಮಿಕ ಸಹಕಾರಿ ಸಂಘದಿಂದ ಇನ್ನೂ ಯಾವ ರೀತಿಯ ಸಹಾಯವನ್ನು ಬಯಸುತ್ತೀರಿ?
5. ಪ್ರಾಥಮಿಕ ಕೃಷಿ ಸಹಕಾರಿ ಸಂಘವು ಯಾವ ರೀತಿಯಲ್ಲಿ ಸಹಕಾರಿಯಾಗಿದೆ?
6. ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಅಭಿವೃದ್ಧಿಗೆ ಸಲಹೆಗಳೇನು?
7. ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಸಾಲ ವ್ಯವಸ್ಥೆಯಲ್ಲಿರುವ ನ್ಯೂನತೆಗಳೇನು?
8. ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಕಾರ್ಯನಿರ್ವಹಣೆಯಲ್ಲಿ ನಿಮ್ಮ ಪಾತ್ರವೇನು?

IIIIIIIIII